
ರಂಜನೆ ಬೋಧನೆ ಪ್ರಚೋದನೆ

...ತ್ರಿ ಲಂಕೇಶ್

ಮೇ 21, 2008 ರೂ. 12/-



...ಳ-ಕಾಂಗ್ರೆಸ್ ಸ್ಕೆಚ್

ರೆಡ್ಡಿ ಧೂಳ್!

ಕ್ಷೇತ್ರ ಸಮೀಕ್ಷೆ

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಕೊಪ್ಪಳ, ರಾಯಚೂರು



...ಿಂಗಾಯತರು ಮೂರ್ಖರು'

-ಅನಂತಕುಮಾರ್

ಮೋದಿ ಮಾದರಿ ಅಭಿವೃದ್ಧಿ ನರಕದ ದಾರಿ

"ನಿಮ್ಮ ಕರ್ನಾಟಕ ಎಂದೂ ಗುಜರಾತ್ ಆಗಲಾರದು ಎಂಬ ಭರವಸೆ ನನಗಿದೆ. ಏಕೆಂದರೆ ನಾನು ಬೆಂಗಳೂರಿಗೆ ಬಂದಾಗ ಇಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಒಟ್ಟಿಗೆ ಒಂದೇ ಬಸ್ಸಿನಲ್ಲಿ ಪ್ರಯಾಣ ಮಾಡುವುದನ್ನು ನೋಡಿದೆ. ಅಷ್ಟು ಮಾತ್ರವಲ್ಲ, ಫುಟ್‌ಪಾತ್‌ನಲ್ಲಿ ನಡೆದುಕೊಂಡು ಬರುವಾಗಲೂ ಎಲ್ಲಾ ಧರ್ಮದವರೂ ಒಟ್ಟಿಗೆ ನಡೆದುಕೊಂಡು ಹೋಗುತ್ತಿದ್ದರು. ಅಲ್ಲಲ್ಲಿ ಕಾಣುತ್ತಿದ್ದ ಜಾಹೀರಾತಿನಲ್ಲೂ ಹಿಂದೂ ಮುಸ್ಲಿಮರಿಬ್ಬರೂ ಇದ್ದರು. ಇವೆಲ್ಲಾ ನೋಡಿ ನನಗೆ ಅತ್ಯಂತ ಸಂತೋಷವೂ ಆಯಿತು. ಕರ್ನಾಟಕ ಎಂದೆಂದಿಗೂ ಮತ್ತೊಂದು ಗುಜರಾತ್ ಆಗಲಾರದು ಎಂದು ಖಾತರಿಯೂ ಆಯಿತು." ಹೀಗೆಂದು ಯಾರಾದರೂ ಹೇಳಿದರೆ ನಿಮಗೇನನಿಸುತ್ತದೆ? ಸಂತೋಷವಾಗುತ್ತದೆಯೋ? ವಿಷಾದವಾಗುತ್ತದೆಯೋ?

ಇತ್ತೀಚೆಗೆ ಬೆಂಗಳೂರಿನಲ್ಲಿ "ಗುಜರಾತ್ ಮಾದರಿ ಅಭಿವೃದ್ಧಿ ಎಂದರೇನು" ಎಂಬ ವಿಷಯದ ಬಗ್ಗೆ ನಡೆದ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ಖ್ಯಾತ ಚಿಂತಕ ಪ್ರೊ. ಘನಶ್ಯಾಂ ಷಾ ಮತ್ತು ಲೇಖಕಿ ಶೀಭಾ ಜಾರ್ಜ್ ಹಾಗೂ ಜಾಕಿಯಾರವರು ತಮ್ಮ ಭಾಷಣದಲ್ಲಿ ಒಬ್ಬರ ನಂತರ ಒಬ್ಬರು ಇದೇ ಬಗೆಯ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರೆ ವೇದಿಕೆಯ ಮೇಲೆ ಕೂತಿದ್ದ ನನ್ನ ಮೈಯಲ್ಲಿ ನಡುಕ ಹುಟ್ಟಿತು. ಹಿಂದೂ-ಮುಸ್ಲಿಮರು ಒಟ್ಟಿಗೆ ಒಂದೇ ಬಸ್ಸಿನಲ್ಲಿ ಪ್ರಯಾಣ ಮಾಡುವುದೇ ಸಂತೋಷದ ಸುದ್ದಿಯಾಗುವುದಾದರೆ ಗುಜರಾತ್‌ನ ಜನಜೀವನ ಹೇಗಿರಬೇಕು? ಗುಜರಾತ್‌ನಲ್ಲಿ ಆಗಿರುವ ಎಲ್ಲಾ ವಿನಾಶಗಳಿಗಿಂತ ಅತಿ ಹೆಚ್ಚು ಅನಾಹುತವಾಗಿರುವುದು ವಿಶ್ವಾಸ ವಿಧ್ವಂಸದಿಂದ. ಗುಜರಾತಿನಲ್ಲಿ ಇದ್ದುಕೊಂಡು ಈ ಬೆಳವಣಿಗೆಗಳನ್ನು ಅನುಭವಿಸಿರುವ ಮತ್ತು ಅದರ ತಳಸ್ಪರ್ಶಿ ವಿಶ್ಲೇಷಣೆ ಮಾಡುತ್ತಿದ್ದ ಈ ಗೆಳೆಯರ ಮಾತುಗಳನ್ನು ಕೇಳಿದ ಯಾರೇ ಆದರೂ ಮೋದಿ ಮಾದರಿ ಎಂದರೆ ನರಕದ ದಾರಿ ಎಂಬ ತೀರ್ಮಾನಕ್ಕೆ ಸುಲಭವಾಗಿ ಬರಬಹುದಾಗಿತ್ತು.



ಇವರು ಯಾರೂ 2002ರ ಗುಜರಾತ್ ಹತ್ಯಾಕಾಂಡದ ಭೀಭತ್ಸ ವಿವರಣೆಗಳನ್ನು ನೀಡಲು ಹೋಗಲಿಲ್ಲ. ಬದಲಿಗೆ ಹಿಂದುತ್ವದ ಹೆಸರಲ್ಲಿ ಮತ್ತು ಮೋದಿ ಮಾದರಿ ಅಭಿವೃದ್ಧಿಯ ಹೆಸರಲ್ಲಿ ಅಲ್ಲಿ ಇಂದು ಹಿಂದೂಗಳನ್ನು ಒಳಗೊಂಡಂತೆ ಸಾಮಾನ್ಯ ಜನರ ಪರಿಸ್ಥಿತಿ ಹೇಗಿದೆ ಎಂದು ವಿವರಿಸುತ್ತಿದ್ದರು.

ಇಂದು ಗುಜರಾತಿನ ಪ್ರತಿ ನಗರದಲ್ಲೂ ಒಂದು ಬಾರ್ಡರ್ ಇದೆಯಂತೆ! ಅದು ಭಾರತ-ಪಾಕಿಸ್ತಾನದ ಸರಹದ್ದಿನಲ್ಲಿರುವ ಪಟ್ಟಣಗಳಲ್ಲಲ್ಲ! ಬದಲಿಗೆ ಪ್ರತಿ ಊರುಗಳಲ್ಲಿ ಮತ್ತು ಪ್ರತಿಯೊಬ್ಬರ ಮನಸ್ಸುಗಳಲ್ಲಿ, ಹಿಂದೂಗಳೆಲ್ಲಾ ಒಂದು ಕಡೆ ವಸತಿ ಮಾಡಿಕೊಂಡಿದ್ದರೆ ಮುಸ್ಲಿಮರ ಗೆಟ್ಟೊಗಳೇ ಪ್ರತ್ಯೇಕ. ಹೀಗಾಗಿ ಅವೆರಡರ ನಡುವೆ ಅಘೋಷಿತ ಬಾರ್ಡರ್‌ಗಳೇ ಸೃಷ್ಟಿಯಾಗಿವೆ. ಮಾತ್ರವಲ್ಲ ಅದು ಒಂದು ಬಗೆಯಲ್ಲಿ ಜನರ ಪ್ರಜ್ಞೆಯಲ್ಲಿ ಬೇರು ಬಿಡುತ್ತದೆ. ಭೌಗೋಳಿಕ ಬಾರ್ಡರ್‌ಗಳನ್ನು ಮೀರಬಹುದು. ಆದರೆ ಪ್ರತಿಯೊಬ್ಬರ ಮನಸ್ಸಿನಲ್ಲಿ ಸೃಷ್ಟಿಯಾಗಿರುವ ಈ ಬಾರ್ಡರ್‌ಗಳು ಅಳಿಯುವುದು ಹೇಗೆ? ಅದು ಅಳಿಯದೇ ಸಹಜೀವನ ಹೇಗೆ?

'ಇಡೀ ಭಾರತವೇ ನಾಳೆ ಅನುಸರಿಸಬೇಕಾದ ಅಭಿವೃದ್ಧಿ ಮಾದರಿ' ಎಂದು ಬಿಜೆಪಿ ಕೊಚ್ಚಿಕೊಳ್ಳುವ ಗುಜರಾತಿನಲ್ಲಿ ಇಂದು ಜನಸಾಮಾನ್ಯರಿಗೆ ಸಿಗುವ ಸರಾಸರಿ ಕೂಲಿ ಎಷ್ಟು ಗೊತ್ತೆ? ದಿನಕ್ಕೆ 35 ರೂಪಾಯಿಗಳು ಮಾತ್ರ. ಇದು ಜಾರ್ಖಂಡ್ ಮತ್ತು ಬಿಹಾರಿಗಳಿಗಿಂತಲೂ ಕಡಿಮೆಯಾಗಿದ್ದು ಅಭಿವೃದ್ಧಿಯ ಹೆಸರಲ್ಲಿ ಮೋದಿ ಸದ್ದಿಲ್ಲದೆ ಮಾಡುತ್ತಿರುವ ಹತ್ಯಾಕಾಂಡವೆಂಬುದು ಅರ್ಥವಾಗುತ್ತದೆ.

ಚಾರ್ವಾಕ

ಶಿವಸುಂದರ್

ಗುಜರಾತಿನ ಅಳಂಗ್‌ನಲ್ಲಿ ಹಡಗು ಒಡೆಯುವ ಉದ್ಯಮವನ್ನು ಸ್ಥಾಪಿಸಿರುವ ಮೋದಿ ಅದಕ್ಕೆ ಎಸ್‌ಇಜೆಡ್ ಸ್ಥಾನಮಾನವನ್ನು ನೀಡಿ ಎಲ್ಲಾ ಬಗೆಯ ಸಾಮಾಜಿಕ ಜವಾಬ್ದಾರಿಯಿಂದಲೂ ಮುಕ್ತಗೊಳಿಸಿದ್ದಾನೆ. ಹೀಗಾಗಿಯೇ ಪ್ರಪಂಚದಲ್ಲಿ ಎಲ್ಲೂ ಅಸ್ಬೆಸ್ಟಾಸ್ ಇರುವ ಹಡಗನ್ನು ಒಡೆಯದಂತೆ ಪರಿಸರ ನಿರ್ಬಂಧವಿದ್ದರೂ, ಪಕ್ಕದ ಬಾಂಗ್ಲಾದಲ್ಲೂ ಅವಕಾಶ ಕೊಡದಿದ್ದರೂ, ಅಳಂಗ್‌ನಲ್ಲಿ ಅದಕ್ಕೆ ಮುಕ್ತ ಪರವಾನಗಿ ನೀಡಲಾಗಿದೆ. ಇದರಿಂದಾಗಿ ಹಡಗು ಒಡೆಯುವ ಕಾರ್ಮಿಕರು ಬಗೆಬಗೆಯ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರಲ್ಲದೆ ಪರಿಸರವೂ ಸಂಪೂರ್ಣವಾಗಿ ಕಲುಷಿತಗೊಂಡು ಮೀನುಗಾರರ ಉದ್ಯಮವೂ ತೀರದ ಸಂಕಷ್ಟಕ್ಕೆ ಒಳಗಾಗಿದೆ. 'ಮೋದಿಯೇ ನನ್ನ ಆದರ್ಶ' ಎಂದಿದ್ದ ಕರ್ನಾಟಕದ ಆಗಿನ ಚೆಡ್ಡಿ ಮೀನುಗಾರಿಕಾ ಮಂತ್ರಿ ನಾಗರಾಜ ಶೆಟ್ಟಿ ಉಡುಪಿಯ ಬಳಿ ಒಂದು ಹಡಗು ಒಡೆಯುವ ಕಾರ್ಖಾನೆ ತೆರೆಯುವುದಾಗಿ ಹೇಳಿದ್ದ!

ಇವೆಲ್ಲಕ್ಕಿಂತಲೂ ಹೆಚ್ಚಾಗಿ ಗುಜರಾತಿನ ಮಹಿಳೆಯರ ಪರಿಸ್ಥಿತಿಯ ಬಗ್ಗೆ ನೀಡಿದ ವರದಿಗಳು ದಿಗ್ಭ್ರಾಂತಿಗೊಳಿಸುವಂತಿತ್ತು. ಅಭಿವೃದ್ಧಿಶೀಲ ರಾಜ್ಯಗಳಲ್ಲೇ ಅತಿ ಕಡಿಮೆ ಲಿಂಗಾನುಪಾತವಿರುವ ರಾಜ್ಯ ಗುಜರಾತ್. ಪ್ರತಿ ಸಾವಿರ ಗಂಡಸರಿಗೆ ಕೇವಲ 820 ಮಹಿಳೆಯರು! ಅಲ್ಲಿನ ಮಹಿಳಾ ಸಂಘಟನೆಗಳು ನಡೆಸಿರುವ ಮತ್ತೊಂದು ಅಧ್ಯಯನದ ಪ್ರಕಾರ ಅಹಮದಾಬಾದಿನಂತಹ ಅಭಿವೃದ್ಧಿ ಹೊಂದಿದ ನಗರದಲ್ಲಿ ಇನ್ನೂ ಕಡಿಮೆ ಆಗಿದ್ದು ಅಲ್ಲಿ ಪ್ರತಿ ಸಾವಿರ ಪುರುಷರಿಗೆ ಕೇವಲ 650 ಮಹಿಳೆಯರಿದ್ದಾರೆ. ಇಷ್ಟೊಂದು ಕಡಿಮೆ ಪ್ರಮಾಣ ಪ್ರಾಯಶಃ ದೇಶದ ಯಾವುದೇ ನಗರದಲ್ಲೂ ಇರಲಿಕ್ಕಿಲ್ಲ. ಇದರರ್ಥವಿಷ್ಟೆ. ಹೆಣ್ಣು ಭ್ರೂಣ ಹತ್ಯೆ ಮತ್ತು ಮಹಿಳೆಯರ ಮೌನ ಕಗ್ಗೊಲೆಗಳು ಮೋದಿಯ ಗುಜರಾತಿನಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಸಂಭವಿಸುತ್ತಿವೆ. ಗುಜರಾತಿನ ಕಾಲೇಜುಗಳಲ್ಲಿ ಪ್ರತಿ ನಿತ್ಯ ಹುಡುಗಿಯರ ಮೇಲೆ ಅತ್ಯಾಚಾರಗಳು ಸಂಭವಿಸುತ್ತದಂತೆ. ಅದು ಒಂದು ಶೋಷಣೆ, ಮಹಿಳೆಯರ ಸ್ವಾಭಿಮಾನದ ಉಲ್ಲಂಘನೆ, ಅಪರಾಧ ಎಂದು ಖಂಡಿಸಲಾಗದಷ್ಟು ಮಟ್ಟಿಗೆ ಗುಜರಾತ್ ಸಮಾಜದಲ್ಲಿ ಪುರುಷಪ್ರಧಾನ ಮೌಲ್ಯಗಳು ಮತ್ತು ಹಿಂದುತ್ವವಾದಿ ತಿಳಿವಳಿಕೆ ಪ್ರಭಾವಿಸಿದೆ ಎಂದರೆ ಮೋದಿ ಮಾದರಿ ಮಹಿಳೆಯರಿಗೆ ಏನನ್ನು ನೀಡುತ್ತದೆ ಎಂಬುದು ಸ್ಪಷ್ಟ.

ಈ ನಿಟ್ಟಿನಲ್ಲಿ 2004ರಲ್ಲಿ ಪ್ರಕಟವಾದ ಗುಜರಾತ್ ಮಾನವಾಭಿವೃದ್ಧಿ ವರದಿ (Gujarat Human Development Report, 2004) ಯು ಮೋದಿ ಆಡಳಿತ ಪ್ರಾರಂಭವಾದ ನಂತರ ಅಲ್ಲಿನ ಜನರ ಬದುಕು ಹೇಗಿದೆ ಎಂಬುದನ್ನು ತೆರೆದಿಡುತ್ತದೆ. ಅಹಮದಾಬಾದಿನ ಎರಡು ಅಧ್ಯಯನ ಸಂಸ್ಥೆಗಳಲ್ಲಿ ಸಂಶೋಧನೆ ನಡೆಸುತ್ತಿರುವ ಇಂದಿರಾ ಹರ್ವೆ ಮತ್ತು ದರ್ಶಿನಿ ಮಹದೇವಿ ಎಂಬ ಆರ್ಥಿಕ ತಜ್ಞರು. ಗುಜರಾತಿಗಳ ಆರ್ಥಿಕ ಸ್ಥಿತಿಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿದ ಇವರ ತಂಡವು ಹಲವು ಅಂಶಗಳ ಬಗ್ಗೆ ತಾನು ಕಂಡಿದ್ದನ್ನು ಅತ್ಯಂತ ವಸ್ತುನಿಷ್ಠೆಯಾಗಿ ವರದಿ ಮಾಡಿದೆ. ಅದರ ಕೆಲವು ಪ್ರಮುಖ ಅಂಶಗಳನ್ನು "ಗುಜರಾತ್ ಮಾದರಿ ಅಭಿವೃದ್ಧಿ ಎಂದರೇನು?" ಎಂಬ ಕಿರು ಪುಸ್ತಕದಲ್ಲಿ ಪ್ರಜಾಪ್ರಭುತ್ವಕ್ಕಾಗಿ ಜನರ ಒಕ್ಕೂಟ ಪ್ರಕಟಿಸಿದೆ. ಇಲ್ಲಿ ಓದುಗರಿಗಾಗಿ ಹಲವನ್ನು ನೀಡಲಾಗಿದೆ. ಸಹಜೀವನ, ಸಮಾನತೆ ಇತ್ಯಾದಿಗಳನ್ನು ಆದರ್ಶವಾಗಿಯುಳ್ಳ ಬಸವನ ಕರ್ನಾಟಕ, ಕನಕನ ಕರ್ನಾಟಕ, ಸೂಫಿ ಸಂತರ ಕರ್ನಾಟಕ ನರಕ ಸದೃಶವಾದ ಮೋದಿ ಮಾದರಿಯ ಕರ್ನಾಟಕವಾಗಬೇಕೆ ಎಂಬುದಕ್ಕೆ ಕರ್ನಾಟಕದ ಜನ ತಕ್ಕ ಉತ್ತರ ನೀಡಬೇಕಿದೆ.

ಈ ವರದಿಗಳಲ್ಲಿ ಸ್ಪಷ್ಟವಾಗುವ ಪ್ರಮುಖ ವಿಷಯವೆಂದರೆ ದೇಶದ ಇತರೆ ಹಲವು ರಾಜ್ಯಗಳಿಗೆ ಹೋಲಿಸಿದರೆ ಗುಜರಾತಿನ ಪರಿಸ್ಥಿತಿ ಅಷ್ಟೇನು ಉತ್ತಮವಾಗಿಲ್ಲ ಎಂಬುದು. ಈ ವರದಿಗೆ ಸ್ವತಃ ನರೇಂದ್ರಮೋದಿಯೇ ಆ ರಾಜ್ಯದ ಮುಖ್ಯಮಂತ್ರಿಯಾಗಿ ಒಂದು ಸಂದೇಶವನ್ನೂ ಕಳುಹಿಸಿದ್ದು, ಅದೂ ಸಹ ಈ ವರದಿಯ ಆರಂಭದಲ್ಲಿಯೇ ಮುದ್ರಿತವಾಗಿದೆ. ಮೋದಿಯೂ ಸಹ ಹಲವು ಕ್ಷೇತ್ರಗಳಲ್ಲಿ ಗುಜರಾತ್ ಇನ್ನೂ ಹಿಂದುಳಿದಿದೆ ಎಂಬುದನ್ನೂ ಒಪ್ಪಿಕೊಳ್ಳುತ್ತಾನೆ. ವಸ್ತುಸ್ಥಿತಿ ಹೀಗಿದ್ದೂ, ಗುಜರಾತ್ ಅಭಿವೃದ್ಧಿಯ ಪಥದಲ್ಲಿ ಮುಂಚೂಣಿಯಲ್ಲಿರುವ ರಾಜ್ಯವೆಂದು ಭಾಜಪದವರು ವರ್ಣಿಸುತ್ತಿರುವುದು, ಅವರ ಸುಳ್ಳುಗಳ ಸರಮಾಲೆಗೆ ಮತ್ತೊಂದು ಸೇರ್ಪಡಿಕೆಯಲ್ಲದೆ ಮತ್ತೇನಲ್ಲ.

ದೇಶದ ಹಲವು ರಾಜ್ಯಗಳನ್ನು ಅಲುಗಾಡಿಸುತ್ತಿರುವ ಪ್ರಮುಖ ಸಮಸ್ಯೆಯೆಂದರೆ ರೈತರ ಆತ್ಮಹತ್ಯೆಗಳು. ಈ ಆತ್ಮಹತ್ಯೆಗಳು ಆಂಧ್ರಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ರಾಜಸ್ತಾನ ರಾಜ್ಯಗಳಲ್ಲಿ ಮಾತ್ರ ನಡೆದಿವೆಯೆಂದೇ ಸಾಧಾರಣವಾಗಿ ನಂಬಲಾಗಿದೆ. ಆದರೆ ಗುಜರಾತ್ ರಾಜ್ಯವೂ ಈ ಸಮಸ್ಯೆಯನ್ನು ಎದುರಿಸುತ್ತಿದೆ. ವಿಶೇಷವೆಂದರೆ ಈ ಅಂಶವನ್ನು ಹೊರಗೆಡವಲಾಗಿಲ್ಲ ಅಷ್ಟೇ. ಭರತ್‌ಸಿಂಗ್ ಜಾಲಾ ಎಂಬ ಸಾಮಾಜಿಕ ಕಾರ್ಯಕರ್ತ 2001ರ ಮೇ 4ರಂದು ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ರೈತರ ಆತ್ಮಹತ್ಯೆಗೆ ಸಂಬಂಧಿಸಿದಂತೆ ವಿವರಣೆಗಳನ್ನು ಕೇಳಿದಾಗ ಗುಜರಾತ್ ಸರ್ಕಾರದ ಅಧೀನ ಇಲಾಖೆಗಳಿಂದ ಯಾವ ಪ್ರತಿಕ್ರಿಯೆಯೂ ಇರಲಿಲ್ಲ. ನಂತರ ಅವರು ಸಮಾಚಾರ ಇಲಾಖೆಯ ಆಯುಕ್ತರಿಗೆ ಈ ವಿಷಯವನ್ನು ತಿಳಿಸಿದಾಗ, ಅವರ ಮಧ್ಯಪ್ರವೇಶದಿಂದಾಗಿ 23 ಆಗಸ್ಟ್ 2007ರಂದು ಈ ಕೆಳಗಿನ ಮಾಹಿತಿ, ಯಾವುದೇ ಶುಲ್ಕವಿಲ್ಲದೇ, ಲಭ್ಯವಾಯಿತು. ಲಭ್ಯ ಮಾಹಿತಿಯ ಪ್ರಕಾರ 2003ರಲ್ಲಿ 93, 2004ರಲ್ಲಿ 98, 2005ರಲ್ಲಿ 107, 2006ರಲ್ಲಿ 132, 2007ರಲ್ಲಿ 36 ಒಟ್ಟು ನಾಲ್ಕು ವರ್ಷಗಳಲ್ಲಿ 489 ರೈತರು ಆತ್ಮಹತ್ಯೆ ಮಾಡಿಕೊಂಡರೆಂದು ತಿಳಿಯುತ್ತದೆ. ಆದರೆ ಇನ್ನೂ ಕೆಲವು ಇತರ ವರದಿಗಳು ಆತ್ಮಹತ್ಯೆಗಳ ಸಂಖ್ಯೆ ಇನ್ನೂ ಹೆಚ್ಚು ಎಂದು ಹೇಳುತ್ತವೆ.

ವಿಶೇಷ ಆರ್ಥಿಕ ವಲಯಗಳು (ಎಸ್‌ಇಜೆಡ್) ದೇಶದ ವಿವಿಧ ಭಾಗಗಳಲ್ಲಿ ಮಾಡಿರುವ ಮತ್ತು ಮಾಡುತ್ತಿರುವ ಅನಾಹುತಗಳು ತಿಳಿದಿರುವಂಥವೇ. ಗುಜರಾತ್ ರಾಜ್ಯ ಸರಕಾರ ಮೋದಿಯ ನಾಯಕತ್ವದಲ್ಲಿ ಈ ಆರ್ಥಿಕ ವಲಯಗಳಿಗೆ ವಿಶೇಷ ಒತ್ತು ನೀಡುವುದರ ಮೂಲಕ ಇತರ ರಾಜ್ಯಗಳಿಗಿಂತ ಮುಂದಿದೆ. ಗುಜರಾತಿನ ವಿಶೇಷ ಆರ್ಥಿಕ ವಲಯಗಳಲ್ಲಿ ಬೇರೆ ಯಾವ ರಾಜ್ಯದಲ್ಲಿಯೂ ಇಲ್ಲದ ಕಾರ್ಮಿಕರನ್ನು 'ತೆಗೆದುಕೋ, ಹೊರಹಾಕು' (hire and fire) ನೀತಿಯಲ್ಲಿ ದುಡಿಸಿಕೊಳ್ಳಲಾಗುತ್ತಿದೆ.

ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ನರೇಂದ್ರ ಮೋದಿ ಗುಜರಾತನ್ನು ಸಾಲದ ಶೂಲಕ್ಕೆ ಏರಿಸುವಲ್ಲಿ ತೊಡಗಿದ್ದಾನೆ. ಆ ಹೊತ್ತಿಗೆ ಆ ರಾಜ್ಯದ ಸಾಲ 940 ಬಿಲಿಯನ್ ರೂಪಾಯಿಗಳಷ್ಟಿತ್ತು (23.8 ಬಿಲಿಯನ್ ಡಾಲರುಗಳು). 2001-02 ರಲ್ಲಿ ಆ ರಾಜ್ಯದ ಸಾಲ 453 ಬಿಲಿಯನ್ ರೂಪಾಯಿಗಳಷ್ಟಿತ್ತು (11.5 ಬಿಲಿಯನ್ ಡಾಲರ್‌ಗಳು) ದೇಶದ ಇತರ ರಾಜ್ಯಗಳಿಗೆ ಹೋಲಿಸಿದರೆ ಗುಜರಾತಿನ ಸಾಲದ ಹೊರೆ ಅಗಾಧಮಟ್ಟವನ್ನು ತಲುಪಿದೆ. ಈ ಸಾಲದ ಮೇಲಿನ ಬಡ್ಡಿ ತೀರಿಸಲೆಂದೇ ರಾಜ್ಯದ ಆದಾಯದ ಶೇಕಡ 23.5ರಷ್ಟು ಹಣ ಖರ್ಚಾಗುತ್ತಿದ್ದು, ಆದಾಯದ ಮೂಲಗಳಲ್ಲಿ ಈ ಸಾಲದ ಪಾಲೇ ಹೆಚ್ಚು. ಇಷ್ಟು ಸಾಲದ ಹೊರೆಯನ್ನು ಗುಜರಾತ್‌ನ ಜನಗಳ ಮೇಲೆ ಹೊರಿಸಿರುವ ಮೋದಿಯ ಅಭಿವೃದ್ಧಿಯ ಮಾದರಿ ಯಾರಿಗಾಗಿ? ಆ ರಾಜ್ಯದ ಬಡಜನತೆಗಾಗಿಯಂತೂ ಅಲ್ಲ. ಏಕೆಂದರೆ ಸಾಲದ ಹೊರೆ ಹೆಚ್ಚಾಗಿದ್ದರೂ ಅಲ್ಲಿನ ಉದ್ಯಮಿಗಳಿಗೆ ರೂ. 12,273,03 ಕೋಟಿಗಳಷ್ಟು ವಿನಾಯಿತಿಯನ್ನೂ ನೀಡಲಾಗಿದೆ!

ಆರ್ಥಿಕ ಸ್ಥಿತಿಗಳ ಸಂಗತಿ ಹೀಗಿದ್ದರೆ, ದಲಿತರ ಮೇಲಿನ ದೌರ್ಜನ್ಯಗಳಲ್ಲಿ ಏರಿಕೆ ಕಂಡು ಬಂದಿದೆಯಲ್ಲದೆ ದಲಿತರ, ಅಲ್ಪ ಸಂಖ್ಯಾಂತರ (ಮುಸ್ಲಿಮರ) ಸಂಖ್ಯೆ ಸರ್ಕಾರಿ ಕ್ಷೇತ್ರದಲ್ಲಿ ಕಡಿಮೆಯಾಗಿದೆ. 2001ರಲ್ಲಿ ದಲಿತರ ಮೇಲೆ 1242 ದೌರ್ಜನ್ಯದ ಪ್ರಕರಣಗಳು ವರದಿಯಾಗಿದ್ದವು. 2005ರಲ್ಲಿ ಈ ಸಂಖ್ಯೆ 1307ಕ್ಕೆ ಏರಿತು. 2006 ಜನವರಿ 1ರಿಂದ ಡಿಸೆಂಬರ್ 31ರ ನಡುವೆ ದಲಿತರ ವಿರುದ್ಧದ (ಮಾನಭಂಗಗಳು ಸೇರಿದಂತೆ) 517 ದೌರ್ಜನ್ಯದ ಪ್ರಕರಣಗಳು ವರದಿಯಾಗಿದ್ದವು. ದೇಶದಲ್ಲಿ ದಲಿತರ ಮೇಲಿನ ದೌರ್ಜನ್ಯಗಳಲ್ಲಿ ಗುಜರಾತಿನ ಪಾಲು 2001ರಲ್ಲಿ ಶೇಖಡ 3.7, 2004ರಲ್ಲಿ ಶೇಖಡ 4.9 ಮತ್ತು 2005ರಲ್ಲಿ ಶೇಖಡ 5.0. ಇನ್ನು ಪೊಲೀಸ್ ಇಲಾಖೆಯಲ್ಲಿ ಪ.ಜಾ, ಪ.ಪಂಗಡ ಮತ್ತು ಮುಸ್ಲಿಂಮರ ಸಂಖ್ಯೆ 2001-2005ರ ನಡುವೆ ಕಡಿಮೆಯಾದದ್ದು ಕಂಡುಬರುತ್ತದೆ.

ಇದೇ ಮೋದಿ ಮಾದರಿ. ನರಹತ್ಯೆ, ವಿಶ್ವಾಸ ವಿಧ್ವಂಸ, ಹೆಚ್ಚುತ್ತಿರುವ ಅಸಮಾನತೆ, ಬಡತನ, ಮಹಿಳೆಯರ ಮಾನಭಂಗ, ಅಲ್ಪಸಂಖ್ಯಾತರ ಕಗ್ಗೊಲೆ, ದಲಿತ-ಶೂದ್ರರ ಮೇಲೆ ಹಲ್ಲೆ, ರೈತರ ಆತ್ಮಹತ್ಯೆ, ಕಾರ್ಮಿಕರ ಬೀದಿ ಪಾಲು, ಪರಿಸರದ ಸರ್ವನಾಶ...ಇದನ್ನು ಧಿಕ್ಕರಿಸೋಣ! ■

No Comments



"ಕಾಂಗ್ರೆಸ್ ಪಕ್ಷದ ನಾಯಕರುಗಳು ಎಂಥಾ ಸೋಮಾರಿಗಳಾಗಿದ್ದಾರೆ ಅನ್ನುವುದಕ್ಕೆ, ಅವರುಗಳು ತರಾತುರಿಯಲ್ಲಿ ಪ್ರಕಟಿಸಿದ ಎರಡು ರೂ. ಕೆಜಿ ಅಕ್ಕಿ, ಬಡವರಿಗೆ ಕಲರ್ ಟಿವಿ ಎನ್ನುವ ಪ್ರಣಾಳಿಕೆಯೇ ಸಾಕ್ಷಿ."

-ಎಚ್.ಡಿ.ಕುಮಾರಸ್ವಾಮಿ

"ರಾಜಕಾರಣಿಗಳು ನಿವೃತ್ತಿಗೆ ಮುಂಚೆ ಆತ್ಮಚರಿತ್ರೆ ಬರೆಯುವುದನ್ನು ನಾನು ಒಪ್ಪುವುದಿಲ್ಲ. ಅಂಥಾ ತರಾತುರಿಯ ಕೆಲಸ ವಸ್ತುನಿಷ್ಠವಾಗಿರಲು ಸಾಧ್ಯವಿಲ್ಲ."

-ಅಡ್ವಾನಿಯ ಆತ್ಮಕಥೆಯ ಬಗ್ಗೆ ಮತ್ತೊಬ್ಬ ಬಿಜೆಪಿ ನಾಯಕ ಮುರಳಿ ಮನೋಹರ ಜೋಷಿ

"ಈ ಸಲ ಗೌಡರ ಟೋಪಿಗೆ ತಲೆ ಕೊಡಲ್ಲ."

-ಯಡಿಯೂರಪ್ಪ

"ಕೈಗಾರಿಕೆಗೆ ರಿಯಾಯತಿಗಳು? ಕೊಡಲೇಬೇಕು-ಏಕೆಂದರೆ ಅವು ಲಾಭ ಮಾಡಬೇಕು.

"ಮಧ್ಯಮ ವರ್ಗಕ್ಕೆ ತೆರಿಗೆ ವಿನಾಯತಿ? ಕೊಡಲೇಬೇಕು-ಏಕೆಂದರೆ ಅವರು ಹಣವನ್ನು ವ್ಯಯ ಮಾಡಬೇಕು.

"ರೈತರ ಸಾಲಮನ್ನಾ? ಖಂಡಿತಾ ಕೂಡದು-ಏಕೆಂದರೆ ಅವರು ಸಾಯುವುದನ್ನು ನಿಲ್ಲಿಸಿಬಿಡುತ್ತಾರೆ"

-ಒಂದು ಈ-ಮೇಲ್ ಪ್ರತಿಕ್ರಿಯೆ

ನಂಬಿದ್ರೆನಂಬಿ ಬಿಟ್ರೆಬಿಡಿ

"ಸಜ್ಜನ ಸುರೇಶ್ ಕುಮಾರ್
ಸಿಡಿಬಾಂಬು ಪ್ರಮೀಳಾ
ಕೋಲ್ಮಿಂಚು ಕರಂದ್ಲಾಜೆ"

-ವಿಕ್ರಾಂತ ಕರ್ನಾಟಕದಲ್ಲಿ ಒಂದು ತಲೆಬರಹ



"ರಾಜ್ಯದಲ್ಲಿ ಮೋದಿ ಮ್ಯಾಜಿಕ್ ನಡೆಯದಿದ್ದರೂ ಯಡಿಯೂರಪ್ಪ ಮ್ಯಾಜಿಕ್ ನಡೆಯುತ್ತದೆ."

-ನರೇಂದ್ರ ಮೋದಿ

"ರೈತರಿಗೆ 24 ಗಂಟೆ ವಿದ್ಯುತ್ ಮತ್ತು ಕುಡಿಯುವ ನೀರನ್ನು ಗುಜರಾತ್ ಸರ್ಕಾರ ನೀಡುತ್ತಿದೆ."

-ಮೋದಿ

"ಆಂಧ್ರದಲ್ಲಿ ಅಧಿಕಾರಕ್ಕೆ ಬಂದನಂತರ ಕಾಂಗ್ರೆಸ್ ಮಾಡಿದ ಮೊದಲ ಕೆಲಸವೇ ರೈತರಿಗೆ ಉಚಿತ ವಿದ್ಯುತ್ ನೀಡಿದ್ದು."

-ವೈ.ಎಸ್.ರಾಜಶೇಖರ ರೆಡ್ಡಿ

ಮುಖ್ಯಮಂತ್ರಿ ಕುರ್ಚಿಯ ಬೆಲೆ!

"2004ರ ಅಸೆಂಬ್ಲಿ ಚುನಾವಣೆಯಲ್ಲಿ ಕುಮಾರಸ್ವಾಮಿ ಆಸ್ತಿ ಮೌಲ್ಯ 3.50 ಕೋಟಿ ರೂಪಾಯಿಗಳು. ಈಗ ಅವರು ಘೋಷಿಸಿರುವುದು 49.50 ಕೋಟಿ ರೂಪಾಯಿಗಳು. ಅಂದರೆ 1300 ಪಟ್ಟು ಜಾಸ್ತಿ."

-ಒಂದು ವರದಿ

ಬುದ್ಧನಿಗೊಂದು ಗಾಂಧಿ ಟೋಪಿ

"ಬುದ್ಧ ಪ್ರಾಣಿ ಬಲಿಯನ್ನು ಬೇಡವೆಂದದ್ದು ತನ್ನ ಧರ್ಮದ ವೈಚಾರಿಕ ನೆಲೆಯಲ್ಲಿ-ಅದೊಂದು ಮೌಢ್ಯ ಎಂದು-ಮತ್ತೆ ತನ್ನ ಧರ್ಮದ ಮೂಲ ನೆಲೆಯಾದ 'ಕರುಣಾ'ದ ಭಾಗವಾಗಿ."

-ಡಿ.ಎಸ್.ನಾಗಭೂಷಣ,
ಸಂವಾದ ಪತ್ರಿಕೆಯಲ್ಲಿ

ಒಟ್ಟಿನಲ್ಲಿ ಸಮಸ್ಯೆ ಕೋಟಿಗಳದ್ದೆ

"ನೈಸ್ ಕಂಪನಿ ತನ್ನ ಐದು ಟೌನ್‌ಶಿಪ್‌ನಲ್ಲಿ ಜಮೀನು ಮಾರಿಕೊಂಡು 20,000 ಕೋಟಿ ರೂಪಾಯಿ ಮಾಡಿಕೊಳ್ಳಲು ನಮ್ಮದೇನೂ ಆಕ್ಷೇಪವಿಲ್ಲ. ಆದರೆ ಅವರು ಬೆಂಗಳೂರಿನ ಸುತ್ತಮುತ್ತಲಿನ ಜಮೀನನ್ನು ಮಾರಿ 30,000 ಕೋಟಿ ರೂಪಾಯಿಗಳನ್ನು ಮಾಡುವ ಉದ್ದೇಶ ಹೊಂದಿದ್ದಾರೆ."

-ಜೆಡಿಎಸ್ ಜಾಹಿರಾತು

ಕಷ್ಟಕ್ಕೆ ಆಗಲ್ಲ, ಗಂಟಿಗೆ ಭಯವಿಲ್ಲ!

"ಪುಟ್ಟಣ್ಣಯ್ಯನವರಿಗೆ ಸಾಹಿತಿ-ಚಿಂತಕರ ಬೆಂಬಲ."

-ವರದಿ

ತೊಂಭತ್ತು ಕೋಟಿ ದರಿದ್ರ ನಾರಾಯಣರೂ ಇರುತ್ತಾರೆ!

"ಮುಂದಿನ ಒಂದು ದಶಕದಲ್ಲಿ ಭಾರತದಲ್ಲಿ ಕೋಟ್ಯಾಧೀಶರ ಸಂಖ್ಯೆ 4,11,000ಕ್ಕೇರಲಿದೆ."

-ವರದಿ

ಶೈನಿಂಗ್ ಕರ್ನಾಟಕ, ಡೈಯಿಂಗ್ ಕನ್ನಡಿಗ

"ಕೃಷ್ಣಾಡಳಿತದಲ್ಲಿ ಬೆಂಗಳೂರಿನಲ್ಲಿ ಆರಂಭವಾದ ಐಟಿ-ಬಿಟಿ ಕ್ರಾಂತಿಯಿಂದ ಕರ್ನಾಟಕಕ್ಕೆ ವಿಶ್ವದಲ್ಲೇ ಅತ್ಯುತ್ತಮ ಸ್ಥಾನಮಾನ ದೊರೆಯಿತು."

-ಮನಮೋಹನ್ ಸಿಂಗ್

ಪ್ರೇತಗಳ ನರ್ತನವೂ ಹೌದು



"ಚುನಾವಣೆ ಎಂದರೆ ಪ್ರಜಾತಂತ್ರದ ಹಬ್ಬ. ಒಂದು ಜೀವಂತ ಪ್ರಜಾತಂತ್ರದಲ್ಲಿ ಚುನಾವಣೆಗಳು ಈ ರೀತಿ ಸ್ಮಶಾನಮೌನದಲ್ಲಿ ನಡೆಯಬಾರದು."

-ಅರುಣ್ ಜೈಟ್ಲಿ

ಲಿಂಗಾಯತ ಧರ್ಮ ಮತ್ತು ಬಿಜೆಪಿ ಸಿದ್ಧಾಂತ ತದ್ವಿರುದ್ಧ



ಕಂಡಹಾಗೆ

■ಗೌರಿ ಲಂಕೇಶ್

ಯಡಿಯೂರಪ್ಪ ಲಿಂಗಾಯತ ಜಾತಿಯಲ್ಲಿ ಹುಟ್ಟಿದ್ದಿರಬಹುದು. ಆದರೆ ಇವತ್ತು ಅವರ ವ್ಯಕ್ತಿತ್ವದಲ್ಲಾಗಲಿ, ಅವರು ಪ್ರತಿನಿಧಿಸುವ ಬಿಜೆಪಿ ಪಕ್ಷದಲ್ಲಾಗಲಿ ಲಿಂಗಾಯತ ಧರ್ಮದ ಮೂಲಭೂತ ಅಂಶಗಳಾದ ಜಾತ್ಯತೀತತೆ, ಸಮಾನತೆ, ಎಲ್ಲರ ಲೇಸನ್ನು ಬಗೆಯುವ ಧಾರಾಳತನದ ಲವಲೇಶವೂ ಇಲ್ಲ. ಬದಲಾಗಿ ಇವತ್ತು ಯಡಿಯೂರಪ್ಪ ಮತ್ತವರ ಬಿಜೆಪಿ ಎತ್ತಿಹಿಡಿಯುವುದು ಧರ್ಮವೇ ಅಲ್ಲದ ಹಿಂದೂತ್ವ ಎಂಬ ದ್ವೇಷದ ಸಿದ್ಧಾಂತವನ್ನು; ಅಸಮಾನತೆ, ದಬ್ಬಾಳಿಕೆ, ಜಾತಿ ಎಂಬ ಸಂಕುಚಿತ ಭಾವನೆಯನ್ನು ಪ್ರತಿಪಾದಿಸುವ ಬ್ರಾಹ್ಮಣ್ಯ ವ್ಯವಸ್ಥೆಯನ್ನು.



ಆದರೂ ನಮ್ಮ ರಾಜ್ಯದ ಬಹಳಷ್ಟು ಲಿಂಗಾಯತರು ತಮ್ಮ ಜಾತಿವಂತ ಯಡಿಯೂರಪ್ಪನಿಗೆ 'ಅನ್ಯಾಯ'ವಾಗಿದೆ ಎಂದು ಭಾವಿಸಿ ಆತನ ಬಿಜೆಪಿ ಪಕ್ಷದ ಪರವಾಗಿ ಮತ ಚಲಾಯಿಸಲು ಸಜ್ಜಾಗಿರುವುದು ಅಚ್ಚರಿ ಮೂಡಿಸುತ್ತದೆ. ಯಾಕೆಂದರೆ ಲಿಂಗಾಯತ ಧರ್ಮಕ್ಕೂ, ಹಿಂದೂತ್ವವಾದಕ್ಕೂ ಎತ್ತಿಂದೆತ್ತಣ ಸಂಬಂಧವೂ ಇಲ್ಲ, ಮಾತ್ರವಲ್ಲ ಅವೆರಡು ತದ್ವಿರುದ್ಧವಾದಂತಹವು.

ಅದನ್ನು ವಿವರಿಸುವ ಮುನ್ನ ಇಲ್ಲೊಂದೆರಡು ಸರಳ ಸತ್ಯಗಳನ್ನು ಹೇಳಬೇಕಿದೆ. ಮೊದಲನೆಯದಾಗಿ 'ಹಿಂದೂ' ಧರ್ಮ ಎಂಬುದು ಅಸ್ತಿತ್ವದಲ್ಲೇ ಇಲ್ಲ, ಅದಕ್ಕೆ ಇತರೆ ಧರ್ಮಗಳಂತೆ ಓರ್ವ ಪ್ರತಿಪಾದಕರಾಗಲಿ, ಧರ್ಮಗ್ರಂಥವಾಗಲಿ ಇಲ್ಲ, ಇದು ಹಿಂದೂತ್ವವಾದಿಗಳಿಗೂ ಗೊತ್ತು. ಆದರೆ ಅವರು ಅದರ ಬಗ್ಗೆ ಹೇಳುವುದೇನೆಂದರೆ "ಹಿಂದೂ ಧರ್ಮ ಒಂದು ಜೀವನ ಕ್ರಮ" ಎಂದು. ಅವರ ಈ ವಿವರಣೆ ಕೇಳುತ್ತಿದ್ದಂತೆ "ಹೌದಲ್ಲಾ" ಎನಿಸುತ್ತದೆ. ಆದರೆ ಈ ಜೀವನ ಕ್ರಮದಲ್ಲಿ ಶೂದ್ರರ ಮೇಲೆ ದಬ್ಬಾಳಿಕೆ, ದಲಿತರ ಮೇಲೆ ದೌರ್ಜನ್ಯ, ಅಸ್ಪೃಶ್ಯತೆ ಮತ್ತು ಅಸಮಾನತೆಯಂತಹ ಅನಿಷ್ಟಗಳೂ ಇವೆ ಎಂಬುದನ್ನು ಅವರು ಮರೆಮಾಚುತ್ತಾರೆ. ಯಾಕೆಂದರೆ ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಹಿಡಿದು ಅದರ ಪುಡಿ ಸಂಘಟನೆಗಳ ತನಕ ಎಲ್ಲರೂ 'ಹಿಂದೂತ್ವ'ದ ಹೆಸರಲ್ಲಿ ಪ್ರತಿಪಾದಿಸುವುದು ಮನುಧರ್ಮವನ್ನು. ಆದರೆ ಮನುಧರ್ಮ ಎಷ್ಟು ಅಮಾನವೀಯ ಧರ್ಮ ಎಂಬುದು ಎಲ್ಲರಿಗೂ ಗೊತ್ತಿರುವುದರಿಂದ ಅದಕ್ಕೆ ಅವರು 'ಹಿಂದೂ ಧರ್ಮ' ಮತ್ತು 'ಹಿಂದೂತ್ವ' ಎಂಬ ಲೇಪನಗಳನ್ನು ಹಚ್ಚಿದ್ದಾರೆ. ಬ್ರಿಟಿಷರು ಭಾರತಕ್ಕೆ ಬಂದು 'ಹಿಂದೂ' ಎಂಬ ಪದವನ್ನು ಚಾಲ್ತಿಗೆ ತರುವ ತನಕ ಅಂತಹ ಒಂದು ಪದವೇ ಇರಲಿಲ್ಲ ಎಂಬುದು ಎಷ್ಟು ಸತ್ಯವೋ, ಅಷ್ಟೇ ಸತ್ಯ 'ಹಿಂದೂ ಧರ್ಮ' ಇಲ್ಲ ಎಂಬುದು ಕೂಡ.

ಆದರೆ ಲಿಂಗಾಯತ ಧರ್ಮ ಹಾಗಲ್ಲ. ಯಾವ ಮನುಶಾಸ್ತ್ರವೇ ಭಾರತದ ಸಂವಿಧಾನವಾಗಬೇಕೆಂದು ಇವತ್ತಿಗೂ ಆರ್‌ಎಸ್‌ಎಸ್, ಬಿಜೆಪಿ ಮತ್ತು ಹಿಂದೂತ್ವವಾದಿಗಳು ಪ್ರತಿಪಾದಿಸುತ್ತಿದ್ದಾರೋ ಅದೇ ಮನುಶಾಸ್ತ್ರದ ವಿರುದ್ಧ ಬಂಡಾಯವೆದ್ದು ಜನಿಸಿದ್ದು ಲಿಂಗಾಯತ ಧರ್ಮ.

12ನೇ ಶತಮಾನದಲ್ಲಿ ನಡೆದ ಒಂದು ಅಭೂತಪೂರ್ವ ಸಾಮಾಜಿಕ ಕ್ರಾಂತಿಯ ಪರಿಣಾಮವಾಗಿ ಅಸ್ತಿತ್ವಕ್ಕೆ ಬಂದ ಧರ್ಮ ಮತ್ತು ಸಮುದಾಯ ಲಿಂಗಾಯತರದ್ದು. ಅಂದಿನ ಕ್ರಾಂತಿ ಎತ್ತಿ ಹಿಡಿದ ಮೌಲ್ಯಗಳು ಇವತ್ತು ಬಿಜೆಪಿ ಪ್ರತಿಪಾದಿಸುತ್ತಿರುವ 'ಹಿಂದೂತ್ವ'ಕ್ಕೆ ತದ್ವಿರುದ್ಧವಾಗಿರುವಂತಹದ್ದು. ಲಿಂಗಾಯತರ ವಿಭೂತಿ ಪುರುಷ ಬಸವಣ್ಣ ಹುಟ್ಟಿನಲ್ಲಿ ಬ್ರಾಹ್ಮಣನಾದರೂ (ಬಂಜಗೆರೆ ಜಯಪ್ರಕಾಶರು ಇನ್ನಷ್ಟು ಸಂಶೋಧನೆ ನಡೆಸಿ ಹೊಸ ಪುಸ್ತಕವನ್ನು ಹೊರತರುವವರೆಗೂ ಹಾಗೆಂದೇ ಒಪ್ಪಿಕೊಳ್ಳೋಣ!) ಬ್ರಾಹ್ಮಣ್ಯದಲ್ಲಿನ ಅಸಮಾನತೆ, ಅಸ್ಪೃಶ್ಯತೆಯಂತಹ ಅಮಾನವೀಯ ಮೌಲ್ಯಗಳನ್ನು ಧಿಕ್ಕರಿಸಿ ಸ್ವಾತಂತ್ರ್ಯ, ಸಮಾನತೆ ಮತ್ತು ಕಾಯಕವೇ ಕೈಲಾಸ ಎಂಬ ಮೌಲ್ಯಗಳನ್ನು ಎತ್ತಿ ಹಿಡಿಯುವ ಸಿದ್ಧಾಂತವನ್ನು ಹುಟ್ಟು ಹಾಕಿದರು. ಬಸವಣ್ಣನ ಸಮಕಾಲೀನರಾದ ಮತ್ತು ಅವರಂತೆಯೇ ಕ್ರಾಂತಿಕಾರಿಗಳಾದ ಅಲ್ಲಮ ಪ್ರಭು, ಅಕ್ಕಮಹಾದೇವಿ, ಸಿದ್ಧರಾಮ ಸೇರಿದಂತೆ ಇನ್ನೂ ಹಲವಾರು ಶರಣರು ಜೊತೆಗೂಡಿ ಕಲ್ಯಾಣದಲ್ಲಿ ಕಟ್ಟಿದ ಮಹಾಮನೆಯಲ್ಲಿ ಮಹಿಳೆಯರಿಗೆ, ಎಲ್ಲ ಜಾತಿಯವರಿಗೆ, ದುಡಿಮೆಗಾರರಿಗೆ ಸಮಾನ ಸ್ಥಾನವನ್ನು ಕಲ್ಪಿಸಲಾಗಿತ್ತು. "ಇವನಾರವ, ಇವನಾರವ ಎನ್ನದಿರಯ್ಯ ಇವ ನಮ್ಮವ ಇವ ನಮ್ಮವ ಎನಿರಯ್ಯ" ಎಂಬ ಬಸವಣ್ಣನವರ ನಿಲುವು ಸಮಾಜದ ಎಲ್ಲರನ್ನೂ ಜೊತೆಗೂಡಿಸಿ ಸಹಬಾಳ್ವೆಯನ್ನು ಪ್ರೋತ್ಸಾಹಿಸಿತ್ತು. ಅವರ ಇಂತಹ ಚಿಂತನೆಗಳಿಂದಾಗಿಯೇ ಅಂದಿನ ಸಮಾಜದ ಎಲ್ಲಾ ವರ್ಗಗಳ ಜನರು ಲಿಂಗಾಯತ ಧರ್ಮದತ್ತ ಆಕರ್ಷಣೆಗೊಂಡು ಈ ಸಿದ್ಧಾಂತಗಳನ್ನು ತಮ್ಮದಾಗಿಸಿಕೊಂಡು ಲಿಂಗಾಯತರಾದರು.



ಎಲ್ಲರಿಗೂ ಸ್ವಾತಂತ್ರ್ಯ, ಸಮಾನತೆ, ಸಹಬಾಳ್ವೆ ಮತ್ತು ಇತರರ ಬಗ್ಗೆ ಸಹಿಷ್ಣುತೆಯನ್ನು ಸಾರುವ ಲಿಂಗಾಯತ ಧರ್ಮವೆಲ್ಲಿ? ಅಲ್ಪಸಂಖ್ಯಾತರನ್ನು ಈ ದೇಶದಿಂದಲೇ ಓಡಿಸಬೇಕೆನ್ನುವ, ಇವತ್ತಿಗೂ ದಲಿತರ ಮೇಲೆ ಹಲ್ಲೆ ನಡೆಸುವ (ಇತ್ತೀಚಿನ ಶಾಂತಿಪುರ ಘಟನೆ ಒಂದು ಉದಾಹರಣೆ), ಲಿಂಗಾಯತರು ಸೇರಿದಂತೆ ಉಳಿದ ಶೂದ್ರ ಸಮುದಾಯಗಳನ್ನು ತುಚ್ಛವಾಗಿ ಕಾಣುವ (ಇದಕ್ಕೆ ಸಂಬಂಧಿಸಿದಂತೆ ಈ ಸಂಚಿಕೆಯ ಐದನೇ ಪುಟದಲ್ಲಿನ 'ಲಿಂಗಾಯತರು ಮೂರ್ಖರು' ವರದಿ ನೋಡಿ) ಬಿಜೆಪಿ ಪಕ್ಷದ ಸಿದ್ಧಾಂತವೆಲ್ಲಿ?

ಯಾವುದೇ ಮೂರ್ತ ರೂಪವನ್ನು ತಾಳಲು ನಿರಾಕರಿಸಿ ತಾಳ್ಮೆ ಮತ್ತು ಸಾಧನೆಯ ಸಂಕೇತವಾಗಿರುವ ಲಿಂಗಾಯತರ ಇಷ್ಟಲಿಂಗವೆಲ್ಲಿ? ಬಿಜೆಪಿಯವರ ಹಠ, ಹಿಂಸೆ, ದ್ವೇಷ ಮತ್ತು ಯುದ್ಧದ ಸಂಕೇತವಾಗಿರುವ ರಾಮನೆಲ್ಲಿ? 'ದೇಹವೇ ದೇಗುಲವಯ್ಯ' ಎಂಬ ಲಿಂಗಾಯತರ ಸಿದ್ಧಾಂತವೆಲ್ಲಿ? ಅಮಾಯಕರ ರಕ್ತ ಹರಿಸಿ, ಅವರ ಹೆಣಗಳ ಮೇಲೆ ಮಂದಿರವನ್ನು ಕಟ್ಟೇ ತೀರುತ್ತೇವೆನ್ನುವ ಬಿಜೆಪಿಗಳ ನಿಲುವೆಲ್ಲಿ?

ವೇದ, ಉಪನಿಷತ್ತುಗಳನ್ನು ಅಗ್ನಿಗೆ ಬಸಾದಿ ಎಂದಿದ್ದ ಬಸವಣ್ಣನೆಲ್ಲಿ? ಅದೇ ವೇದ, ಉಪನಿಷತ್ತು, ಸ್ತೋತ್ರಗಳನ್ನು ಎಲ್ಲರ ಮೇಲೆ ಹೇರುತ್ತೇವೆನ್ನುವ ಬಿಜೆಪಿಗಳೆಲ್ಲಿ?

"ನೀವು ನೂರು ಜನ್ಮಗಳ ಕಾಲ ಬ್ರಾಹ್ಮಣರ ಸೇವೆ ಮಾಡಿದರೆ ನಿಮಗೆ ದ್ವಿಜನ (ಬ್ರಾಹ್ಮಣ)ನಾಗಿ ಹುಟ್ಟುವ ಅವಕಾಶ ಸಿಗುತ್ತದೆ" ಎನ್ನುತ್ತಲೇ ಇತರೆ ಜಾತಿಗಳನ್ನು ಸಾವಿರಾರು ವರ್ಷಗಳಿಂದ ದಮನಿಸುತ್ತಾ ಬಂದು ಪುರೋಹಿತಶಾಹಿಗಳೆಲ್ಲಿ? ಪುನರ್‌ಜನ್ಮದ ಹಂಗನ್ನು ತೊರೆದು ಈ ಬದುಕಿನಲ್ಲೆ ಒಳ್ಳೆಯದನ್ನು ಮಾಡಿ ಲಿಂಗೈಕ್ಯರಾಗುವುದೇ ಲೇಸೆಂದು ನಂಬಿರುವ ಲಿಂಗಾಯತರೆಲ್ಲಿ?

ಉತ್ತಮ ಮೌಲ್ಯಗಳನ್ನು ಪ್ರತಿಪಾದಿಸುವ ಲಿಂಗಾಯತ ಧರ್ಮವೆಲ್ಲಿ? ನೀಚ ಚಿಂತನೆಗಳನ್ನು ಅಸ್ತಿತ್ವದಲ್ಲೇ ಇರದ ಧರ್ಮದ ಹೆಸರಿನಲ್ಲಿ ಎಲ್ಲರಲ್ಲಿ ಬಿತ್ತಿ ಸಮೂಹ ಸನ್ನಿಯನ್ನು ಸೃಷ್ಟಿಸುತ್ತಿರುವ ಬಿಜೆಪಿ ಎಲ್ಲಿ?

ದುರದೃಷ್ಟವಶಾತ್ ಇವತ್ತು ಲಿಂಗಾಯತರು ತಮ್ಮದೇ ಒಂದು ಪ್ರತ್ಯೇಕ ಧರ್ಮ ಎಂಬುದನ್ನು ಮರೆತು ಬಸವಣ್ಣನವರು ವಿರೋಧಿಸಿದ್ದ ಪುರೋಹಿತಶಾಹಿಗಳ ವ್ಯವಸ್ಥೆಯಲ್ಲಿ ಒಂದು ಜಾತಿಯಾಗಿ ಮಾರ್ಪಾಡಾಗಿದ್ದಾರಲ್ಲದೆ, ತಮ್ಮ ಸಮುದಾಯದವರನ್ನೆಲ್ಲ ಮೂರ್ಖರು ಎಂದೇ ನಂಬಿರುವ, ತಮ್ಮ ಲಿಂಗಾಯತ ಧರ್ಮದ ಅಸ್ತಿತ್ವವನ್ನೇ ನಿರಾಕರಿಸುವ ಬಿಜೆಪಿ ಪಕ್ಷಕ್ಕೆ ತಮ್ಮ ಬೆಂಬಲವನ್ನು ನೀಡಲು ಮುಂದಾಗಿದ್ದಾರೆ.

ಅಧಿಕಾರದಾಸೆಗಾಗಿ ಯಡಿಯೂರಪ್ಪ ತನ್ನ ಲಿಂಗಾಯತ ಧರ್ಮದ ಮೂಲ ತತ್ವಗಳನ್ನೇ ಮರೆತಿರಬಹುದು, ಅನಂತಕುಮಾರ್‌ನಂತಹ ಬ್ರಾಹ್ಮಣನ ಅವಮಾನಗಳನ್ನು ಸಹಿಸಿಕೊಂಡಿರಬಹುದು, ಶೈವ ಪರಂಪರೆಯನ್ನು ನಿರ್ಲಕ್ಷಿಸಿ ವೈಷ್ಣವ ಪರಂಪರೆಯನ್ನು ಒಪ್ಪಿಕೊಂಡು ದೇಗುಲವನ್ನು ನಿರ್ಮಿಸಲು ಹೊರಟಿರಬಹುದು, ಲಿಂಗಾಯತ ಧರ್ಮದ ಪ್ರಮುಖ ಅಂಶವಾಗಿರುವ ಅನ್ನದಾಸೋಹದಂತಹ ಸಮಾನತೆಯ ಕ್ರಿಯೆಗಳಲ್ಲಿ ಪಾಲ್ಗೊಳ್ಳಲಾರದ ರಾಘವೇಶ್ವರ ಸ್ವಾಮಿ ತರಹದ ಬ್ರಾಹ್ಮಣ ಸ್ವಾಮಿಗಳ ಪಾದ ಸೇವೆ ಮಾಡಬಹುದು.

ಆದರೆ ಯಡಿಯೂರಪ್ಪನಿಗೆ ಇವತ್ತು ಬಂದಿರುವ ನೈತಿಕ ಮತ್ತು ಬೌದ್ಧಿಕ ದಾರಿದ್ರ್ಯ ನಮ್ಮ ರಾಜ್ಯದ ಲಿಂಗಾಯತರಿಗೆ ಇನ್ನೂ ಬಂದಿಲ್ಲ.

ಕರ್ನಾಟಕದಲ್ಲಿ ಈಗ ನಡೆಯುತ್ತಿರುವ ಚುನಾವಣೆಗಳ ಎರಡನೆ ಮತ್ತು ಮೂರನೆ ಹಂತಗಳಲ್ಲಿ ಲಿಂಗಾಯತ ಮತದಾರರು ಹಲವು ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ವಹಿಸಲಿರುವುದರಿಂದ ಇಷ್ಟೆಲ್ಲ ಬರೆದಿದ್ದೇನೆ.

ಕರ್ನಾಟಕದಲ್ಲಿ ಬಿಜೆಪಿಯ ಹಿಂದೂತ್ವವಾದಿ ಸಿದ್ಧಾಂತ ಬೆಳೆಯುತ್ತಾ ಹೋದರೆ ಅದು ಅಷ್ಟರಮಟ್ಟಿಗೆ ಬಸವಣ್ಣನ ಆಶಯಗಳನ್ನು ತುಳಿದು ಮೂಲೆಗುಂಪು ಮಾಡುತ್ತದೆ ಎಂಬ ಎಚ್ಚರಿಕೆಯನ್ನು ನೀಡಲು.

ಲಿಂಗಾಯತರಿಗೆ ತಮ್ಮ ಧರ್ಮ, ಸಂಸ್ಕೃತಿ ಮತ್ತು ಇತಿಹಾಸಗಳು ಅರ್ಥವಾಗಿ ಬಿಜೆಪಿಯನ್ನು ಬೆಂಬಲಿಸದೆ, ತಮ್ಮತನವನ್ನು ಪ್ರದರ್ಶಿಸುತ್ತಾರೆಂದು ನಂಬಿದ್ದೇನೆ. ■

ಚುನಾವಣೆ 2008

ಕ್ಷೇತ್ರ ಸಮೀಕ್ಷೆ

2 ನೇ ಹಂತದ ಕ್ಷೇತ್ರ ಸಮೀಕ್ಷೆ

ಮೇ 16 ರಂದು ನಡೆಯಲಿರುವ 2 ನೇ ಹಂತದ ಮತದಾನದಲ್ಲಿ 10 ಜಿಲ್ಲೆಗಳ 66 ಕ್ಷೇತ್ರಗಳ ಫಲಿತಾಂಶ ನಿರ್ಧಾರವಾಗಲಿದೆ. ಕರಾವಳಿ ಕರ್ನಾಟಕ, ಮಲೆನಾಡು ಕ್ಷೇತ್ರಗಳಲ್ಲಿ ಈ ಮೊದಲು ಬಿಜೆಪಿಯ ಪ್ರಭಾವ ಜಾಸ್ತಿ ಇತ್ತು. ಆದರೆ ಒಟ್ಟಾರೆಯಾಗಿ ಬಿಜೆಪಿಯಿಂದ ಗೆದ್ದಿದ್ದ ಆರ್ಡಿನರಿ ನಾಯಕರೂ ಕೂಡ ನಂಬಲಸಾಧ್ಯ ಭ್ರಷ್ಟಾಚಾರ ನಡೆಸಿ ರಾತ್ರೋರಾತ್ರಿ ಕೋಟ್ಯಾಧೀಶರಾಗಿ ಜನ ಜಿಗುಪ್ಸೆ ಪಟ್ಟುಕೊಳ್ಳುವಂತೆ ಮಾಡಿಕೊಂಡಿದ್ದಾರೆ. ಇದರ ಜೊತೆಗೆ ದಿನಬೆಳಗಾದರೆ ದೊಂಬಿ, ಗಲಭೆಗಳು ಬೇರೆ. ಈ ಪ್ರಾಂತ್ಯದಲ್ಲಿ ನಿರ್ಣಾಯಕ ಸಂಖ್ಯೆಯಲ್ಲಿರುವ ಮುಸ್ಲಿಮರು ಹಾಗೂ ಹಿಂದುಳಿದ ವರ್ಗ, ಕ್ರಿಶ್ಚಿಯನ್ನರು ಸಾರಾಸಗಟಾಗಿ ಈ ಬಾರಿ ಕಾಂಗ್ರೆಸ್ ಬೆಂಬಲಿಸಲಿದ್ದಾರೆ. ನಿಜ ಹೇಳಬೇಕೆಂದರೆ ಈ ಕಾಂಗ್ರೆಸ್ ಪಕ್ಷ ಯಾವ ದಮನಿತರ, ನೊಂದವರ ಪರವಾಗಿ ಒಂದೇ ಒಂದು ದಿನವೂ ಮಾತನಾಡಿದ್ದಿಲ್ಲ, ರಕ್ಷಣೆ ನೀಡಿರಲೂ ಇಲ್ಲ. ಆದಾಗ್ಯೂ ಜನ ಬಿಜೆಪಿಯನ್ನು ತಿರಸ್ಕರಿಸುವ ತೀರ್ಮಾನ ಮಾಡಿರುವುದರಿಂದ ಆ ಓಟುಗಳು ಕಾಂಗ್ರೆಸ್ ಕಡೆ ಬರುತ್ತಿವೆ ಅಷ್ಟೆ.

ಇನ್ನು ಚಿತ್ರದುರ್ಗ, ಕೊಪ್ಪಳ, ರಾಯಚೂರಿನಲ್ಲಿ ಕಾಂಗ್ರೆಸ್, ದಳ ಭಾರಿ ಪೈಪೋಟಿ ನಡೆಸುತ್ತಿವೆ. ಇಲ್ಲಿ ಬಿಜೆಪಿಗೆ ದಳ-ಕಾಂಗ್ರೆಸ್ ಉಂಡು ಬಿಡುವ ಬೆರಳೆಣಿಕೆಯಷ್ಟು ಸೀಟುಗಳಷ್ಟೆ ಗ್ಯಾರಂಟಿ. ಈ ಪ್ರಾಂತ್ಯದಲ್ಲಿ ಬಿಜೆಪಿ ಗೆಲ್ಲಿಕೊಳ್ಳಬಹುದಾದದ್ದು ಬಳ್ಳಾರಿಯೊಂದನ್ನೇ. 2 ನೇ ಹಂತದ 66 ಕ್ಷೇತ್ರಗಳಲ್ಲಿ ಈ ಮೂರು ಪಕ್ಷಗಳಿಗೆ ಸಿಗಬಹುದಾದ ಜಿಲ್ಲಾವಾರು ಸೀಟುಗಳ ಒಂದು ಅಂದಾಜು ಸಂಖ್ಯೆಯನ್ನು ಇಲ್ಲಿ ಮುಂದಿಸಿದೆ.

ಜಿಲ್ಲೆ	ಕ್ಷೇತ್ರ ಸಂಖ್ಯೆ	ಕಾಂಗ್ರೆಸ್	ಬಿಜೆಪಿ	ದಳ	ಇತರೆ/ಎಸ್‌ಪಿ/ಬಿಎಸ್‌ಪಿ
ಉತ್ತರ ಕನ್ನಡ	6	4	1	1	
ದಕ್ಷಿಣ ಕನ್ನಡ	8	6	2	-	
ಉಡುಪಿ	5	2-3	2-3	-	
ಚಿಕ್ಕಮಗಳೂರು	5	3	1	1	(1)
ಶಿವಮೊಗ್ಗ	7	3-4	2-3	1	(2)
ದಾವಣಗೆರೆ	8	4-5	2-3	1	
ಚಿತ್ರದುರ್ಗ	6	2-3	1-2	3	
ಬಳ್ಳಾರಿ	9	3-4	5-6	-	
ಕೊಪ್ಪಳ	5	2-3	-	2-3	
ರಾಯಚೂರು	7	2	2-3	3-4	
	66	31-35	20-23	12-15	3

ಈ ಅಂದಾಜಿನ ಪ್ರಕಾರ 2 ನೇ ಹಂತದಲ್ಲೂ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ. ನಂತರ ಬಿಜೆಪಿ ಹಾಗೂ ಜೆಡಿಎಸ್ ಬರಲಿವೆ.

ಬಿಜೆಪಿಯವರಿಗೆ ಇಲ್ಲೂ ನಿರಾಶೆ ಕಾದಿದೆ. ಇನ್ನು ಬಾಕಿ ಉಳಿಯುವ 3 ನೇ ಹಂತದ 69 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಬಿಜೆಪಿಗಳು ಜೆಡಿಎಸ್‌ನೊಂದಿಗೂ ಗುದ್ದಾಡಬೇಕಿದೆ. ದಳಕ್ಕೆ ಬೆಳಗಾಂ, ಗುಲ್ಬರ್ಗಾ, ಬೀದರ್‌ನಲ್ಲಿ ಬಲಿಷ್ಠ ಅಭ್ಯರ್ಥಿಗಳಿದ್ದಾರೆ.


ಯಡಿಯೂರಪ್ಪ ಶಿಕಾರಿಪುರದಲ್ಲಿ ಗೆಲ್ಲಲಿ-ಸೋಲಲಿ, ಆತ ಕರ್ನಾಟಕದ ಮುಖ್ಯಮಂತ್ರಿಯಾಗುವುದಿಲ್ಲ ಎಂಬ ಶುಭ ಸೂಚನೆಗಳು ದಟ್ಟವಾಗಿ ಕಾಣುತ್ತಿದೆ. ■

'ಬಂ' ಎಂಬ ಕಲ್ಲು ಕರಗದೇ ಗೆಲ್ಲುವುದುಂಟೆ?



ಅದೇನಾಗಿದೆಯೋ ಗೊತ್ತಿಲ್ಲ; ಯಡ್ಡಿ ವಿರುದ್ಧ ಭುಗಿಲೆದ್ದ ಶಿಕಾರಿಪುರದ ಆಕ್ರೋಶವನ್ನು ಹಿಡಿದಿಡುವತ್ತ ಸ್ವತಃ ಬಂಗಾರಪ್ಪ ಆಸಕ್ತಿ ತೋರುತ್ತಿಲ್ಲ. ಗೋಣಿ ಮಾಲತೇಶ, ಕಬ್ಬಡಿ ರಾಜು, ತ್ಯಾಗರ್ತಿ ಮಾಲಿಂಗಪ್ಪ ನಗರದ ಮಾದೇವಪ್ಪರಂಥ ಹಳೇ ತಲೆಗಳ ಹೊರತಾಗಿ ಹೊಸ ಮುಖಗಳತ್ತ 'ಬಂ' ದೃಷ್ಟಿ ಹರಿಸುತ್ತಿಲ್ಲ. ತೀರ ಇತ್ತೀಚೆಗೆ ದುಡ್ಡು ಕಾಸಿನ ಉಸ್ತುವಾರಿಯನ್ನೆಲ್ಲ ತಮ್ಮ ಪರಮಾಪ್ತ ಫಕೀರಪ್ಪನಿಂದ ಕಿತ್ತು ಇನ್ನಾರಿಗೋ ವಹಿಸಿದ್ದರಿಂದ ಸ್ವತಃ ಫಕೀರಪ್ಪ ಮುನಿಸಿಕೊಂಡಂತಿದೆ. ಬ್ಲಾಕ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಭಾರತಿ ಮತ್ತು ಪುಷ್ಪಾ ಮಂಜಪ್ಪ ಮೇಲೆ ಬಿದ್ದು ದುಡಿಯಲು ಬಂದರೆ ಮುಖಕ್ಕೆ ಹೊಡೆದಂತೆ ಹೀಯಾಳಿಸಿದ್ದಾರೆ.

ಆ ಕಾಲದಿಂದಲೂ ಯಡ್ಡಿ ಮಕ್ಕಳ ದುರಾಚಾರದ ವಿರುದ್ಧ ಬೀದಿಗಿಳಿದು ಹೋರಾಡಿದ ವಿಜಯಲಕ್ಷ್ಮಿ ಕಂಚುಗಾರರನ್ನು ಯಾವ ಕಾರಣಕ್ಕೆ 'ಬಂ' ಹೊರಗಿಟ್ಟಿದ್ದಾರೋ? ತಾಲ್ಲೂಕಿನ ಪ್ರತಿ ಹಳ್ಳಿಗಳಲ್ಲೂ ವಿಜಯಲಕ್ಷ್ಮಿಗೆ ಮಹಿಳಾ ಅಭಿಮಾನಿಗಳ ಹಿಂಡೇ ಇದೆ. 'ಬಂ' ನಿಲ್ಲದೇ ಹೋಗಿದ್ದರೆ ಪಕ್ಷೇತರಳಾಗಿ ನಿಲ್ಲಬೇಕಿದ್ದ ವಿಜಯಲಕ್ಷ್ಮಿ ನಾಮಪತ್ರ ಸಲ್ಲಿಸಿಯೂ ಆಗಿತ್ತು. ಯಾವತ್ತು 'ಬಂ' ಪರಮಾಪ್ತ ಫಕೀರಪ್ಪ ಬಂದು ಕಾಲಿಗೆಬಿದ್ದು ಬೇಡಿಕೊಂಡನೋ ಯಡ್ಡಿ ಸೋಲುವುದೇ ಮುಖ್ಯವಾಗಿದ್ದ ವಿಜಯಲಕ್ಷ್ಮಿ ಮರುಮಾತಾಡದೇ ನಾಮಪತ್ರ ವಾಪಸ್ಸು ಪಡೆದರು.



ಈಗ ನೋಡಿದರೆ ವಿಜಯಲಕ್ಷ್ಮಿಯವರನ್ನು ಮಾತಾಡಿಸುವವರೇ ಗತಿಯಿಲ್ಲ. ಅವರಷ್ಟೇ ಅಲ್ಲ ಎರಡನೇ ಸಾಲಿನ ಯಡ್ಡಿ ವಿರೋಧಿಗಳ್ಯಾರನ್ನೂ 'ಬಂ' ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಕೊಪ್ಪಲು ಮಂಜಪ್ಪ ಇವತ್ತಿಗೂ ಮನೆಬಿಟ್ಟು ಹೊರಬರುತ್ತಿಲ್ಲ. ಹಾಗೇ ಜೆಡಿಎಸ್ ಮುಖಂಡರಾದ ಬನ್ನೂರು ಮಂಜಪ್ಪ ಮಾಜಿ ಮಂತ್ರಿ ವೆಂಕಟಪ್ಪ ಇತ್ಯಾದಿ ಜೆಡಿಎಸ್ ಮುಖಂಡರನ್ನು ಕಂಡು ಬೆಂಬಲಿಸುವಂತೆ ಕಾಟಾಚಾರಕ್ಕೂ 'ಬಂ' ಕೇಳದೇ ಹೋದರೆ ಏನರ್ಥ?

ಸದ್ಯ ಕಾಗಿನೆಲೆ, ನಳಿನಿಕೊಪ್ಪ ಬೇಗೂರು, ಈಸೂರು, ಅಂಜನಾಪುರ, ಹಿತ್ಲ, ಮತ್ತಿಕೋಟೆ ಮುಂತಾದ ಲಿಂಗಾಯತ ಪ್ರಾಬಲ್ಯದ ಊರುಗಳೆಲ್ಲ ಸಾರಾಸಗಟಾಗಿ ಬಿಜೆಪಿಯ ಬೆಂಬಲಕ್ಕೆ ನಿಂತುಬಿಟ್ಟಿವೆ. ತ್ಯಾಗರ್ತಿ ಮಾಲಿಂಗಪ್ಪ ತಿರ್ಚಗುಂಡಿ ಪಾಲಾಕ್ಷಪ್ಪ, ಕಲ್ಮನೆ ಮಲ್ಲೇಶ್, ಗ್ರಾಮದ ಪರಮೇಶಿ, ಜಕ್ಕಿನ ಕೊಪ್ಪದ ನವಿತೀಶಪ್ಪ ಫಯಾಜ್, ಶಫಿ ಅಹ್ಮದ್, ಗಫಾರ್ ಖಾನ್, ಜಾಫರ್ ಆಲಿಖಾನ್‌ರಂಥ ನಾಯಕರೆಲ್ಲ ಪೂರ್ತಿ ಮನಸ್ಸಿನಿಂದ 'ಬಂ' ಪರ ಬೀದಿಗಿಳಿದಂತಿಲ್ಲ. ಅದು ವಿಶ್ವಾಸದ ಕೊರತೆ. ಯಡ್ಡಿಯನ್ನು ವಿರೋಧಿಸಿಕೊಂಡೇ ಬಂದ ಕೆಲ ಲಿಂಗಾಯತ ನಾಯಕರನ್ನೂ 'ಬಂ' ಇನ್ನೂ ಮಾತಾಡಿಸಿಲ್ಲ.

ಯಡ್ಡಿಯ ಕೊಪ್ಪರಿಗೆಗಟ್ಟಲೇ ರೊಕ್ಕದ ಮುಂದೆ ನಯಾಪೈಸೆಯನ್ನೂ ಕೇಳದೇ ದುಡಿಯಲು ನಿಂತ ನಿಷ್ಠಾವಂತ ನಾಯಕರನ್ನು ವಿಶ್ವಾಸದಿಂದ ಕಂಡರಷ್ಟೇ ಬಂಗಾರಪ್ಪ ದಾರಿ ಸಲೀಸಾಗುತ್ತದೆ. 'ಬಂ' ತಮ್ಮ ಸಿಟ್ಟು ಸೆಡವನ್ನು ಬಿಡಬೇಕಿದೆ. ಪ್ರತಿಯೊಬ್ಬರನ್ನೂ ವಿಶ್ವಾಸದಿಂದ ಕಂಡರಷ್ಟೇ ಅವರೆಲ್ಲ ಖುಷಿಯಿಂದ ಯಡ್ಡಿಯ ವಿರುದ್ಧ ಸೆಣಸಲು ಸಾಧ್ಯ ಎಂಬುದನ್ನು ಮನಗಾಣಬೇಕಿದೆ.

'ಬಂ' ಸೋಲಿಸಲು 20 ಕೋಟಿ

ಯಡ್ಡಿ ಮಕ್ಕಳ ಅಟ್ಟಹಾಸ


ದುಡ್ಡು, ದೌಲತ್ತು, ದುರಹಂಕಾರ ಮತ್ತು ಅಧಿಕಾರ ಮದದ ಬಗ್ಗೆ ಜನಸಾಮಾನ್ಯರಲ್ಲಿ ಸುಪ್ತ ಆಕ್ರೋಶವಿರುತ್ತದೆ. ಅಧಿಕಾರದಲ್ಲಿದ್ದಾಗ ಜನರನ್ನು ನಡೆಸಿಕೊಂಡ ರೀತಿ, ಆತನ ಮಕ್ಕಳ ಅಟ್ಟಹಾಸ, ಸಹಾಯಕರ ದರ್ಪ, ಬೆಂಬಲಿಗರ ದುಂಡಾವರ್ತಿ ಮಾಡಿದ ಭ್ರಷ್ಟಾಚಾರ ಎಲ್ಲಕ್ಕೂ ಶ್ರೀಸಾಮಾನ್ಯ ತನ್ನದೇ ರೀತಿಯಲ್ಲಿ ಉತ್ತರ ಕೊಡುತ್ತಾನೆ.

ಅದು ಅದೃಶ್ಯ ಓಟು. ಅದೀಗ ಶಿಕಾರಿಪುರದಲ್ಲಿ ಭಾವೀ ಮುಖ್ಯಮಂತ್ರಿ ಅಭ್ಯರ್ಥಿ ಯಡಿಯೂರಪ್ಪನವರ ಕೊರಳಿಗೆ ಉರುಳಾಗುವ ಲಕ್ಷಣಗಳೂ ನಿಚ್ಚಳವಾಗಿವೆ.

ನಾನು ಮುಖ್ಯಮಂತ್ರಿ ಅಭ್ಯರ್ಥಿ. ಆದರೆ ನನ್ನ ವಿರುದ್ಧ ಎಲ್ಲಾ ಪಕ್ಷಗಳು ಸೇರಿ ಬಂಗಾರಪ್ಪನವರನ್ನು ಎತ್ತಿಕಟ್ಟಿದ್ದಾರಲ್ಲ; ಅವರ್‍ಯಾಕೆ ಬಂಗಾರಪ್ಪನವರನ್ನ ಮುಖ್ಯಮಂತ್ರಿ ಅಭ್ಯರ್ಥಿ ಅಂತ ಘೋಷಣೆ ಮಾಡಲ್ಲ?


ಹಾಗಂತ ಕಂಡಕಂಡಲ್ಲಿ ಭಾಷಣ ಮಾಡುವ ಬಿಜೆಪಿ ನಾಯಕ ಯಡಿಯೂರಪ್ಪನವರಿಗೆ ಶಿಕಾರಿಪುರದ ಜನ ಕೊಡುವ ಉತ್ತರ ಕೂಡ ಅಷ್ಟೇ ಕುತೂಹಲಕಾರಿ. ಈ ಮನುಷ್ಯ ಇಪ್ಪತ್ತು ತಿಂಗಳ ಕಾಲ ಮಂತ್ರಿಯಾಗಿದ್ದನಲ್ಲ, ಯಾರಾದ್ರೂ ಶಿಕಾರಿಪುರದ ಜನ ಇವನನ್ನ ಬೆಂಗಳೂರಿಗೆ ಹೋಗಿ ನೋಡೋಕ್ಕಾಗಿತ್ತಾ? ಕನಿಷ್ಠ ಬಂಗಾರಪ್ಪ ತನ್ನ ಕ್ಷೇತ್ರದಿಂದ ಯಾರೇ ಬಂದ್ರೂ ಅವರಿಗೆ ಕಾರು ಮಾಡಿಸಿಕೊಟ್ಟು ಬೆಂಗಳೂರು ಸುತ್ತಿಸಿ ಊಟ ಹಾಕಿಸಿ ಬಸ್ ಚಾರ್ಜ್ ಕೊಟ್ಟು ಕಳಿಸ್ತಾನೆ. ಈ ಯಡಿಯೂರಪ್ಪ ಮಂತ್ರಿಯಾಗಿದ್ದಷ್ಟೂ ದಿನ ಯಾರನ್ನ ಮಾತಾಡಿಸ್ದ? ಶಿಕಾರಿಪುರದ ನಾಲ್ಕು ಜನಕ್ಕಾದ್ರೂ ಕೆಲಸ ಕೊಡಿಸಿದ್ನಾ? ಕಷ್ಟ ಅಂತ ಹೇಳಿಕೊಂಡು ಬೆಂಗಳೂರಿಗೆ ಹೋಗಿ ಶಿಕಾರಿಪುರದ ಜನ ಯಡಿಯೂರಪ್ಪನ್ನ ಮಾತಾಡಿಸೋ ಹಾಗಿತ್ತಾ? ಕನಿಷ್ಠ ತನ್ನ ಬೆಂಬಲಿಗರಿಗೂ ಏನೇನೂ ಮಾಡದವನು, ತನ್ನ ನಾದಿನಿಯರ ಆಸ್ತಿಯನ್ನೇ ದೋಚಿ ಹಿಂಸೆ ಕೊಟ್ಟವನು ಶಿಕಾರಿಪುರಕ್ಕೆ ಏನು ಮಾಡ್ತನೆ? ವಿರೋಧ ಪಕ್ಷದ ನಾಯಕನಾಗಿ ಇಷ್ಟು ದಿನಾನೇ ಏನೂ ಮಾಡದವನು ಇನ್ನು ಗೆದ್ದು ಮುಖ್ಯಮಂತ್ರಿಯಾಗಿ ಏನಾರ ಮಾಡೋದುಂಟಾ?

ಶಿಕಾರಿಪುರದ ಯಾರೇ ದಾರಿಹೋಕನನ್ನು ನಿಲ್ಲಿಸಿ ಕೇಳಿದರೂ ಉತ್ತರ ಇದಕ್ಕಿಂತ ಭಿನ್ನವೇನಲ್ಲ. ಇಪ್ಪತ್ತು ತಿಂಗಳ ಕಾಲ ಉಪಮುಖ್ಯಮಂತ್ರಿಯಾಗಿದ್ದ ಯಡ್ಡಿ ಶಿಕಾರಿಪುರಕ್ಕೆ ಅಂತಲೇ ನಾನೂರು ಕೋಟಿಯ ಸ್ಪೆಷಲ್ ಪ್ಯಾಕೇಜ್ ತಂದರು. ಅಷ್ಟೊಂದು ದುಡ್ಡಲ್ಲಿ ಶಿಕಾರಿಪುರ ಸ್ವರ್ಗವಾಗಬೇಕಿತ್ತು. ಬಂದ ನಾನೂರೂ ಕೋಟಿ ದುಡ್ಡು ಕಳಪೆ ಕಾಮಗಾರಿಯ ಹೆಸರಲ್ಲಿ ಯಡ್ಡಿ ಛೇಲಾಗಳೇ ನುಂಗಿ ನೀರು ಕುಡಿದರು. ಮನಸ್ಸು ಮಾಡಿದರೆ ಯಡಿಯೂರಪ್ಪ ಶಿಕಾರಿಪುರದ ಸಾವಿರಾರು ಜನಕ್ಕೆ ಕೆಲಸ ಕೊಡಿಸಬಹುದಿತ್ತು. ಕನಿಷ್ಠ ತನ್ನನ್ನು ಕಂಡು ಕಷ್ಟ ಹೇಳಿಕೊಳ್ಳಲು ಬಂದ ಶಿಕಾರಿಪುರದ ಜನರನ್ನು ಬಂಗಾರಪ್ಪನವರಂತೆ ಬೆಂಗಳೂರು ಸುತ್ತಿಸುವುದು ಹಾಳಾಗಲಿ, ನಿಂತು ಮಾತನಾಡಿಸಿದರೂ ಸಾಕಿತ್ತು, ಇವತ್ತು ಇಡೀ ಶಿಕಾರಿಪುರ ಯಡಿಯೂರಪ್ಪನವರನ್ನು ಕೊಂಡಾಡುತ್ತಿತ್ತು.



ಆದರೆ ಯಡಿಯೂರಪ್ಪ ಊರಿಗೆ ಉಪಕರಿಸುವುದು ಒತ್ತಟ್ಟಗಿರಲಿ, ತನ್ನ ನಾದಿನಿಯರ ಆಸ್ತಿಯನ್ನೇ ಕಬಳಿಸಿ ಅವರನ್ನು ಬೀದಿಗೆ ದಬ್ಬಲು ಹವಣಿಸಿದ. ತನ್ನನ್ನು ಓಟುಕೊಟ್ಟು ಗೆಲ್ಲಿಸಿದ ಶಿಕಾರಿಪುರದ ಜನರನ್ನು ನಾಯಿನರಿಗಳಿಗಿಂತಲೂ ಕೀಳಾಗಿ ಕಂಡ. ಕೈಹಿಡಿದ ಹೆಂಡತಿ ಬದುಕನ್ನೇ ನಾಶ ಮಾಡಿ ತನ್ನ ಮಗಳ ಸಮಾನ ಎಂದವಳ ಜೊತೆಗೇ ಚಕ್ಕಂದಕ್ಕಿಳಿದ. ಒಂದಿಬ್ಬರ ಹೊರತಾಗಿ ಯಾರಿಗೂ ಕೆಲಸ ಕೊಡಿಸಲಿಲ್ಲ. ಶಿಕಾರಿಪುರದ ಅಭಿವೃದ್ಧಿಗೆಂದು ಬಂದ ವಿಶೇಷ ಪ್ಯಾಕೇಜಲ್ಲಿ ಯಡ್ಡಿಯ ಮಕ್ಕಳು, ಅಳಿಯಂದಿರು, ಛೇಲಾಗಳೆಲ್ಲ ಕುಬೇರರಾದರು. ಇವತ್ತು ತಾನು ಮುಖ್ಯಮಂತ್ರಿಯಾಗ್ತೀನಿ ತನಗೆ ಓಟು ಕೊಡಿ ಎಂದು ಜನರೆದುರು ನಿಂತು ಕಂಠಪಾಠ ಒಪ್ಪಿಸಿದ ಮಾತ್ರಕ್ಕೆ ಜನ ಹಳೆಯದ್ದನ್ನೆಲ್ಲ ಮರೆತು ಬಿಡುತ್ತಾರಾ?


ಕಳಪೆ ಕಾಮಗಾರಿಯನ್ನು ಪ್ರಶ್ನಿಸಿದ ಹೋರಾಟಗಾರ್ತಿ ವಿಜಯಲಕ್ಷ್ಮಿ ಕಂಚುಗಾರರನ್ನು ಯಡ್ಡಿಯ ಮಕ್ಕಳು ನಡುರಸ್ತೆಯಲ್ಲಿ ಹಿಡಿದು ಬಡಿದದ್ದು, ಮೇಲಿಂದ ಮೇಲೆ ಸುಳ್ಳು ಕೇಸು ಹಾಕಿಸಿ ಅವರನ್ನು ಜೈಲಿಗೆ ಹಾಕಿದ್ದು ಯಡ್ಡಿ ಮಗನ ಪುಂಡರ ಗ್ಯಾಂಗಿನ ಹಾವಳಿ ಗಳು, ಯಡ್ಡಿ ಛೇಲಾಗಳ ಕಳಪೆ ಕಾಮಗಾರಿ ಕರ್ಮಕಾಂಡಗಳೆ ಶಿಕಾರಿಪುರದ ಅದೃಶ್ಯ ಮತದಾರನ ಸುಪ್ತ ಮನಸ್ಸಿನಲ್ಲಿ ಕೆಂಡವಾಗೇ ಉಳಿದುಬಿಟ್ಟಿದೆ.



ಮಹಾಲಿಂಗಪ್ಪ | ರಾಜಪ್ಪ | ಹಾಲಪ್ಪ | ಮಾಲತೇಶ

ಅದಕ್ಕೆ ಸದ್ಯ ಯಡ್ಡಿಯ ಮಕ್ಕಳು ಹರಿಸುತ್ತಿರುವ ಹಣ ಮತ್ತು ಹೆಂಡದ ಹೊಳೆಯಿದೆಯಲ್ಲ, ಅದು ಅದೃಶ್ಯ ಮತದಾರನನ್ನು ಇನ್ನಷ್ಟು ಕೆಣಕುತ್ತಿದೆ. ಯಡ್ಡಿ ಮುಖ್ಯಮಂತ್ರಿಯಾಗುವುದಿರಲಿ ಉಪಮುಖ್ಯಮಂತ್ರಿಯಾದರೂ ಶಿಕಾರಿಪುರಕ್ಕೆ ಬಂದದ್ದು ಆತನ ಮಕ್ಕಳು ಮತ್ತು ಛೇಲಾಗಳ ಅಟ್ಟಹಾಸವೇ ಹೊರತು ಜನಸಾಮಾನ್ಯರಿಗೆ ನಯಾಪೈಸೆಯ ಪ್ರಯೋಜನವಿಲ್ಲ ಎಂಬುದು ಈಗಾಗಲೇ ಸಾಬೀತಾಗಿಬಿಟ್ಟಿದೆ.


ಅದು ಯಡಿಯೂರಪ್ಪಂಗೂ ಚೆನ್ನಾಗಿ ಗೊತ್ತಾಗಿದೆ. ಅದಕ್ಕಿಂತ ಇಲ್ಲಿನ ಬಿಜೆಪಿಗಳು ನಡೆಸುತ್ತಿರುವ ಕಾರಸ್ಥಾನವೂ ಕುತೂಹಲಕಾರಿಯಾಗಿದೆ. ಬಂಗಾರಪ್ಪನವರ ಎರಡೂ ಕಿಡ್ನಿ ಕೆಟ್ಟಿರೋದ್ರಿಂದ ಅವರು ಗೆದ್ದ ಒಂದೇ ವರ್ಷಕ್ಕೆ ಮತ್ತೆ ಉಪಚುನಾವಣೆ ಗ್ಯಾರಂಟಿಯಂತೆ. ಲಿಂಗಾಯಿತ ನೊಬ್ಬ ಮುಖ್ಯಮಂತ್ರಿ ಆಗ ಬಾರದು ಅಂತಲೇ ಜೆಡಿಎಸ್, ಕಾಂಗ್ರೆಸ್ ಮತ್ತು ಎಸ್‌ಪಿಗಳೆಲ್ಲ ಒಟ್ಟಾಗಿವೆಯಂತೆ. ಯದಿ ಯೂರಪ್ಪ ಸೋತು ಹೋದರೆ ಶಿಕಾರಿಪುರಕ್ಕೆ ಬರಬೇಕಿದ್ದ ಸಾವಿರ ಕೋಟಿ ರೂಪಾಯಿ ತಪ್ಪುತ್ತಂತೆ!



ಇದು ಯಡ್ಡಿ ಗ್ಯಾಂಗ್ ಶಿಕಾರಿಪುರದಲ್ಲಿ 'ಬಂ' ವಿರುದ್ಧ ಹಬ್ಬಿಸುತ್ತಿರುವ ಪ್ರಮುಖ ವದಂತಿಗಳಾದರೆ, ಹರಿಸುತ್ತಿರುವ ಆಮಿಷದ ಪಟ್ಟಿ ಇನ್ನೂ ಭಯಂಕರ.

ಶಿಕಾರಿಪುರದ ಒಟ್ಟು 173 ಹಳ್ಳಿಗಳ ಐನೂರ ಹತ್ತೊಂಭತ್ತು ಸ್ತ್ರೀಶಕ್ತಿ ಸಂಘಗಳಿಗೆ ಅಂತಲೇ ತಲಾ 25 ಸಾವಿರ ರೂಪಾಯಿಯಂತೆ, ಒಂದು ಕೋಟಿಯ ರೊಕ್ಕ. ಪ್ರತಿ ಅಂಗನವಾಡಿ ಕಾರ್ಯಕರ್ತೆಯೊಬ್ಬಳಿಗೆ ಕಾಲು ಕೇಜಿಯ ಬೆಳ್ಳಿತಟ್ಟೆ. ಯಾವ್ಯಾವ ಹಳ್ಳಿಗೆ ಬಂಗಾರಪ್ಪ ಕಾಲಿಡುತ್ತಾರೋ ಅದನ್ನು ಹಿಂಬಾಲಿಸಿ ಮಾಹಿತಿ ಕೊಡಲೆಂದೇ ಎರಡು ಕ್ವಾಲೀಸ್ ಗಾಡಿಗಳು. ಪ್ರತಿ ಮತದಾರನಿಗೆ ಕಮ್ಮಿಯೆಂದರೂ ಸಾವಿರ ರೂಪಾಯಿಯ ಒಂದು ನೋಟು, ಪ್ರತಿ ಹತ್ತು ಮತದಾರನಿಗೆ ಅಂತಲೇ ಒಬ್ಬ ಆರೆಸ್ಸೆಸ್ ಕಾರ್ಯಕರ್ತನ ನೇಮಕ. ರಾಜ್ಯದ ಬೇರೆ ಬೇರೆ ಭಾಗಗಳಿಂದ ಬಂದ ಭಜರಂಗದಳ ಮತ್ತು ಎಬಿವಿಪಿ ಕಾರ್ಯಕರ್ತರ ಪ್ರತ್ಯೇಕ ತಂಡ.....!

ಇದು ಬಂಗಾರಪ್ಪ ಸೋಲಿಗೆ ಯಡ್ಡಿ ಗ್ಯಾಂಗ್ ಹೆಣೆದ ಚಕ್ರವ್ಯೂಹ.



ಮೊನ್ನೆಯಷ್ಟೇ ಹೊಸೂರು ಹೋಬಳಿಯಲ್ಲಿ 'ಬಂ' ಮತ ಯಾಚಿಸಿ ಬಂದರೆ ಅದರ ಮರುದಿನವೇ ಯಡ್ಡಿ ಮಗ ರಾಘವೇಂದ್ರನ ಪಡೆ ಹೊಸೂರಿಗೆ ದಾಳಿಯಿಟ್ಟು ದುಡ್ಡು ಹಂಚಿದೆ. ಇಡೀ ಹೊಸೂರು ಹೋಬಳಿಯ ಉಸ್ತುವಾರಿಗೆಂದು ಬಿಜೆಪಿಯ ಜಿಲ್ಲಾ ಪಂಚಾಯ್ತಿ ಸದಸ್ಯ ರಾಮಾನಾಯ್ಕ ಮತ್ತು ಮಾಜಿ ಪುರಸಭಾಧ್ಯಕ್ಷ ಇಟ್ಟಿಗೆ ಹಳ್ಳಿ ಶಿವಾನಂದನನ್ನು ಯಡ್ಡಿ ನೇಮಿಸಿದ್ದಾರೆ. ಈಸೂರು ಹೋಬಳಿಯ ಪೂರ್ತಿ ಉಸ್ತುವಾರಿ ನೋಡಿಕೊಳ್ಳುತ್ತಿರುವವನು 'ಸರ್ವಜ್ಞ' ಎಂಬ ಸತ್ತ ಪತ್ರಿಕೆಯ ಚಿಡ್ಡಿ ಸಂಪಾದಕ ಮಠದ್. ತಾಳಗುಂದ ಹೋಬಳಿಗೆ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷನಾಗಿದ್ದ ಖದೀಮ ಅಗಡಿ, ಶಿರಾಳಕೊಪ್ಪಕ್ಕೆ ಚನ್ನವೀರ ಶೆಟ್ಟಿ, ಬೆಳಕಿಗೆ ಪಾಲಾಕ್ಷಪ್ಪ, ಉಡುಗಣಿ ಹೋಬಳಿಯ ಉಸ್ತುವಾರಿಗೆಂದೇ ಕೊಳಗಿ ರೇವಣಪ್ಪ, ಕಸಬಾ ಹೋಬಳಿಗೆ ಮತ್ತೊಬ್ಬ ಮಾಜಿ ಪುರಸಭಾಧ್ಯಕ್ಷ ಶಿವಕುಮಾರ್ ಇತ್ಯಾದಿ ಲಿಂಗಾಯತ ಲೀಡರುಗಳನ್ನೇ ಆಯ್ದು ಆಯಾ ಹೋಬಳಿಗಳಲ್ಲಿ ರೊಕ್ಕ ಹಂಚುವ ಕೆಲಸಕ್ಕೆ ಬಿಟ್ಟಿದ್ದು ಯಡ್ಡಿಯ ಜಾತಿಬುದ್ಧಿಗೆ ಉದಾಹರಣೆಯಷ್ಟೇ.

ಶಿಕಾರಿಪುರ ಟೌನ್‌ನ ಆಯಾ ವಾರ್ಡು ಗಳ ಕೌನ್ಸಿಲರ್‌ಗಳ ಪೈಕಿ ಪಿ.ಎಸ್. ಮೋಹನ್, ಶಿವಕುಮಾರ್, ಭದ್ರಾ ಪುರದ ಹಾಲಪ್ಪ, ಸುಕೇಂದ್ರಪ್ಪ, ಬೆಂಕಿ ಮಂಜಪ್ಪ ಇತ್ಯಾದಿ ಕುರುಬರ ಬಗ್ಗೆ ಯಡ್ಡಿಗೆ ಒಳಗೊಳಗೇ ಅನುಮಾನ. ಎಲ್ಲಿ ತನ್ನ ವಿರುದ್ಧ ಒಳಗೊಳಗೆ ಕತ್ತಿ ಮಸಿಯುತ್ತಾರೋ ಎಂಬ ಅಳುಕು. ಕುರುಬನೆಂಬ ಒಂದೇ ಕಾರಣಕ್ಕೆ ಮೋಹನ್‌ಗೆ ಪುರಸಭಾಧ್ಯಕ್ಷಗಿರಿ ತಪ್ಪಿಸಿದ ಯಡ್ಡಿಯ ವಿರುದ್ಧ ಕುರುಬರಲ್ಲಿ ಮೊದಲೇ ಸಿಟ್ಟಿದೆ. ಅದು ಯಡ್ಡಿಗೆ ಮನದಟ್ಟಾಗಿರುವುದರಿಂದಲೇ ಇಂಥ ಲಿಂಗಾಯಿತೇತರ ಬಿಜೆಪಿ ನಾಯಕರ ಮೇಲೆ ಕಣ್ಣಿಡುವುದಕ್ಕೆಂದೇ ಮಾಜಿ ಎಮ್ಮೆಲ್ಸಿ ಲಿಂಗಾಯತರ ಶಾಂತವೀರಪ್ಪ ಗೌಡನನ್ನು ಛೂ ಬಿಟ್ಟಿದ್ದಾರೆ. ಈ ಶಾಂತವೀರಪ್ಪಗೌಡನ ಮಗ ರಾಘವೇಂದ್ರ ಹೇಳಿಕೇಳಿ ಅಪಾಪೋಲಿ!

ಸರಿಸುಮಾರು 1,61,000 ದಷ್ಟು ಮತದಾರರಿರುವ ಶಿಕಾರಿಪುರದಲ್ಲಿ ಲಿಂಗಾಯತರೇ 46,000 ದಷ್ಟಿದ್ದಾರೆ. ಲಂಬಾಣಿಗಳ ಸಂಖ್ಯೆ 28,000

ಮೈತ್ರಾದೇವಿಯ ಸಂಶಯಾಸ್ಪದ ಸಾವು



ಪತ್ನಿಯ ದುರಂತ ಮತ್ತು ಪಾಪದ ಕೊಡ ಒಟ್ಟಿಗೇ ತುಂಬರಬೇಕು. ಅಧಿಕಾರ ಸಿಕ್ಕಿದ್ದೇ ಯಡ್ಡಿ ಗ್ಯಾಂಗ್ ಮೆರೆದ ಅಟ್ಟಹಾಸದ ಬಗ್ಗೆ ಶಿಕಾರಿಪುರದ ಜನಕ್ಕೆ ಎಷ್ಟೆಲ್ಲ ಸಿಟ್ಟಿದೆಯೋ ಅದಕ್ಕಿಂತಲೂ ಹೆಚ್ಚಿಗೆ ಆಕ್ರೋಶವಿರುವುದು ಪತ್ನಿ ಮೈತ್ರಾದೇವಿಯ ದುರಂತದ ಬಗ್ಗೆ.

ಮೈತ್ರಾದೇವಿ ಸತ್ತಿದ್ದು ಆಕಸ್ಮಿಕವಲ್ಲ ಎಂಬುದು ಇಡೀ ಶಿಕಾರಿಪುರಕ್ಕೇ ಮನದಟ್ಟಾಗಿದೆ. ಅದಕ್ಕೆ ಮುಖ್ಯ ಕಾರಣ ಮೈತ್ರಾದೇವಿಯ ಇಬ್ಬರು ತಮ್ಮಂದಿರು ಮತ್ತವರ ಪತ್ನಿಯರಿಗೆ ಯಡ್ಡಿ ಕೊಟ್ಟ ಹಿಂಸೆಯನ್ನು ಜನ ಕಣ್ಣಾರೆ ಕಂಡಿದ್ದು. ಬೂಕನಕೆರೆಯಿಂದ ಮನೆ ಕೆಲಸದ ಆಳಾಗಿ ಶಿಕಾರಿಪುರದ ವೀರಭದ್ರಾಶಾಸ್ತ್ರಿಗಳ ಮನೆ ಹೊಕ್ಕ ಯಡಿಯೂರಪ್ಪ ಕ್ರಮೇಣ ಅವರ ಮಗಳು ಮೈತ್ರಾದೇವಿಯನ್ನೇ ಮದುವೆಯಾಗಿದ್ದು, ಆನಂತರ ಮೈತ್ರಾದೇವಿಯವರ ತಂಗಿ ಭ್ರಮರಾಂಭ ಗರ್ಭವತಿಯಾಗಿ ಬಾವಿಯಲ್ಲಿ ಹೆಣವಾಗಿದ್ದು, ಆನಂತರ ವೀರಭದ್ರಾಶಾಸ್ತ್ರಿಗಳು ಯಡ್ಡಿಯನ್ನು ಮನೆಯಿಂದ ಹೊರದಬ್ಬಿದ್ದು, ಅದೇ ಕೊರಗಿಗೆ ಬಿದ್ದು ವೀರಭದ್ರಾ ಶಾಸ್ತ್ರಿಗಳು ಮತ್ತವರ ಪತ್ನಿ ಹಾಸಿಗೆ ಹಿಡಿದು ಸತ್ತಿದ್ದು, ಆನಂತರ ಇಡೀ ವೀರಭದ್ರಾಶಾಸ್ತ್ರಿಗಳ ಆಸ್ತಿಗೆ ಅಮರಿಕೊಂಡ ಯಡ್ಡಿ ಮೈತ್ರಾದೇವಿಯ ಇಬ್ಬರೂ ತಮ್ಮಂದಿರಿಗೆ ಹುಚ್ಚರ ಪಟ್ಟಕಟ್ಟಿ ಹುಚ್ಚಾಸ್ಪತ್ರೆಯಲ್ಲಿ



ಕೂಡಿಟ್ಟಿದ್ದು, ಕ್ರಮೇಣ ಅವರ ಪತ್ನಿಯರನ್ನು ಪೀಡಿಸಿ, ಅವರಿಗೆ ಹಿಂಸೆಕೊಟ್ಟು ಆಸ್ತಿ ಬರೆಸಿಕೊಂಡಿದ್ದು, ಯಡ್ಡಿಯ ಹಿಂಸೆ ತಾಳದೇ ಆ ಹೆಣ್ಣುಮಕ್ಕಳಿಬ್ಬರೂ ಶಿಕಾರಿಪುರದ ಯಡ್ಡಿ ವಿರೋಧಿಗಳ ಸಹಾಯ ಯಾಚಿಸಿದ್ದು, ಯಡ್ಡಿಯ ವಿರುದ್ಧ ಆತನ ನಾದಿನಿಯರೇ ಪೊಲೀಸರಿಗೆ ದೂರು ಕೊಟ್ಟಿದ್ದು ಇತ್ಯಾದಿಗಳೆಲ್ಲವನ್ನೂ ಶಿಕಾರಿಪುರದ ಜನ ಕಣ್ಣಾರೆ ಕಂಡಿದ್ದಾರೆ. ವೀರಭದ್ರಾಶಾಸ್ತ್ರಿಗಳ ಇಡೀ ಕುಟುಂಬ ಯಡ್ಡಿಯಿಂದಾಗಿಯೇ ಸರ್ವನಾಶವಾಗಿದ್ದನ್ನು ಕಂಡು ಮರುಗಿದ್ದಾರೆ.

ಕೈಹಿಡಿದ ಪತ್ನಿಯನ್ನೇ ಪೀಡಿಸಿದವನು, ನಾದಿನಿಯರ ಸೊತ್ತನ್ನೇ ಕಬಳಿಸಿದವನು ಊರಿಗೆ ತಾನೇ ಏನು ಮಾಡಿಯಾನು?

ಇದು ಶಿಕಾರಿಪುರದ ಜನರ ಪ್ರಶ್ನೆ. ಈ ಬಾರಿಯ ಫಲಿತಾಂಶವೇ ಅದಕ್ಕೆ ಉತ್ತರ ಕೊಡಲಿದೆ.

ಷ್ಟು. ಇವರನ್ನು ಬಿಟ್ಟರೆ ಮೂರನೇ ದೊಡ್ಡ ಸಂಖ್ಯೆಯ
ರುಬರು 22,000 ದಷ್ಟಿದ್ದಾರೆ. ಮುಸ್ಲಿಮರು 20,000,
ಈಡಿಗರು 8000, 2000 ದಷ್ಟು ಬ್ರಾಹ್ಮಣರು. 20,000
ಷ್ಟು ದಲಿತರೂ ಶಿಕಾರಿಪುರದಲ್ಲಿದ್ದಾರೆ. ಸದ್ಯ ಲಿಂಗಾಯತ
ಯಕರುಗಳಾದ ಕೆ. ಶೇಖರಪ್ಪ ನಳಿನಿಕೊಪ್ಪದ ಲಿಂಗಪ್ಪಗೌಡ,
ರುದಗಾರ್ನಳ್ಳಿ ಬಸವನಗೌಡ ಮತ್ತು ಗೊಗ್ಗದ
ಚನ್ನಪ್ಪಗೌಡರಂಥವರೆಲ್ಲ ಲಿಂಗಾಯತರ ಒಂದೇ ಒಂದು
ಟೂ ಬಂಗಾರಪ್ಪಗೆ ಹೋಗದಂತೆ ಘತ್ವಾ ಹೊರಡಿಸಿದ್ದಾರೆ.
ಹುಶಃ ತಾಲ್ಲೂಕಿನ ಇಡೀ ಲಿಂಗಾಯತ ಸಮೂಹ
ಂಗಾರಪ್ಪನ ಗೆಲ್ಲಿಸಲು ಒಗ್ಗಟ್ಟಾಗದೇ ಹೋಗಿದ್ದರೆ
ಳಿದ ಜಾತಿಗಳು ತಮ್ಮ ಪಾಡಾಗಿದ್ದು ಬದುಕುತ್ತಿದ್ದವು.

ಯಾವತ್ತು ಲಿಂಗಾಯತರೆಲ್ಲ ಜಾತಿಬುದ್ಧಿ ತೋರಲಾ
ಂಭಿಸಿದರೋ ಆತಂಕಕ್ಕೆ ಬಿದ್ದ ಇಡೀ ತಾಲ್ಲೂಕಿನ ಕುರು
ರೆಲ್ಲ ಬಂಗಾರಪ್ಪ ಬೆನ್ನಿಗೆ ನಿಲ್ಲುವುದು ಅನಿವಾರ್ಯ
ಾಯಿತು. ಮುಸ್ಲಿಮರಿಗಂತೂ ಬಂಗಾರಪ್ಪ ಬೆಂಬಲಿಸದೇ
ೇರೆ ದಾರಿಯೇ ಇಲ್ಲದಂತಾಯ್ತು. ಸಹಜವಾಗೇ ಈಡಿಗರು
ಂ' ನೆರವಿಗೆ ನಿಂತುಬಿಟ್ಟರು. ಉಳಿದಂತೆ ಅಂಬಾಣಿ
ಬಂಜಾರರು ಮತ್ತು ದಲಿತರಿಗೆ ಯಡ್ಡಿ ಬೆನ್ನಿಗೆ ನಿಂತ
ಾತಿವಂತ ಲಿಂಗಾಯತರನ್ನು ವಿರೋಧಿಸುವುದನ್ನು ಬಿಟ್ಟರೆ
ೇರೆ ಗತಿಯೇ ಇಲ್ಲವಾಯ್ತು.

ಯಾವ ಜಾತಿಬುದ್ಧಿಗೆ ಬಿದ್ದು ಯಡ್ಡಿ ಬಂಗಾರಪ್ಪರನ್ನು
ಣಿಯಲು ಹೊರಟರೋ ಅದೇ ಅವರ ಕೊರಳಿಗೆ
ರುಳಾಗಿ ಹೋಯಿತು. ಲಿಂಗಾಯತರ ವಿರುದ್ಧ ಶಿಕಾರಿ
ರದ ಉಳಿದೆಲ್ಲ ಜಾತಿಗಳು ಒಗ್ಗಟ್ಟಾಗಿದ್ದನ್ನು ಕಂಡೇ
ಸಗುಟ್ಟದ ಯಡ್ಡಿಗೆ ತನ್ನ ಸೋಲು ಶತಸ್ಸಿದ್ಧ ಎಂಬುದು
ಾತ್ತಾಗಿದೆ. ಅದಕ್ಕೆ ಮತದಾರರನ್ನೇ ಖರೀದಿಸುವ ಷಡ್ಯಂತ್ರ
ಾಪಿಸಿದ್ದಾರೆ. ಅದಕ್ಕೆಂದು ಲಾರಿ ಲೋಡುಗಟ್ಟಲೇ ಲಿಕ್ಕರ್
ರಿಸಿಟ್ಟುಕೊಂಡು ಮಲ್ಲೇನಹಳ್ಳಿಯ ನಾಲ್ಕು ಮನೆಗಳಲ್ಲಿ
ಡಿಟ್ಟವನು ಮಗ ರಾಘವೇಂದ್ರ. ಗ್ರಹಚಾರಕ್ಕೆ ಇದು
ೇಗೋ ಜನಕ್ಕೆ ಗೊತ್ತಾಗಿದೆ. ದೂರು ಕೊಟ್ಟದ್ದೇ ತಡ
ನಾವಣಾಧಿಕಾರಿಗಳು ದಾಳಿ ನಡೆಸಿ ಲಾರಿ ಲೋಡಿನಷ್ಟು
ಕ್ಕರ್ ವಶಪಡಿಸಿಕೊಂಡಿದ್ದಾರೆ.

ಇದು ಯಡ್ಡಿ ಗ್ಯಾಂಗ್ ದುರಾಚಾರಕ್ಕೆ ಜನ ಕೊಟ್ಟ
ೊದಲ ಪೆಟ್ಟಾಗಿತ್ತು. ಇದಾಗಿದ್ದೇ ಹುಷಾರಾದ ಚೆಡ್ಡಿಗಳು
ತಿ ಹತ್ತು ಮತದಾರನಿಗೊಬ್ಬ ಆರೆಸ್ಸೆಸ್ ಕಾರ್ಯಕರ್ತನನ್ನು
ಮಿಸಿದ್ದಾರೆ. ಮನೆಮನೆಗೆ ಭೇಟಿ ಕೊಟ್ಟು ಯಡಿಯೂರಪ್ಪ
ಕಾರಿಪುರವನ್ನು ಹೇಗೆಲ್ಲಾ ಅಭಿವೃದ್ಧಿಪಡಿಸಿದ್ದಾರೆಂದು
ಹೇಳಲು ಹೋದರೆ ಜನ ಕ್ಯಾಕರಿಸಿ ಉಗಿಯುತ್ತಿದ್ದಾರೆ.
ಚ್ಚುರಾಯನಕೆರೆಗೆ ಹತ್ತು ಕೋಟಿ ಕೊಟ್ಟಿದ್ದೇ ಆಗಿದ್ದರೆ
ಕಟ್ಟೆ ಏಕೆ ಕುಸಿದು ಬೀಳಬೇಕಿತ್ತು?

ಸಣ್ಣದೊಂದು ಮಳೆಗೆ ಅಂಜನಾಪುರ ಜಲಾಶಯದ
ಲೆಯ ಕಾಂಕ್ರಿಟ್ ಲೈನಿಂಗೇ ಕೊಚ್ಚಿ ಹೋಗಿದ್ದೇಕೆ?
ಮದ ರಸ್ತೆಗೆ ಐದು ಕೋಟಿ ಖರ್ಚಾಗಿದ್ದೇ ನಿಜವಾಗಿದ್ದರೆ
ಕಿದ ಟಾರೇಕೆ ಮಳೆ ನೀರಿನ ಜೊತೆ ಮೋರಿ
ಲಾಯಿತು? ಅಂಬಾರಕೊಪ್ಪ-ಮಾಸೂರು ರಸ್ತೆಗೆ ಅಷ್ಟು
ೋಟಿ ಸುರಿದದ್ದೇ ಹೌದಾದರೆ ಹಾಕಿದ ಟಾರು
ಾಯಿತು? ಬೇಗೂರು, ಮಟ್ಟಿಕೋಟೆ, ಕಾಗಿನೆಲೆ,
ಣ್ಣಾಳಿ ರಸ್ತೆಗಳೆಲ್ಲ ಕಿತ್ತು ಹಡಾಲೆದ್ದು ಹೋಗಿವೆಯಲ್ಲ
ಕ್ಕೆ ಹಾಕಿದ ಕೋಟಿ ಲೆಕ್ಕದ ರೊಕ್ಕ ಏನಾಯ್ತು?

ಇದು ಯಡ್ಡಿ ಬಂಟರನ್ನು ನಿಲ್ಲಿಸಿ ಶಿಕಾರಿಪುರದ
ಮಾನ್ಯ ಹಳ್ಳಿಗನೂ ಕೇಳುತ್ತಿರುವ ಪ್ರಶ್ನೆ. ಉತ್ತರ
ಡುವುದು ಬಹುಶಃ ಯಡ್ಡಿಗೂ ಕಷ್ಟ. ಏಕೆಂದರೆ
ಾರಿಪುರಕ್ಕೆ ಬಂದ ನಾನೂರು ಕೋಟಿಯ ಪ್ಯಾಕೇಜನ್ನು
ಡ್ಡಿ ಮಗ ರಾಘವೇಂದ್ರನ ದುಷ್ಟಕೂಟ ನುಂಗಿ ಹಾಕಿದ್ದು
ರಿಗೇ ಗೊತ್ತು. ಅಧಿಕಾರವಿದ್ದಷ್ಟೂ ದಿನ ಶಿಕಾರಿಪುರದ
ರನ್ನು ನಾಯಿ ನರಿಗಳಂತೆ ಕಂಡ ಯಡ್ಡಿಯ ಸೊಕ್ಕು
ತ್ತು.

ಈ ಪುರುಷಾರ್ಥಕ್ಕೆ ಇವನನ್ನು ಗೆಲ್ಲಿಸಬೇಕೆ? ನಾಳೆ
ಖ್ಯಮಂತ್ರಿಯಾದರೆ ದುಷ್ಟಕೂಟದ ಸೊಕ್ಕು ಮತ್ತಷ್ಟು
ತ್ತದೆಯೇ ಹೊರತು ಶಿಕಾರಿಪುರಕ್ಕೆ ಆಗುವ ಲಾಭ
ರಲ್ಲ!

ಬದಲಿಗೆ ಕಷ್ಟಸುಖಕ್ಕೆ ಬರುವ ಬಂಗಾರಪ್ಪನೇ ಗೆಲ್ಲಲಿ
ಎಂಬ ನಿರ್ಧಾರಕ್ಕೆ ಶಿಕಾರಿಪುರ ಬಂದುಬಿಟ್ಟಿದೆ.
ಾಯತರ ಹೊರತಾಗಿ ಬೇರೆಲ್ಲಾ ಜಾತಿಗಳು ಯಡ್ಡಿ
ಹಂಕಾರದ ವಿರುದ್ಧ ತಿರುಗಿ ಬಿದ್ದಿವೆ. ಸೋಲು
ಂಟಿಯೆಂಬುದು ಗೊತ್ತಾಗುತ್ತಿದ್ದಂತೆ ಯಡ್ಡಿ ಹಡೆ
ಸದೊಂದು ಹುನ್ನಾರಕ್ಕೆ ಕೈಹಾಕಿದೆ. ಅದು 'ಬಂ'
ಗೇಬಿದ್ದು ಭಿಕ್ಷೆ ಬೇಡುವುದು ಮತ್ತು ಐದು ಕೋಟಿಯ
ಕೆ ಸಲ್ಲಿಸುವುದು!

ಅಥವಾ ಹಾಗಂತ ಮತ್ತೊಂದು ಗುಲ್ಲೆಬ್ಬಿಸುವುದು!
ಶಿಕಾರಿಪುರದ ಮಟ್ಟಿಗೆ ಇದ್ಯಾವುದೂ ಫಲ ಕಾಣುವ
ಗಳೇ ಕಮ್ಮಿ.

ಅಧಿಕಾರದ ಮದ, ದರ್ಪ, ದೌಲತ್ತು ಮತ್ತು ಹಗಲು
ೋಡೆಗೆ ಶಿಕಾರಿಪುರದ ಜನರ ಉತ್ತರ ಸಿದ್ಧಗೊಂಡಿದೆ.
'ಬಂ' ಗೆಲುವಿನ ಮೂಲಕ ಪ್ರಕಟಗೊಳ್ಳಲಿದೆ.

ರಾ. ಸೋಮನಾಥ್

■


'ಲಿಂಗಾಯತರು ಮೂರ್ಖರು'

-ಅನಂತಕುಮಾರ್



ಈ ಬಾರಿಯ ಚುನಾವಣೆಯಲ್ಲಿ ರಾಜ್ಯದ ಬಲಿಷ್ಠ ಸಮುದಾಯವಾದ ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿ ಪರ ಒಲವು ತೋರುತ್ತಿದ್ದಾರೆಂದು ಹಲವರು ಅಭಿಪ್ರಾಯಪಡುತ್ತಿದ್ದಾರೆ. ಆದರೆ ಅದೇ ಲಿಂಗಾಯತ ಸಮುದಾಯದ ಬಗ್ಗೆ ಬಿಜೆಪಿ ನಾಯಕರಲ್ಲಿ ಅಭಿಮಾನವಾಗಲಿ, ಕಾಳಜಿಯಾಗಲಿ ಇದೆಯೇ? ಕಿಂಚಿತ್ತೂ ಇಲ್ಲವೇ ಇಲ್ಲ ಮಾತ್ರವಲ್ಲ ಲಿಂಗಾಯತ ಸಮುದಾಯದ ಬಗ್ಗೆ ಬಿಜೆಪಿಯ ಹಿರಿಯ ನಾಯಕ ಅನಂತ್‌ಕುಮಾರ್ ಎಂತಹ ತುಚ್ಛ ಭಾವನೆಯನ್ನು ಹೊಂದಿದ್ದಾರೆ ಎಂಬುದಕ್ಕೆ ಇಲ್ಲಿ ಒಂದು ಸಾಕ್ಷಿಯನ್ನು ನೀಡುತ್ತಿದ್ದೇವೆ.

ನೆನಪಿದೆಯೇ, ಬಿ.ಬಿ. ಶಿವಪ್ಪ ಎಂಬ ಲಿಂಗವಂತ ಹಲವು ದಶಕಗಳ ಕಾಲ ತಮ್ಮ ಜೀವನವನ್ನು ಬ್ರಾಹ್ಮಣ ಜಾತಿ ಪಕ್ಷ ಎಂದೂ ಹಲವೊಮ್ಮೆ ಕರೆಯಲ್ಪಡುವ ಬಿಜೆಪಿ ಪಕ್ಷದ ಏಳಿಗೆಗಾಗಿ ಸವೆಸಿದರು. ಅದಕ್ಕೆಂದು ಅವರಿಗೆ ದಕ್ಕಿದ್ದು ಆ ಪಕ್ಷದ ರಾಜ್ಯಾಧ್ಯಕ್ಷನ ಜವಾಬ್ದಾರಿಯೇ ಹೊರತು ಯಾವುದೇ ಅಧಿಕಾರವಲ್ಲ. ಬದಲಾಗಿ ಶಿವಪ್ಪನಿಗಿಂತಲೂ ಕಿರಿಯನಾದ ಅನಂತಕುಮಾರ್‌ಗೆ ಕೇಂದ್ರ ಸಚಿವ ಸಂಪುಟದಲ್ಲಿ ಬೃಹತ್ ಇಲಾಖೆಗಳ ಮಂತ್ರಿ ಪದವಿ ಸಿಕ್ಕಿತ್ತು. ಇದೆಲ್ಲದರಿಂದ ನೊಂದ ಶಿವಪ್ಪ ಆ ಪಕ್ಷವನ್ನು 2005 ರಲ್ಲಿ ತೊರೆದು ಹೊರಬಂದಿದ್ದರು. ಆದರೆ ಈಗ ಆ ಪಕ್ಷಕ್ಕೆ ಅಧಿಕಾರ ಸಿಗಬಹುದೆಂಬ ದೂ(ದು)ರಾಲೋಚನೆಯಿಂದ ಮತ್ತೆ ಬಿಜೆಪಿಗೆ ಹಿಂದಿರುಗಿದ್ದಾರೆ. ಈಗಲೂ ಅವರಿಗೆ ಕಾದಿರುವುದು ಅವಮಾನವೇ ಹೊರತು ಅಧಿಕಾರವಲ್ಲ ಎಂಬುದರ ಅರಿವು ಅವರಿಗೆ ಆಗಲಿದೆ.



ಅದೆಲ್ಲ ಬದಿಗಿರಲಿ. ವಿಷಯ ಏನೆಂದರೆ ಶಿವಪ್ಪನವರು ಬಿಜೆಪಿ ಪಕ್ಷದಲ್ಲಿದ್ದಾಗ ಅಲ್ಲಿ ಹೇಗೆ ಬ್ರಾಹ್ಮಣರ ಹಿಡಿತ ಅನ್ಯಜಾತಿ ನಾಯಕರನ್ನು ಮೂಲೆಗುಂಪು ಮಾಡುತ್ತದೆ ಎಂಬ ಬಗ್ಗೆ ಒಂದು ಪ್ರಕರಣ ನಡೆದು ಅದಕ್ಕೆ ಸಂಬಂಧಿಸಿದಂತೆ ಅವರು ಅನಂತಕುಮಾರರಿಗೆ ಬರೆದ ಪತ್ರದ ಪೂರ್ಣಪಾಠ ಇಲ್ಲಿದೆ. ಇದನ್ನು ಸಾವಧಾನವಾಗಿ ಎಲ್ಲರೂ ಓದಬೇಕೆಂದು ವಿನಂತಿ.

ಜೂನ್ **10, 1999**

ಅನಂತಕುಮಾರ್ ಅವರಿಗೆ,

ಇತ್ತೀಚೆಗೆ ಪಕ್ಷದ ಕಚೇರಿ ಸಿಂಹಾಲಯದಲ್ಲಿ ಕೆಲವು ಪಕ್ಷದ ಆಂತರಿಕ ವಿಚಾರಗಳನ್ನು ಹಾಗೂ ಕಾರ್ಯಕ್ರಮಗಳ ರೂಪುರೇಷೆಗಳನ್ನು ಚರ್ಚಿಸಲು ಕೆಲವು ಹಿರಿಯ ನಾಯಕರುಗಳ ಸಭೆಯಲ್ಲಿ ತಾವು ಭಾಗವಹಿಸಿದ್ದಿರಿ. ಆ ಸಭೆ ಮುಗಿದನಂತರ ಮಾತನಾಡುತ್ತಾ ತಾವು ರಾಜ್ಯದ ಹಾಗೂ ದೇಶದ ರಾಜಕೀಯ ಪರಿಸ್ಥಿತಿ, ಜಾತಿ ರಾಜಕಾರಣ, ಮುಸ್ಲಿಂ ಮೂಲಭೂತವಾದ, 84 ನೇ ಇಸವಿಯಲ್ಲಿ ಸಿಖ್ಖರ ನರಮೇಧ, ಅಧ್ಯಕ್ಷೀಯ ಮಾದರಿ ಆಡಳಿತ ಪದ್ಧತಿಯ ಒಳಿತು ಮತ್ತು ಕೆಡುಕು, ನ್ಯಾಯಾಂಗ ಸುಧಾರಣೆ, ಕಾಂಗ್ರೆಸ್ ಇಬ್ಭಾಗ, ತುರ್ತು ಪರಿಸ್ಥಿತಿ, ಕಮ್ಯುನಿಸ್ಟ್ ವಿಚಾರಧಾರೆಯ ಸೋಲು-ಇವೆಲ್ಲದರ ಬಗ್ಗೆ ತಾವು ತಮ್ಮ ವಿಚಾರವನ್ನು ಮಂಡಿಸಿ ಬೆಳಕು ಚೆಲ್ಲಿದ್ದಿರಿ. ನಿಮ್ಮ ಅಪಾರವಾದ ಜ್ಞಾನ ಸಂಪಾದನೆಯನ್ನು ನೋಡಿ ನನಗೆ ಅಚ್ಚರಿಯು, ಸಂತಸವು ಆಯಿತು.

ಆದರೆ ತಾವು ಈ ವಿಚಾರಮಂಡನೆ ಸಂದರ್ಭದಲ್ಲಿ ಎರಡು ಪ್ರಮುಖ ವಿಷಯಗಳ ಬಗ್ಗೆ ನೀಡಿದ ವ್ಯಾಖ್ಯಾನ ನನಗೆ ಅತೀವ ನೋವನ್ನು ಹಾಗೂ ದಿಗ್ಭ್ರಮೆಯನ್ನುಂಟುಮಾಡಿತು. ಒಂದನೆಯ ವಿಚಾರವೆಂದರೆ ನೀವು ವೀರಶೈವ ಸಮುದಾಯದ ಬಗ್ಗೆ ಆಡಿದ ಅವಹೇಳನಕಾರಿ ಮಾತುಗಳು ಮತ್ತು ನೀಡಿರುವ ವ್ಯಾಖ್ಯಾನ. ಎರಡನೆ ವಿಚಾರವೆಂದರೆ ವರ್ಣಾಶ್ರಮ ಪದ್ಧತಿಯನ್ನು ತಾವು ಬಲವಾಗಿ ಪ್ರತಿಪಾದಿಸಿದ್ದು.


ಇನ್ನೂ ಮಾತನಾಡುತ್ತಾ ಲಿಂಗಾಯತರನ್ನು ಎರಡು ಪಂಗಡಗಳನ್ನಾಗಿ ವಿಂಗಡಿಸಬಹುದು. ಒಂದು ಪಂಗಡಕ್ಕೆ 'ಪಂಚಾಕ್ಷರಿ'ಗಳೆಂದು, ಎರಡನೆಯದಕ್ಕೆ 'ಷಡಾಕ್ಷರಿಗಳು' ಎಂದು ಹೆಸರಿಸಬಹುದು ಎಂದಿದ್ದಿರಿ. ಪಂಚಾಕ್ಷರಿಗಳೆಂದರೆ ಏನೂ ಗೊತ್ತಿಲ್ಲ ಎಂಬ ಐದು ಅಕ್ಷರದವರು ಮತ್ತು ಷಡಾಕ್ಷರಿಗಳು ಎಂದರೆ ಏನೇನು ಗೊತ್ತಿಲ್ಲ ಎಂಬ ಆರು ಅಕ್ಷರದವರು.

ಇದು ನೀವು ಲಿಂಗಾಯತರನ್ನು ಕುರಿತು ನೀಡಿದ ವ್ಯಾಖ್ಯಾನ. ಅಂದು ಅಲ್ಲಿ ಕೆ.ಎಸ್. ಈಶ್ವರಪ್ಪ, ಬಸವರಾಜ್, ಜಿ.ಎಂ. ರಾಜಾಚಾರ್, ಆಯನೂರು ಮಂಜುನಾಥ್, ರುಕ್ಮಯ್ಯ ಪೂಜಾರಿ, ಎಸ್. ಶಂಕರಪ್ಪ ಇನ್ನೂ ಕೆಲವರು ಹಾಜರಿದ್ದರು. ನಿಮ್ಮ ಈ ವ್ಯಾಖ್ಯಾನ ಕೇಳಿ ಪ್ರತಿಭಟಿಸಲಾಗದಷ್ಟು ದಿಗ್ಭ್ರಮೆಯಾಗಿ ಈ 'ಮಹಾನ್' ನಾಯಕರುಗಳೆಲ್ಲ ಕುಳಿತಿದ್ದರು. ಆದರೆ ನಿಮ್ಮ ಮಾತಿಗೆ ನಾನು ಕೂಡಲೇ ನನ್ನ ವಿರೋಧವನ್ನು ವ್ಯಕ್ತಪಡಿಸಿದೆ. ವಿಚಿತ್ರವೆಂದರೆ ಆಗಲೂ ನೀವು "ಇದು ನನ್ನ ಬಲವಾದ ವೈಯಕ್ತಿಕ ನಿಲುವು" ಎಂದೇ ನಿಮ್ಮ ಮಾತುಗಳನ್ನು ಸಮರ್ಥಿಸಿಕೊಂಡಿರಿ.

ಇಷ್ಟಕ್ಕೇ ನಿಲ್ಲಿಸದೆ ತಮ್ಮ ಈ ಅವಹೇಳನಕಾರಿ ವ್ಯಾಖ್ಯಾನವನ್ನು ಮುಂದುವರಿಸಿ ಲಿಂಗಾಯತ ಸಮುದಾಯದಿಂದ ಬಂದ ಮಹಾನ್ ಮುತ್ಸದ್ದಿ ಎಸ್. ನಿಜಲಿಂಗಪ್ಪ ಮತ್ತು ಈ ರಾಷ್ಟ್ರದ ಉಪರಾಷ್ಟ್ರಪತಿ ಸ್ಥಾನಕ್ಕೇರಿದ ಇದೇ ಸಮುದಾಯದ ಬಿ.ಡಿ. ಜತ್ತಿ ಅವರ ಬಗ್ಗೆಯೂ ನಿಮ್ಮದೇ ಆದ ವಿಚಾರಲಹರಿಗಳನ್ನು ತೇಲಿಬಿಟ್ಟಿರಿ. ನಿಮ್ಮ ಪ್ರಕಾರ ನಿಜಲಿಂಗಪ್ಪನವರು ಬ್ರಾಹ್ಮಣ ಹೆಣ್ಣುಮಗಳಾದ ಇಂದಿರಾ ಗಾಂಧಿಯವರನ್ನು ಎದುರು ಹಾಕಿಕೊಂಡು ರಾಜಕೀಯದಲ್ಲಿ ಮೂಲೆಗುಂಪಾದರು. ಅದೇ ಇಂದಿರಾ ಪರ ನಿಂತ ಜತ್ತಿ ಅವರು ಉಪರಾಷ್ಟ್ರಪತಿಗಳಾದರು. ಅಂದರೆ ಬ್ರಾಹ್ಮಣರನ್ನು ಯಾರೂ ಸಹ ಎದುರು ಹಾಕಿಕೊಳ್ಳಬಾರದೆಂಬುದು ನಿಮ್ಮ ಮಾತಿನ ತರ್ಕವಾಗಿತ್ತು.

ಇನ್ನೂ ಎರಡನೇ ವಿಚಾರವೆಂದರೆ ನೀವು ಅಂದು ವರ್ಣಾಶ್ರಮ ವ್ಯವಸ್ಥೆಯನ್ನು ಬಲವಾಗಿ ಸಮರ್ಥಿಸಿಕೊಂಡಿರಿ. ತಮ್ಮ ಪ್ರಕಾರ ವರ್ಣಾಶ್ರಮ ವ್ಯವಸ್ಥೆ ಭಗವಂತನ ಸೃಷ್ಟಿ!

ಈ ಸಂದರ್ಭದಲ್ಲಿ ನೀವು ನಿಮ್ಮನ್ನು ಪಕ್ಷದ ತಲೆ ಬ್ರಾಹ್ಮಣ ಎಂದು ಸ್ವಯಂ ಬಿಂಬಿಸಿಕೊಂಡಿರಿ. ಬಾಹುಗಳಾದ 4 ಉದರವನ್ನು (ಕ್ಷತ್ರಿಯ ಮತ್ತು ವೈಶ್ಯ) ಎಂದು ವ್ಯಾಖ್ಯಾನಿಸಿ ಇನ್ನಿತರೆ ಎಲ್ಲಾ ಜಾತಿ, ಲಿಂಗಾಯತ, ಒಕ್ಕಲಿಗ, ಕುರುಬ, ದಲಿತ ಮತ್ತು ಇತರ ಸಮುದಾಯಗಳನ್ನು ಪಕ್ಷದ ಕಾಲುಗಳೆಂದು ವ್ಯಾಖ್ಯಾನಿಸಿದ್ದೀರಿ. ಮುಂದುವರಿದು "ರಾಜಕೀಯ ಕಾರಣಗಳಿಗಾಗಿ ಈ ವಿಚಾರಧಾರೆಯನ್ನು ಬಹಿರಂಗವಾಗಿ ಮಂಡಿಸಲು ಸಾಧ್ಯವಿಲ್ಲ" ಎಂದೂ ಇದೇ ಸಂದರ್ಭದಲ್ಲಿ ಹೇಳಿದ್ದೀರಿ.



ಇವೆಲ್ಲವನ್ನೂ ಕೇಳಿದ ನಂತರ ಮನಸ್ಸಿಗೆ ಅತೀವ ನೋವು ಉಂಟಾಗಿದೆ. ತಮ್ಮಂತಹ ಕೊಳಕು ಮನಸ್ಸಿನ ಸಂಕುಚಿತ ಮನೋಭಾವದ ಮತ್ತು ಕೀಳು ಅಭಿರುಚಿಯ ವ್ಯಕ್ತಿತ್ವವನ್ನು ವ್ಯಕ್ತಿಯನ್ನು ರಾಷ್ಟ್ರದ ಮಹಾನ್ ನಾಯಕರಾದ ವಾಜಪೇಯಿಯವರು ತಮ್ಮ ಸಂಪುಟದಲ್ಲಿ ಅದ್ಯಾವ ಬಗೆಯಲ್ಲಿ ಸಹಿಸಿಕೊಂಡಿದ್ದಾರೆ ಎಂಬುದೇ ಅತ್ಯಂತ ದೊಡ್ಡ ಆಶ್ಚರ್ಯಕರ ಸಂಗತಿ. ಧಿಕ್ಕಾರವಿರಲಿ ನಿಮ್ಮ ಈ ಕೊಳಕು ಮನಸ್ಸಿಗೆ. ಧಿಕ್ಕಾರವಿರಲಿ ನಿಮ್ಮ ಈ ಅನ್ಯಜಾತಿಯ ದ್ವೇಷ ಭಾವನೆಗೆ.

ತಾವು ಕೇಂದ್ರ ಸಚಿವರು. ತಮಗೆ ಬಿಡುವಿಲ್ಲದ ಕಾರ್ಯಕ್ರಮಗಳು ಹಾಗೂ ಬಿರುಸಿನ ಪ್ರವಾಸಗಳು ಇದ್ದೇ ಇರುತ್ತವೆ. ಈ ಪತ್ರವನ್ನು ಅಂಚೆ ಅಥವಾ ಕೊರಿಯರ್ ಮೂಲಕ ಕಳುಹಿಸಿದರೆ ತಲುಪದೆ ಇರಬಹುದು ಅಥವಾ ತಲುಪಿದರೂ ತಲುಪಲಿಲ್ಲ ಎಂದು ಹೇಳಬಹುದು. ಹಾಗಾಗಿ ಪಕ್ಷದ ಆಧಾರಸ್ತಂಭ ಹಾಗೂ ಕಾರ್ಯಾಲಯದ ಕಾರ್ಯದರ್ಶಿಗಳಾದ ಜಿ.ಎಂ. ರಾಜಾಚಾರ್ ಅವರಲ್ಲಿ ಈ ಪತ್ರವನ್ನು ಕೊಟ್ಟು ತಮಗೆ ಖುದ್ದಾಗಿ ಕೊಡಬೇಕೆಂದು ವಿನಂತಿಸಿಕೊಂಡಿದ್ದೇನೆ.

-ಇಂತಿ,

ಬಿ.ಬಿ. ಶಿವಪ್ಪ

ಈ ಪತ್ರವನ್ನು ಓದಿ ನಂತರ ಲಿಂಗಾಯತರು ಸೇರಿದಂತೆ ಬ್ರಾಹ್ಮಣೇತರ ಜಾತಿಗಳ ಬಗ್ಗೆ ಬಿಜೆಪಿ ಪಕ್ಷಕ್ಕೆ, ಮತ್ತದರ ನಾಯಕರಿಗೆ ಎಂತಹ ತುಚ್ಛ ಭಾವನೆ ಇದೆ ಎಂದು ಎಲ್ಲರಿಗೂ ಅರ್ಥವಾಗುತ್ತದಲ್ಲವೇ?

ಅಂದಹಾಗೆ, ಈ ಪತ್ರದಲ್ಲಿನ ಹಲವು ವಾಕ್ಯಗಳನ್ನು ಇಲ್ಲಿ ಸ್ಪಷ್ಟಪಡಿಸಬೇಕಿದೆ. ನಿಜ ಇವತ್ತು ಲಿಂಗಾಯತ ಜಾತಿಯ ಬಿ.ಎಸ್. ಯಡಿಯೂರಪ್ಪನನ್ನು ಆ ಪಕ್ಷದ ಭಾವಿ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಲಾಗಿದೆ. ಆದರೆ ಅನಂತಕುಮಾರ್ ಅಭಿಪ್ರಾಯಪಟ್ಟಿರುವಂತೆ ಲಿಂಗಾಯತ ಯಡಿಯೂರಪ್ಪ ಆ ಸ್ಥಾನವನ್ನು ಅಲಂಕರಿಸಿದರೂ ರಾಜ್ಯದ ನಿಜವಾದ ಮುಖ್ಯಮಂತ್ರಿಯಂತೆ ವರ್ತಿಸುವುದು ಮತ್ತು ಹಿಂದಿನಿಂದಲೇ ಅಧಿಕಾರ ನಿರ್ವಹಿಸುವುದು "ಪಕ್ಷದ ತಲೆಯಾದ ಬ್ರಾಹ್ಮಣ"ನಾದ ತಾನೆಂಬುದು. ನೆನಪಿಡಿ, ಅವರೇ ಹೇಳಿರುವಂತೆ ಪಕ್ಷದ ಕೈಕಾಲುಗಳಾದ ಲಿಂಗಾಯತ, ಒಕ್ಕಲಿಗ, ಕುರುಬ, ದಲಿತ ಮತ್ತು ಇತರ ಜಾತಿಯವರು "ಬ್ರಾಹ್ಮಣ ತಲೆ"ಯ ಅಜ್ಞೆ ಇಲ್ಲದೆ ಸ್ವಯಂಚಲನಾಶಕ್ತಿ ಪಡೆದಿರುವುದಿಲ್ಲ.

ಅಧಿಕಾರದ ಆಸೆಗಾಗಿ ಯಡಿಯೂರಪ್ಪ ಬಸವ ತತ್ವಗಳನ್ನು ಎಂದೋ ಮರೆತಿರಬಹುದು, ಲಿಂಗಧರ್ಮವನ್ನು ತೊರೆದಿರಬಹುದು. ಆದರೆ ಲಿಂಗಾಯತರನ್ನು ಇಷ್ಟು ಅವಹೇಳನಕಾರಿಯಾಗಿ ನೋಡುವ ಪಕ್ಷಕ್ಕೆ ಮತ ನೀಡುವುದಕ್ಕೆ ಲಿಂಗಾಯತರೇನೂ ಪೆದ್ದರಲ್ಲ, ಅಲ್ಲವೇ?

ಇಲ್ಲಿ ಇನ್ನೊಂದು ಅಂಶವನ್ನು ದಾಖಲಿಸಬೇಕು. ನಾವಿಲ್ಲಿ ಮುದ್ರಿಸಿರುವ ಶಿವಪ್ಪನವರು ಬರೆದ ಪತ್ರ ಕಳೆದ ಚುನಾವಣಾ ಸಮಯದಲ್ಲಿ ವಿಜಯ ಕರ್ನಾಟಕ (ಏಪ್ರಿಲ್ 20, 2004)ದ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಲಿಂಗಾಯತರಿಗೆ ಮತ್ತು ಇತರ ಜಾತಿಯವರ ಮನಸ್ಸಿಗೆ ಘಾಸಿಗೊಳಿಸುವ ವಿಚಾರ ಯಾವುದೆಂದರೆ 1999 ರಲ್ಲಿ ಈ ಪ್ರಕರಣ ನಡೆದು ಶಿವಪ್ಪ ತಮ್ಮ ಅಸಮಾಧಾನವನ್ನು ತೋಡಿಕೊಂಡಾಗಲೂ ಅನಂತಕುಮಾರ್ ತನ್ನ ಈ ತುಚ್ಛವರ್ತನೆ ಬಗ್ಗೆ ವಿಷಾದ ವ್ಯಕ್ತಪಡಿಸುವುದಿರಲಿ, ಶಿವಪ್ಪನವರ ಪತ್ರಕ್ಕೆ ಕನಿಷ್ಠ ಪ್ರತಿಕ್ರಿಯೆಯನ್ನೂ ನೀಡಿರಲಿಲ್ಲ.

ಹಾಗೆಯೇ ಇದನ್ನು 2004 ರಲ್ಲಿ ವಿ.ಕ. ಪ್ರಕಟಿಸಿದಾಗಲೂ ಆತ ತನ್ನ ಅಭಿಪ್ರಾಯವನ್ನು ಬದಲಾಯಿಸಿಕೊಂಡಿದ್ದೇನೆಂದು ಸ್ಪಷ್ಟಪಡಿಸಿರಲಿಲ್ಲ. (ಅಂದಹಾಗೆ ಅಂದು ವಿ.ಕ.ದಂತಹ ಚೆಡ್ಡಿ ಪತ್ರಿಕೆಯಲ್ಲಿ ಈ ಸುದ್ದಿ ಪ್ರಕಟಗೊಳ್ಳಲು ಕಾರಣವಿತ್ತು. ಅಂದಿನ ವಿ.ಕ.ದ ಮಾಲೀಕ ವಿಜಯ್ ಸಂಕೇಶ್ವರ್‌ಗೂ ಅನಂತಕುಮಾರ್‌ಗೂ ವೈರತ್ವ ಏರ್ಪಟ್ಟಿತ್ತು. ಆದರೆ ಇವತ್ತು ಸಂಕೇಶ್ವರ್ ಎಂಬ ಮತ್ತೋರ್ವ ಲಿಂಗವಂತ ಕೂಡ ಬಿಜೆಪಿಗೆ ಮರಳಿದ್ದಾರೆ).

ಇದೆಲ್ಲದರ ಅರ್ಥ ಇಷ್ಟೇ. ಯಡಿಯೂರಪ್ಪ ಬಿ.ಬಿ. ಶಿವಪ್ಪ ಮತ್ತು ವಿಜಯ್ ಸಂಕೇಶ್ವರ್‌ರಂತಹ ಅಧಿಕಾರ ದಾಹಿಗಳಿಗೆ ಬಿಜೆಪಿ ಪಕ್ಷ ಲಿಂಗಾಯತ ಸಮುದಾಯವನ್ನಾಗಲಿ, ಕೊನೆಗೆ ಸ್ವತಃ ತಮ್ಮನ್ನಾಗಲಿ ಎಷ್ಟೇ ಅವಮಾನಪಡಿಸಿದರೂ ಪರವಾಗಿಲ್ಲ. ಆದರೆ ಅಧಿಕಾರದಾಹಿಗಳಲ್ಲದ, ಬಸವತತ್ವ ಪಾಲಿಸುವ, ಲಿಂಗಧರ್ಮ ಅನುಸರಿಸುವ ನಿಜವಾದ ಲಿಂಗಾಯತರಿಗೇನೂ ತಲೆ ಕೆಟ್ಟಿಲ್ಲ. ಲಿಂಗಾಯತರನ್ನು ಇಷ್ಟು ಅವಹೇಳನಕಾರಿಯಾಗಿ ನೋಡುವ ಪಕ್ಷಕ್ಕೆ ಮತ ಹಾಕಲು ಲಿಂಗಾಯತರು ಹುಚ್ಚರೇನಲ್ಲ.

ಹಾದಿ ಬೀದಿಯಲ್ಲಿ "ನನಗೆ ದ್ರೋಹ ಮಾಡಿದರು" ಎಂದು ಜನತಾದಳದ ವಿರುದ್ಧ ಅರಚಾಡುವ ಯಡಿಯೂರಪ್ಪ "ನನ್ನ ಸಮುದಾಯವನ್ನು ಅವಹೇಳನ ಮಾಡಬೇಡ" ಎಂದು ಅನಂತಕುಮಾರ್‌ನನ್ನು ತರಾಟೆಗೆ ತೆಗೆದುಕೊಳ್ಳುವ ತಾಕತ್ತು ಇಲ್ಲದ ಮನುಷ್ಯ. ಆತನನ್ನು ಲಿಂಗಾಯತರ ನಾಯಕ ಎಂದಿರಲಿ, ಆತನೋರ್ವ ಲಿಂಗಾಯತ ಎಂದು ಒಪ್ಪಿಕೊಂಡರೂ ಅದು ವೀರಶೈವರು ತಮಗೆ ತಾವೇ ಮಾಡಿಕೊಳ್ಳುವ ಅವಮಾನ.

ಲಿಂಗಾಯತರು ನಿಜವಾಗಲೂ ವೀರಶೈವರಾಗಿದ್ದರೆ ಈ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಿ ತಮ್ಮ ಸಮುದಾಯದ ಸ್ವಾಭಿಮಾನವನ್ನು ಮೆರೆಯಬೇಕಿರುವುದು ಇವತ್ತಿನ ತುರ್ತು ಅಗತ್ಯವಾಗಿದೆ.

(ವಿ.ಸೂ. : ಈ ಲೇಖನದ ಜೆರಾಕ್ಸ್ ಪ್ರತಿಗಳನ್ನು ಯಾರು ಬೇಕಾದರೂ ಹಂಚಬಹುದು)


ಚುನಾವಣೆ 2008

ದಾವಣಗೆರೆ: ಕಾಂಗ್ರೆಸ್‌ಗೆ ಜಯಭೇರಿ

ಈ ಚುನಾವಣೆಯಲ್ಲಿ ದಾವಣಗೆರೆ ಜಿಲ್ಲೆ ಕಾಂಗ್ರೆಸ್ ಪಾಲಾಗಲಿದೆ. ಜಿಲ್ಲೆಯಲ್ಲಿರುವ ಎಂಟು ಕ್ಷೇತ್ರಗಳ ಪೈಕಿ ಬಿಜೆಪಿ ಹೆಚ್ಚೆಂದರೆ ಮೂರು ಕ್ಷೇತ್ರಗಳಲ್ಲಿ ಆಯ್ಕೆಯಾಗಬಹುದು. ಉಳಿದ ಕ್ಷೇತ್ರಗಳನ್ನ ಕಾಂಗ್ರೆಸ್ ಬಾಚಿಕೊಳ್ಳಲಿದೆ. ದಾವಣಗೆರೆ ಉತ್ತರ ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಬಲ ಅಭ್ಯರ್ಥಿಯನ್ನು ಹಾಕಿದ್ದಾರೆ, ಅದೂ ಕೂಡ ಕಾಂಗ್ರೆಸ್ ಪಾಲಾಗಿ ಬಿಜೆಪಿ ಎರಡಕ್ಕೆ ತೃಪ್ತಿಪಟ್ಟುಕೊಳ್ಳಬೇಕಿತ್ತು. ಶಾಮನೂರು ಶಿವಶಂಕರಪ್ಪನ ಕಂತ್ರಿ ಬುದ್ಧಿಯಿಂದ ಇದು ತಪ್ಪಿಹೋಗಿದೆ.

ಚನ್ನಗಿರಿ: ವಡ್ನಾಳ್‌ಗೆ ಖಚಿತ ಗೆಲುವು!


ವಿರೂಪಾಕ್ಷಪ್ಪ


ಮಹಿಮಾ ಪಟೇಲ್

ಈ ಕ್ಷೇತ್ರದಲ್ಲಿ ನಡೆಯುತ್ತಿರುವ ಚುನಾವಣಾ ಸ್ಪರ್ಧೆಯು ಮೇಲ್ನೋಟಕ್ಕೆ ಚತುಷ್ಕೋನ ಸ್ಪರ್ಧೆಯಂತೆ ಕಾಣುತ್ತಿದೆ. ಆದರೆ ತ್ರಿಕೋನ ಸ್ಪರ್ಧೆ ಇದೆಯೆಂಬಂತೆ ಜನರ ಮಧ್ಯೆ ಚರ್ಚೆಯಾಗುತ್ತಿದೆ. ವಾಸ್ತವವಾಗಿ ಕಾಂಗ್ರೆಸ್‌ನ ವಡ್ನಾಳ್ ರಾಜಣ್ಣ ಮತ್ತು ಬಿಜೆಪಿಯ ಮಾಡಾಳು ವಿರೂಪಾಕ್ಷಪ್ಪನ ನಡುವೆ ಸ್ಪರ್ಧೆ ನಡೆಯುತ್ತಿದೆ.

ಕಾಂಗ್ರೆಸ್ ಪಕ್ಷದ ವಡ್ನಾಳ್ ರಾಜಣ್ಣ ಈ ಕ್ಷೇತ್ರದಿಂದ ಗೆಲ್ಲುವ ಸಾಧ್ಯತೆಗಳು ಕಾಣುತ್ತಿವೆ. ಒಂದು ಕಡೆ ಸಾದ ಲಿಂಗಾಯತರ ಮತಗಳು ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆ ಛಿದ್ರಗೊಳ್ಳುವುದರಿಂದ, ಇನ್ನೊಂದು ಕಡೆ ಕಾಂಗ್ರೆಸ್ ಪಕ್ಷಕ್ಕಿರುವ ನಿಗದಿತ ಮತಗಳು ಬೀಳುವುದರಿಂದ ರಾಜಣ್ಣನ ಗೆಲುವಿಗೆ ಸಹಕಾರಿಯಾಗುತ್ತವೆ.



ರಾಜಣ್ಣ

ಈ ಹಿಂದೆ ವಡ್ನಾಳ್ ರಾಜಣ್ಣ ಶಾಸಕನಾಗಿದ್ದಾಗ ಚನ್ನಗಿರಿ ಪಟ್ಟಣಕ್ಕೆ ಸುಸಜ್ಜಿತವಾದ ಬಸ್ ನಿಲ್ದಾಣವನ್ನು ಕಟ್ಟಿಸಿದ್ದು, ಧೂಳೆದ್ದು ಹೊಲಸಾಗುತ್ತಿದ್ದ ಚನ್ನಗಿರಿಯ ರಸ್ತೆಗಳನ್ನು, ಹಳ್ಳಿಗಳಿಗೆ ಹೋಗುವ ಲಿಂಕ್ ರಸ್ತೆಗಳನ್ನು ಡಾಂಬರೀಕರಣಗೊಳಿಸಿದ್ದನ್ನು ಚನ್ನಗಿರಿ ಮತದಾರರು ಮರೆತಿಲ್ಲ, ಜೊತೆಗೆ ವಡ್ನಾಳ್ ರಾಜಣ್ಣನ ನೇರವಾದ ನಡವಳಿಕೆ ಕೂಡ ಮತದಾರರು ಈತನನ್ನು ಬೆಂಬಲಿಸುವುದಕ್ಕೆ ಸಕಾರಣವನ್ನೊದಗಿಸಿದೆ.

ಹೊನ್ನಾಳಿ: ನರ್ಸ್ ರೇಣುಕಾಚಾರಿಗೆ ನರ ಕತ್ತರಿಸಲಿರುವ ಶಾಂತನಗೌಡ!


ಶಾಂತನಗೌಡ

ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳ ನಡುವೆ ನೇರವಾದ ಸ್ಪರ್ಧೆ ಈ ಕ್ಷೇತ್ರದಲ್ಲಿದೆ. ಈ ಕ್ಷೇತ್ರದಿಂದ ಈ ಹಿಂದೆ ಗೆದ್ದು ಹೋಗಿದ್ದ ಬಿಜೆಪಿ ನರ್ಸ್ ರೇಣುಕಾಚಾರ್ಯ ತಾನೇ ತನ್ನ ಕಂತ್ರಿ ಬುದ್ಧಿಯಿಂದ ಮೈಮೇಲೆಳೆದುಕೊಂಡ ಹಗರಣಗಳು "ಸುಮ್ಮನಿರಲಾರದೇ ಅದೆಲ್ಲೋ ಕೆರಕೊಂಡು ಗಾಯ ಮಾಡಿಕೊಂಡಂತಾಗಿವೆ."




ರೇಣುಕಾಚಾರ್ಯನ ಈ ಹಲ್ಕಟ್‌ಗಿರಿಗಳಿಂದಾಗಿಯೇ ಈ ಕ್ಷೇತ್ರದಲ್ಲಿ ಇವನ ಮತ್ತು ಬಿಜೆಪಿ ಪಕ್ಷದ ಇಮೇಜು ಪಾತಾಳಕ್ಕಿಳಿದಿದೆ. ಬಹಳಷ್ಟು ಮಂದಿ ಕಾರ್ಯಕರ್ತರು ಬಿಜೆಪಿ ಬಿಟ್ಟು ಕಾಂಗ್ರೆಸ್ ಪಕ್ಷವನ್ನು ಸೇರಿದ್ದಾರೆ.

ಕುರುಬ ಸಮಾಜದ ಧಾರ್ಮಿಕ ಕಾರ್ಯಕ್ರಮಕ್ಕೆ ರೇಣುಕಾಚಾರ್ಯ ಅಡ್ಡಿ ಉಂಟುಮಾಡಿದ್ದರಿಂದ 30 ಸಾವಿರ ಮತದಾರರನ್ನು ಹೊಂದಿರುವ ಕುರುಬ ಸಮಾಜವು ಬಿಜೆಪಿ ವಿರುದ್ಧ ನಿಂತಿರುವುದು ಈ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿನ ನಿರ್ಣಾಯಕ ಅಂಶವಾಗಿದೆ.


ಮೇಲಿನ ಎರಡು ಕಾರಣಗಳೊಂದಿಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶಾಂತನಗೌಡ ಈ ಹಿಂದೆ ಸೋತು ಈಗ ಅನುಕಂಪ ಗಳಿಸಿರುವುದು ಮತ್ತು ರೇಣುಕಾಚಾರ್ಯನಿಗೆ ಹೋಲಿಸಿದರೆ ಅತ್ಯಂತ ಸಭ್ಯನಾಗಿರುವ ಈತನನ್ನು ಈ ಬಾರಿ ಮತದಾರರು ಖಚಿತವಾಗಿ ಗೆಲ್ಲಿಸುವ ನಿರೀಕ್ಷೆಯಿದೆ.

ಜಗಳೂರು: ರಾಜೇಶನಿಗೆ ರಾಮಚಂದ್ರ ಸೆಡ್ಡು


ರಾಮಚಂದ್ರ

ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ನಡುವೆ ನೇರವಾದ ಹಣಾಹಣಿ ನಡೆಯುತ್ತಿದೆ. ಕಾಂಗ್ರೆಸ್ ಪಕ್ಷದ ಎಸ್.ವಿ.ರಾಮಚಂದ್ರ ಈ ಕ್ಷೇತ್ರದ ಗೆಲ್ಲುವ ಅಭ್ಯರ್ಥಿ ಎನ್ನುವುದು ಖಚಿತವಾಗುತ್ತಿದೆ.

ಬಿಜೆಪಿ ಅಭ್ಯರ್ಥಿ ರಾಜೇಶ ಇದೇ ಕ್ಷೇತ್ರದವನಾದರೂ ರಾಜಕೀಯಕ್ಕೆ ಹೇಗೆ ಹೊಸಬನೋ ಹಾಗೆಯೇ ಮತದಾರರಿಗೂ ಕೂಡಾ. ಈ ಕ್ಷೇತ್ರದಲ್ಲಿ ಸ್ಪರ್ಧಿಸಲು ಬಿಜೆಪಿ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದ ವಿಶ್ವನಾಥ್ ಬಿಜೆಪಿ ಭಿನ್ನಮತೀಯ ಅಭ್ಯರ್ಥಿಯಾಗಿ ಕಣದಲ್ಲಿದ್ದು ಏಳೆಂಟು ಸಾವಿರ ಮತಗಳನ್ನು ಪಡೆಯುವುದು ಮತ್ತು ಲಿಂಗಪ್ಪ ಎಂಬ ಬಿಜೆಪಿ ಭಿನ್ನಮತೀಯ ಅಭ್ಯರ್ಥಿ ಸ್ಪರ್ಧೆಯಿಂದ ಹಿಂದೆ ಸರಿದು ಈಗ ನೇರವಾಗಿ ಕಾಂಗ್ರೆಸ್ ಪಕ್ಷವನ್ನು ಸೇರಿ ಬಿಜೆಪಿ ವಿರೋಧಿ ಪಾಳೆಯದಲ್ಲಿ ನಿಂತಿರುವುದು ಬಿಜೆಪಿಯ ರಾಜೇಶ್‌ಗೆ ಹಿನ್ನಡೆಯನ್ನುಂಟುಮಾಡಲಿದೆ.


ರಾಜೇಶ್

ಎಸ್.ವಿ.ರಾಮಚಂದ್ರ ತಾನು ಈ ಹಿಂದೆ ಸೋತಿದ್ದರೂ 10-15 ವರ್ಷಗಳಿಂದ ಕ್ಷೇತ್ರದ ಜನತೆಯೊಂದಿಗೆ ನಿರಂತರ ಸಂಬಂಧವನ್ನಿಟ್ಟುಕೊಂಡಿರುವುದು, ಈತನ ಗೆಲುವಿಗಾಗಿ ನಾಲ್ಕು ಮಂದಿ ಜಿಲ್ಲಾ ಪಂಚಾಯ್ತಿ ಮೆಂಬರುಗಳನ್ನೊಳಗೊಂಡು ಎಲ್ಲ ಜನಾಂಗದ ನಾಯಕರೂ ಶ್ರಮಿಸುತ್ತಿರುವುದು ಮತ್ತು ಲಿಂಗಪ್ಪ, ಡಕ್‌ರಾಜು ಮುಂತಾದವರು ಬಿಜೆಪಿ ಪಕ್ಷವನ್ನು ಬಿಟ್ಟು ಕಾಂಗ್ರೆಸ್ ಪಕ್ಷವನ್ನು ಸೇರಿರುವುದು - ಇವೆಲ್ಲಾ ಕಾಂಗ್ರೆಸ್ ಅಭ್ಯರ್ಥಿ ಎಸ್.ವಿ.ರಾಮಚಂದ್ರರ ಗೆಲುವಿಗೆ ಖಾತರಿಯನ್ನು ನೀಡುತ್ತಿವೆ.

ದಾವಣಗೆರೆ ಉತ್ತರ: ಕಾಂಗ್ರೆಸ್‌ನ ಕಂತ್ರಿಬುದ್ಧಿಯಿಂದ ಬಿಜೆಪಿಗೆ ಗೆಲುವು


ರವೀಂದ್ರನಾಥ್

ಈ ಕ್ಷೇತ್ರದ ಫಲಿತಾಂಶದ ಬಗ್ಗೆ ಹೇಳುವ ಅಗತ್ಯವೇ ಇಲ್ಲ. 'ಹಾಳಾದ ಊರಿಗೆ ಉಳಿದವನೇ ಗೌಡ' ಎಂಬಂತಾಗಿ ಶಾಮನೂರು ಫ್ಯಾಮಿಲಿಯ ದಾಂಧಲೆಯಿಂದ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯೇ ಇಲ್ಲದಾಗಿರುವುದರಿಂದ ಬಿಜೆಪಿ ಅಭ್ಯರ್ಥಿ ಎಸ್.ಎ.ರವೀಂದ್ರನಾಥ್ ಗೆಲುವಿಗೆ ಹಾಸಿಗೆ ಹಾಸಿಕೊಟ್ಟಂತಾಗಿದೆ. ಅಂದರೆ ಈ ಕ್ಷೇತ್ರದಿಂದ ರವೀಂದ್ರನಾಥ್ ನಿರಾಯಾಸವಾಗಿ ಗೆಲ್ಲುತ್ತಾರೆ. ಈ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಸುಭಾನ್ ಖಾನ್‌ಗೆ ಕಾಂಗ್ರೆಸ್ ಪಕ್ಷದ ವತಿಯಿಂದ ಬೆಂಬಲಿಸುತ್ತೇವೆಂದು ಶಿವಶಂಕರಪ್ಪ ಹೇಳುತ್ತಿದ್ದರೂ ಈ ಹೇಳಿಕೆಯು ಕೇವಲ ಮುಸ್ಲಿಂ ಅಲ್ಪಸಂಖ್ಯಾತರ ಓಲೈಕೆಗಾಗಿ ಎನ್ನುವುದು ಸ್ಪಷ್ಟವಾಗಿ ಕಾಣಿಸುತ್ತಿದೆ. ಜೆಡಿಎಸ್‌ನಿಂದ ಸ್ಪರ್ಧಿಸಿರುವ ಕೋಳೇನಹಳ್ಳಿ ಸತೀಶ್ ಕುರುಬ ಸಮಾಜದ ಮತಗಳನ್ನು ಪಡೆಯಬಹುದಾದರೂ ಬಿಜೆಪಿಗೆ ಪೈಪೋಟಿ ನೀಡುವುದು ಸಾಧ್ಯವಿಲ್ಲ. ಈ ಕ್ಷೇತ್ರದಲ್ಲಿ ನಡೆದ ಬಿ-ಫಾರಂ ದಾಂಧಲೆಯು ಇಲ್ಲಿನ ಪ್ರಭಾವೀ ಜಾತಿ ನಾಯಕರ ಪೂರ್ವ ನಿಯೋಜಿತ ತಂತ್ರವೆನ್ನುವುದು ರವೀಂದ್ರನಾಥ್ ಗೆಲುವಿನ ಮೂಲಕ ಸ್ಪಷ್ಟವಾಗಲಿದೆ.

ಚಿಕ್ಕಮಗಳೂರು:

ಮಕಾಡೆ ಮಲಗಲಿರುವ ಬಿಜೆಪಿ! ಸೆಟೆದು ನಿಲ್ಲಲಿರುವ ಕಾಂಗ್ರೆಸ್!!

ಕಳೆದ ಚುನಾವಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿದ್ದ ಒಟ್ಟು ಆರು ಸ್ಥಾನಗಳಲ್ಲಿ ಮೂರನ್ನು ಬಿಜೆಪಿ ಬಾಚಿಕೊಂಡಿತ್ತು, ಉಳಿದಂತೆ ಜೆಡಿಎಸ್ ಎರಡು, ಹಾಗೂ ಕಾಂಗ್ರೆಸ್ ಒಂದು ಸ್ಥಾನಗಳಿಗೆ ತೃಪ್ತಿಪಟ್ಟುಕೊಂಡಿದ್ದವು. ಇದ್ದ ಒಂದು ಲೋಕಸಭಾ ಕ್ಷೇತ್ರವನ್ನು ಸತತವಾಗಿ ಮೂರು ಬಾರಿ ಬಿಜೆಪಿ ತನ್ನ ತೆಕ್ಕೆಗೆ ಹಾಕಿಕೊಂಡಿತ್ತು. ಆದರೆ ಇದೆಲ್ಲ ಇತಿಹಾಸ. ವರ್ತಮಾನ ಹಾಗೂ ಭವಿಷ್ಯದ ಚಿತ್ರಣ ಇದಕ್ಕಿಂತ ತೀರಾ ವ್ಯತಿರಿಕ್ತವಾಗಿಯೇ ಇದೆ. ಕಳೆದ ಚುನಾವಣೆಗಳಲ್ಲಿ ಬಿಜೆಪಿ ಮುನ್ನಡೆ ಸಾಧಿಸಿದ್ದಕ್ಕೆ ಬಂಗಾರಪ್ಪ ಪಕ್ಷದಲ್ಲಿದ್ದದ್ದು, ವಾಜಪೇಯಿ ಸೋಕಾಲ್ಡ್ ವರ್ಚಸ್ಸು, ಚೆಡ್ಡಿಗಳು ಕುಡಿಸಿದ್ದ ಬಾಬಾಬುಡನ್ ವಿವಾದದ ವಿಷ - ಹೀಗೆ ಹತ್ತು ಹಲವು ಕಾರಣಗಳು. ಈಗ ಅವೆಲ್ಲ ಇಲ್ಲ, ಹೀಗಾಗಿ ಈಗಿರುವ ಐದು ಕ್ಷೇತ್ರಗಳಲ್ಲಿ ಮೂಡಿಗೆರೆಯನ್ನು ಹೊರತುಪಡಿಸಿ ಬಿಜೆಪಿಗೆ ಹೇಳಿಕೊಳ್ಳುವಂತಹ ಅಲೆ ಇಲ್ಲಿಲ್ಲ, ಮೂಡಿಗೆರೆಯಲ್ಲಿಯೂ ಅವರು ಗೆಲ್ಲುವುದು ಕೂಡ ಸುಲಭವಾಗಿಯೇನಿಲ್ಲ.

ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಕೂಡ ಬಲಿಷ್ಠಗೊಂಡಿದೆ. ಡಿ.ಕೆ.ತಾರಾದೇವಿ ಸಿದ್ಧಾರ್ಥ ಮಾರಳಿ ಕಾಂಗ್ರೆಸ್ ಸೇರಿಕೊಂಡಿರುವುದು, ಬಿ.ಎಲ್.ಶಂಕರ್, ಡಿ.ಎಂ.ಪುಟ್ಟೇಗೌಡ, ರಾಮ್‌ದಾಸ್, ಮೋಟಮ್ಮ, ಸಗೀರ್ ಅಹಮ್ಮದ್ ಮುಂತಾದ ಘಟಾನುಘಟಿಗಳ ದಂಡೇ ಚುನಾವಣಾ ಯುದ್ಧದಲ್ಲಿ ಸನ್ನದ್ಧರಾಗಿ ನಿಂತಿರುವುದು, ಕಾಂಗ್ರೆಸ್ ಭಿನ್ನಮತ ಶಮನವಾಗಿರುವುದು ಪಕ್ಷಕ್ಕೆ ಆನೆಬಲ ತಂದುಕೊಟ್ಟಿದೆ. ಸದ್ಯಕ್ಕಿರುವ ಪರಿಸ್ಥಿತಿಯನ್ನು ಅಂದಾಜಿಸಿ ಹೇಳುವುದಾದರೆ ಜಿಲ್ಲೆಯಲ್ಲಿ ಕಾಂಗ್ರೆಸ್ ಭರ್ಜರಿ ಮುನ್ನಡೆ ಸಾಧಿಸುವ ಲಕ್ಷಣಗಳು ಕಾಣುತ್ತಿವೆ.

ಚಿಕ್ಕಮಗಳೂರು: ಮಲ್ಲಿಕಾರ್ಜುನ್ ಜಯಭೇರಿ!


ಮಲ್ಲಿಕಾರ್ಜುನ್

ಇದು ಕಳೆದ ಬಾರಿ ಚೆಡ್ಡಿ ಚತುರ ಸಿ.ಟಿ.ರವಿ ಪ್ರತಿನಿಧಿಸಿದ್ದ ಕ್ಷೇತ್ರ. ಈತ ತನ್ನ ಅಧಿಕಾರಾವಧಿಯುದ್ದಕ್ಕೂ ಹಳ್ಳಿಗಳನ್ನು, ಸಾರ್ವಜನಿಕರ ಹಿತಾಸಕ್ತಿಯನ್ನು ಮರೆತು ಪಕ್ಕಾ 'ಸಿಟಿ' ರವಿಯಾಗಿ ಪರಿವರ್ತನೆಯಾದದ್ದು, ಅಧಿಕಾರವನ್ನು ತನ್ನ ಸ್ವಂತಕ್ಕಾಗಿ ಆಸ್ತಿಪಾಸ್ತಿ ಬೆಳೆಸಿಕೊಳ್ಳಲು ದುರುಪಯೋಗ ಪಡಿಸಿಕೊಂಡಿದ್ದು, ಭ್ರಷ್ಟಾಚಾರದಲ್ಲಿ ತೊಡಗಿದ್ದು – ಎಲ್ಲವೂ ಅವನಿಗೆ ಈ ಬಾರಿ ಮಾರಕವಾಗಲಿವೆ. ಸಿ.ಎಚ್.ಲೋಕೇಶ್, ರೇಖಾ ಹುಲಿಯಪ್ಪಗೌಡ ಮುಂತಾದವರಂತೂ ರವಿಯನ್ನು ಸೋಲಿಸಲೇಬೇಕೆಂಬ ಹಠಕ್ಕೆ ಬಿದ್ದು ಶತಗತಾಯ ಪ್ರಯತ್ನ ನಡೆಸಿದ್ದಾರೆ. ಕಳೆದ ಬಾರಿ ಈತನ ಬೆಂಬಲಕ್ಕೆ ನಿಂತಿದ್ದ ಗೌಡ ಮತಗಳು ಕ್ಷೇತ್ರ ಪುನರ್ವಿಂಗಡಣೆಯ ಪರಿಣಾಮವಾಗಿ ಬೇರೆ ಕ್ಷೇತ್ರಕ್ಕೆ ವರ್ಗಾವಣೆಯಾಗಿರುವುದೂ ರವಿಗೆ ಮಾರಕವಾಗಲಿದೆ. ಈ ಬಾರಿ ಈತ ತಾನು ಸೋಲುವುದು ಮಾತ್ರವಲ್ಲ; ಜಿಲ್ಲೆಯಲ್ಲಿ ಬಿಜೆಪಿಯ ಅವಸಾನಕ್ಕೂ ಕೊಡುಗೆ ನೀಡಲಿದ್ದಾನೆ.



ಸಿ.ಟಿ. ರವಿ

ಇದರ ಸಂಪೂರ್ಣ ಲಾಭವನ್ನು ಕಾಂಗ್ರೆಸ್ ಪಡೆದುಕೊಳ್ಳಲಿದೆ. ಕ್ಷೇತ್ರದಲ್ಲಿರುವ ಲಿಂಗಾಯತ ಮತಗಳನ್ನು ಸೆಳೆಯುವುದಕ್ಕಾಗಿ ಕಾಂಗ್ರೆಸ್ ಮಲ್ಲಿಕಾರ್ಜುನ್ ಅವರನ್ನು ಕಣಕ್ಕಿಳಿಸಿದೆ. ರವಿ ವಿರೋಧಿ ಅಲೆ, ಲಿಂಗಾಯತ, ಮುಸ್ಲಿಮ್, ಮತ್ತಿತರ ಹಿಂದುಳಿದ ವರ್ಗಗಳ ಮತಗಳು ಮಲ್ಲಿಕಾರ್ಜುನ್ ನೆರವಿಗೆ ಬರಲಿರುವುದರಿಂದ ಅವರ ಗೆಲುವು ಹೆಚ್ಚೂ ಕಡಿಮೆ ನಿಶ್ಚಿತವಾಗಿದೆ.

ಇನ್ನು ಜೆಡಿಎಸ್‌ನ ಬೋಜೇಗೌಡ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾದ ಪರಿಸ್ಥಿತಿಯಿದೆ. ಮೂಡಿಗೆರೆ ಕ್ಷೇತ್ರದಲ್ಲಿ ಬಿ.ಬಿ. ನಿಂಗಯ್ಯನವರಿಗೆ ಬಿ ಫಾರ್ಮ್ ನೀಡಲಿಲ್ಲವೆಂಬ ಕಾರಣಕ್ಕೆ ಎಚ್.ಎಚ್.ದೇವರಾಜ್ ಜೊತೆ ಜೆಡಿಎಸ್‌ನ ನೂರಾರು ಕಾರ್ಯಕರ್ತರು ಚಿಕ್ಕಮಗಳೂರಿನಲ್ಲಿ ಕಾಂಗ್ರೆಸ್‌ನ ಮಲ್ಲಿಕಾರ್ಜುನ್ ಅವರಿಗೆ ಬೆಂಬಲಿಸುತ್ತಿರುವುದೂ ಬೋಜೇಗೌಡ ಹಿಂದೆ ಬೀಳಲು ಕಾರಣವಾಗುತ್ತಿದೆ.

ಒಟ್ಟಿನಲ್ಲಿ ಚಿಕ್ಕಮಗಳೂರು ಈ ಬಾರಿ ಕಾಂಗ್ರೆಸ್‌ನ ಮಲ್ಲಿಕಾರ್ಜುನ್ ಅವರ ಪಾಲಾಗುವುದಂತೂ ಸತ್ಯ.

ಕಡೂರು: ಕೃಷ್ಣಮೂರ್ತಿಗೆ ವಿಜಯದ ಹಾರ!


ಕೃಷ್ಣಮೂರ್ತಿ

ಕಡೂರು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ಎಂ.ಕೃಷ್ಣಮೂರ್ತಿ ಪಕ್ಕಾ ಸಿದ್ರಾಮಯ್ಯನ ಬೆಂಬಲಿಗ. ರಾಜಕಾರಣದಲ್ಲಿ ಕಂಡಕಂಡಲ್ಲಿ ತಿಂದು ಮೈಕೈ ಹೊಲಸು ಮಾಡಿಕೊಂಡವನಲ್ಲ. ಕ್ಷೇತ್ರದಲ್ಲಿ ನಿರ್ಣಾಯಕವಾಗಿರುವ ಕುರುಬ ಮತಗಳ ಮೇಲೆ ಕೃಷ್ಣಮೂರ್ತಿಗೆ ಸಂಪೂರ್ಣ ಹಿಡಿತವಿದೆ. ಹೀಗಾಗಿ ಇಲ್ಲಿ ಅವರ ಗೆಲುವು ನಿಶ್ಚಿತವಾಗಿದೆ. ಇದನ್ನರಿತಿರುವ ಜೆಡಿಎಸ್‌ನಿಂದ ಸ್ಪರ್ಧಿಸಿರುವ ವೈ.ಎಸ್.ವಿ.ದತ್ತ ಹಾಗೂ ಬಿಜೆಪಿಯಿಂದ ಸ್ಪರ್ಧಿಸಿರುವ ಡಾ.ವೈ.ಸಿ.ವಿಶ್ವನಾಥ್ ಇಬ್ಬರೂ ಈಗಾಗಲೇ ಸೋಲೊಪ್ಪಿಕೊಂಡು ಕಾಟಾಚಾರಕ್ಕೆ ಚುನಾವಣೆ ಎದುರಿಸುತ್ತಿದ್ದಾರೆ. ಅದರಲ್ಲೂ ಬಿಜೆಪಿಯಿಂದ ಸೋಲಿನ ಹೆಗಲೇರಿರುವ ಅನಾಮಧೇಯ ಗಿರಾಕಿ ವಿಶ್ವನಾಥ್ ಎಂಬಾತನಿಗೆ ಟಿಕೆಟ್ ಕೊಟ್ಟಿದ್ದನ್ನು ಪ್ರತಿಭಟಿಸಿ ಬೀರೂರು ದೇವರಾಜ್ ಪಕ್ಷ ತೊರೆದಿರುವುದು ಬಿಜೆಪಿಗೆ ಹಾನಿಯುಂಟುಮಾಡಲಿದೆ.


ವೈಎಸ್‌ವಿ ದತ್ತ

ದಾವಣಗೆರೆ ದಕ್ಷಿಣ ಕ್ಷೇತ್ರ: ಶಿವಶಂಕರಪ್ಪ V/s ಯಶವಂತರಾವ್


ಶಿವಶಂಕರಪ್ಪ



ಯಶವಂತರಾವ್


ಈ ಕ್ಷೇತ್ರದಲ್ಲಿ 58 ಸಾವಿರ ಮುಸ್ಲಿಂ ಅಲ್ಪಸಂಖ್ಯಾತರ ಮತಗಳು, 30 ಸಾವಿರ ಸಾದ ಲಿಂಗಾಯಿತ, 20 ಸಾವಿರ ಬಣಜಿಗ ಲಿಂಗಾಯಿತರ ಮತಗಳು ಗೆಲುವಿನ ನಿರ್ಣಯವನ್ನು ಮಾಡುತ್ತವೆ. ದಾವಣಗೆರೆ ಉತ್ತರ ಕ್ಷೇತ್ರದಲ್ಲಿ ಸೈಯದ್ ಸೈಫುಲ್ಲಾರಿಗೆ ನಾಮಪತ್ರ ಸಲ್ಲಿಸಲು ಅವಕಾಶ ಮಾಡಿಕೊಡದ ಶಾಮನೂರು ಶಿವಶಂಕರಪ್ಪ ಫ್ಯಾಮಿಲಿಯ ಹದ್ದುಮೀರಿದ ವರ್ತನೆಯಿಂದ ಮುಸ್ಲಿಂ ಅಲ್ಪಸಂಖ್ಯಾತರ ಮನಸ್ಸಿಗೆ ಗಾಯವಾಗಿದೆ. ಈ ಕುರಿತು 'ಲಂಕೇಶ್'ನಲ್ಲಿ ...ದ ವರದಿಯನ್ನು ಶಿವಶಂಕರಪ್ಪನ ವಿರೋಧಿಗಳು ಐದಾರು ಸಾವಿರ ಜೆರಾಕ್ಸ್ ಮಾಡಿಸಿ ...ನೆಮನೆಗೆ ಹಂಚಿರುವುದು ಎಸ್ಸೆಸ್‌ರನ್ನು ರಾಜಕೀಯವಾಗಿ ಹಣಿಯುವ ಉದ್ದೇಶವನ್ನು ಸೂಚಿಸುತ್ತದೆ.

... ಕೋಮುವಾದಿ ಬಜೆಪಿಯನ್ನು ಸೋಲಿಸುವ ಸ್ಪಷ್ಟ ಉದ್ದೇಶದಿಂದ ತಮಗಾದ ನೋವನ್ನು ...ನೆಯ ಕ್ಷಣದಲ್ಲಿ ಮರೆತು ಮುಸ್ಲಿಂ ಅಲ್ಪಸಂಖ್ಯಾತರು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿದರೆ ಮಾತ್ರ ...ಸ್ ಗೆಲ್ಲುತ್ತಾರೆ. ಇದಾಗದಿದ್ದರೆ ಜನತಾ ದಳದಿಂದ ಸ್ಪರ್ಧಿಸಿರುವ ಮಾಜಿ ಮಂತ್ರಿ ಶಿವಪ್ಪನವರ ...ತ್ರ ಎಚ್.ಎಸ್.ನಾಗರಾಜ್ ಮತ್ತು ಶಿವಶಂಕರಪ್ಪನ ನಡುವೆ ಮತಗಳ ಕಲಬೆರಕೆಯಾಗಿ ಬಜೆಪಿ ...ದ ಅಭ್ಯರ್ಥಿ ಯಶವಂತರಾವ್ ಗೆಲ್ಲುವ ಸಾಧ್ಯತೆಯೂ ಇದೆ.

... ಇತ್ತೀಚೆಗೆ ಶಾಮನೂರು ಶಿವಶಂಕರಪ್ಪ ಮಠಾಧೀಶರೊಬ್ಬರ ಮಧ್ಯಸ್ಥಿಕೆಯಲ್ಲಿ ಲಿಂಗಾಯತ ...ಾಜದ ಮುಖಂಡರನ್ನು ಕರೆಸಿ ತಮ್ಮನ್ನು ಬೆಂಬಲಿಸಲು ಅರಿಕೆ ಮಾಡಿಕೊಂಡಿದ್ದರು. ಒಂದು ...ೆ ಈ ಪ್ರಯತ್ನ ಫಲಿಸಿ, ಕೊನೆಯ ಕ್ಷಣದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರು ಬೆಂಬಲಿಸಿದರೆ ...ಶಂಕರಪ್ಪ ಗೆಲ್ಲುತ್ತಾರೆ.

...ಯಕೊಂಡ: ಗೆಲುವಿನ ನಿರೀಕ್ಷೆಯಲ್ಲಿ ...ಸವರಾಜ್



ರಾಮಪ್ಪ


ಬಸವರಾಜ್ ನಾಯ್ಕ್

... ಈ ಚುನಾವಣೆಯಲ್ಲಷ್ಟೇ ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಈ ...ತ್ರದಲ್ಲಿ ಬಜೆಪಿಯ ಮಾಜಿ ಮಂತ್ರಿ ರವೀಂದ್ರನಾಥ್ ಎರಡು ಬಾರಿ ಗೆದ್ದು ಈಗಲೂ ಪ್ರಭಾವವನ್ನು ಹೊಂದಿದ್ದಾನೆ. ಈತನ ಈ ಪ್ರಭಾವಕ್ಕೆ ಈ ಕ್ಷೇತ್ರದಲ್ಲಿ 50 ಸಾವಿರಕ್ಕೂ ಹೆಚ್ಚು ಲಿಂಗಾಯತ ಮತದಾರರಿರುವುದು ಕಾರಣವಾಗಿದೆ.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವೈ.ರಾಮಪ್ಪ ಮತ್ತು ಬಜೆಪಿ ಅಭ್ಯರ್ಥಿ ಬಸವರಾಜ ನಾಯ್ಕರ ನಡುವೆ ಇಲ್ಲಿ ತೀವ್ರ ಪೈಪೋಟಿ ನಡೆಯುತ್ತಿದೆ. ವೈ.ರಾಮಪ್ಪ ಭೋವಿ ಜನಾಂಗದ ಮತಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಪಡೆದರೂ ಈ ಮತಗಳು ಗೆಲುವಿಗೆ ನಿರ್ಣಾಯಕತೆಯನ್ನು ನೀಡುವುದಿಲ್ಲ, ರಾಮಪ್ಪನ ದರ್ಪ, ...ಂಕಾರಗಳು ಎಲ್ಲ ಜನಾಂಗದ ಮತಗಳನ್ನು ಸೆಳೆಯುವಲ್ಲಿ ಹಿನ್ನಡೆಯನ್ನು ಉಂಟುಮಾಡುತ್ತದೆ. ... ಬಜೆಪಿ ಅಭ್ಯರ್ಥಿ ಬಸವರಾಜ ನಾಯ್ಕ ತನ್ನ ಜನಾಂಗದ ಬಹುತೇಕ ಮತಗಳನ್ನು ...ಯುವುದರೊಂದಿಗೆ ಬಜೆಪಿಯ ವೋಟ್‌ಬ್ಯಾಂಕಿನ ಸಹಕಾರದಿಂದ ಗೆಲ್ಲುವ ಸಾಧ್ಯತೆಗಳು ...ಚ್ಚಾಗಿವೆ.

ಹರಿಹರ: ಗೆಲುವಿನಂಚಿನಲ್ಲಿ ನಾಗಪ್ಪ


ನಾಗಪ್ಪ

ಕಾಂಗ್ರೆಸ್ ಪಕ್ಷದ ವೈ.ನಾಗಪ್ಪ ಜೆಡಿಎಸ್‌ನ ಶಿವಪ್ಪ ಮತ್ತು ಬಜೆಪಿಯ ಅಭ್ಯರ್ಥಿ ಹರೀಶ್ ನಡುವೆ ಈ ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ನಡೆಯುತ್ತಿರುವಂತೆ ಕಂಡರೂ ವಾಸ್ತವವಾಗಿ ನಾಗಪ್ಪ ಮತ್ತು ಶಿವಪ್ಪರ ನಡುವೆ ಹಣಾಹಣಿ ಸ್ಪರ್ಧೆ ನಡೆಯುತ್ತಿದೆ.


ಹರಿಹರದ ಮತದಾರರು ಮೊದಲ ಬಾರಿಗೆ ನಾಗಪ್ಪನವರನ್ನು ಎರಡು ಬಾರಿ ಗೆಲ್ಲಿಸಿದ್ದಾರೆ. ಈತ ಹೆಚ್ಚಿನ ಅಭಿವೃದ್ಧಿ ಕೆಲಸಗಳನ್ನು ಮಾಡದೇ ಇದ್ದರೂ ಈತನ ಸಭ್ಯತೆಯನ್ನು ಜನ ಮೆಚ್ಚುತ್ತಾರೆ. ದುರಹಂಕಾರಿಯಲ್ಲದ ಈತ ಜನರೊಂದಿಗೆ ಸಹಜವಾಗಿ ಬೆರೆಯುತ್ತಾನೆನ್ನುತ್ತಾರೆ. ಮುಸ್ಲಿಂ ಅಲ್ಪಸಂಖ್ಯಾತರ ಮತಗಳು ಮತ್ತು ಕುರುಬ ಜನಾಂಗದವರ ಮತಗಳೇ ಇಲ್ಲಿ ನಿರ್ಣಾಯಕವಾಗಿರುವುದರಿಂದ ಹಿಂದಿನಂತೆಯೇ ಮುಸ್ಲಿಮರು ನಾಗಪ್ಪನಿಗೆ ಬೆಂಬಲಿಸಿದರೆ ಮತ್ತೊಮ್ಮೆ ನಾಗಪ್ಪನ ಗೆಲುವು ಖಚಿತವಾಗುತ್ತದೆ.


ಶಿವಪ್ಪ

ವೈ.ನಾಗಪ್ಪನ ವಿರುದ್ಧ ಸತತವಾಗಿ ಎರಡು ಬಾರಿ ಸೋಲನ್ನುಂಡಿರುವ ಶಿವಪ್ಪ ಹೊಸ ಪ್ರಯತ್ನಗಳನ್ನು ಹಾಕುತ್ತಿದ್ದಾರೆನ್ನಲಾಗುತ್ತಿದೆ. ಇವರ ಮಗ ಎಚ್.ಎಸ್.ಶಿವಶಂಕರ್‌ರೊಂದಿಗೆ ಈ ಚುನಾವಣೆಯಲ್ಲಿನ ಗೆಲುವಿಗಾಗಿ ಸಾಕಷ್ಟು ಗ್ರೌಂಡ್ ವರ್ಕ್ ಕೂಡ ಮಾಡಿದ್ದಾರೆ. ಶಿವಪ್ಪನವರ ಜನಾಂಗದ ಹತ್ತು ಸಾವಿರ ಮತಗಳು ಇವರ ಗೆಲುವಿಗೆ ಸಹಕಾರಿಯಾಗುವುದಿಲ್ಲ, ಆದರೆ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದಿಂದಾದ ಕಹಿ ಅನುಭವವನ್ನು ಮನಸ್ಸಿನಲ್ಲಿಟ್ಟುಕೊಂಡು ಮುಸ್ಲಿಂ ಅಲ್ಪಸಂಖ್ಯಾತರು ಶಿವಪ್ಪನವರಿಗೆ ಬೆಂಬಲಿಸಿದರೆ ಶಿವಪ್ಪನವರು ಗೆದ್ದು ನಾಗಪ್ಪ ಸೋಲುವುದು ನಿಶ್ಚಿತ.

ಹರಪನಹಳ್ಳಿ: ರೆಡ್ಡಿ ಹಣ V/s ಪ್ರಕಾಶ್ ಗುಣ!

ಹರಪನಹಳ್ಳಿ ಕ್ಷೇತ್ರದಲ್ಲಿ ಹಿಂದೆಂದೂ ಕಂಡರಿಯದ ರೀತಿಯ ಆತಂಕ ಮತ್ತು ಹಣ ಹೆಂಡಗಳ ಹರಿದಾಟ ಕಂಡುಬರುತ್ತಿದೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಎಂ.ಪಿ.ಪ್ರಕಾಶ್ ಹಾಗೂ ಬಜೆಪಿ ಪಕ್ಷದ ಕರುಣಾಕರ ರೆಡ್ಡಿಯ ನಡುವೆ ನೇರ ಸ್ಪರ್ಧೆ ನಡೆಯುತ್ತಿದೆ.


ಎಂ.ಪಿ. ಪ್ರಕಾಶ್

ಇದುವರೆಗೂ ಮೀಸಲು ಕ್ಷೇತ್ರವಾಗಿದ್ದ ಹರಪನಹಳ್ಳಿಗೆ ಎಂ.ಪಿ.ಪ್ರಕಾಶ್ ಚುನಾವಣಾ ಅಭ್ಯರ್ಥಿಯಾಗಿ ಹೊಸಬರೇ ಹೊರತು ವೃತ್ತಿಪರ ರಾಜಕಾರಣಿಯಾಗಿ ಅಲ್ಲ. ಕಳೆದ ಎರಡು ಮೂರು ದಶಕಗಳಿಂದ ಪ್ರಕಾಶ್‌ರನ್ನು ಹರಪನಹಳ್ಳಿಯ ಜನತೆ ರಾಜ್ಯ ರಾಜಕಾರಣದಲ್ಲಿ ಸ್ಪಷ್ಟವಾಗಿ ಗುರುತಿಸಿದ್ದಾರೆ. ಆದರೆ ಬಜೆಪಿ ಅಭ್ಯರ್ಥಿ ಕರುಣಾಕರ ರೆಡ್ಡಿ ಈ ಕ್ಷೇತ್ರದ ಮತದಾರರಿಗೆ ಚುನಾವಣಾ ಅಭ್ಯರ್ಥಿಯಾಗಿ ಮಾತ್ರವಲ್ಲ, ವ್ಯಕ್ತಿಗತವಾಗಿಯೂ ಹೊಸಬನೇ. ಗಣಿ ದುಡ್ಡನ್ನು ನೀರಿನಂತೆ ಹರಿಸಿಯಾದರೂ ಇವನು ಗೆಲ್ಲುವ ಉದ್ದೇಶವನ್ನು ಇಟ್ಟುಕೊಂಡಿದ್ದಾನೆನ್ನುವುದನ್ನು ಹರಪನಹಳ್ಳಿ ಕ್ಷೇತ್ರದ ಮತದಾರರು ಗುರ್ತಿಸಿದ್ದಾರೆ.


ಕರುಣಾಕರ ರೆಡ್ಡಿ

ಈ ಹಿಂದಿನಿಂದಲೂ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುತ್ತಾ ಬಂದಿರುವ ಹರಪನಹಳ್ಳಿಯ ಮತದಾರರು ಈ ಬಾರಿ ಕರುಣಾಕರ ರೆಡ್ಡಿಯ ಗಣಿ ದುಡ್ಡನ್ನು ಯಥೇಚ್ಛವಾಗಿ ಪಡೆಯಬಹುದಾದರೂ ಓಟನ್ನು ಮಾತ್ರ ಬಜೆಪಿಗೆ ನೀಡುವುದಿಲ್ಲ, ಏನೇ ಆದರೂ ರೆಡ್ಡಿಯ ಹಣ ಗೆಲ್ಲುತ್ತೋ ಪ್ರಕಾಶರ ಗುಣ ಗೆಲ್ಲುತ್ತೋ ನೋಡಬೇಕಷ್ಟೆ.


– ಚಂದ್ರಶೇಖರ ತೋರಣಘಟ್ಟ

ಕರಾವಳಿ ಮತ್ತು ಕೆಎಫ್‌ಡಿ ಫ್ಯಾಕ್ಟರ್

ಕರಾವಳಿಯಲ್ಲಿ ಬೇರೆ ಯಾವುದೇ ಪಕ್ಷಗಳಿಗಿಂತ ಅಪಾರ ಜನ ಬೆಂಬಲ ಹೊಂದಿರುವ ಸಂಘಟನೆ ಕರ್ನಾಟಕ ಫೋರಮ್ ಫಾರ್ ಡಿಗ್ನಿಟಿ (ಕೆಎಫ್‌ಡಿ). ವಿಶೇಷವಾಗಿ ಕರಾವಳಿಯ ಮುಸ್ಲಿಮರ ನಡುವೆ ಅಪಾರ ಬೆಂಬಲ ಪಡೆದಿರುವ ಮತ್ತು ಬೇರುಮಟ್ಟದ ಸಂಘಟನಾ ಶಕ್ತಿ ಪಡೆದಿರುವ ಕೆಎಫ್‌ಡಿಯನ್ನು ಕರಾವಳಿಯಲ್ಲಿ ಗೆಲ್ಲಬೇಕೆಂದು ಬಯಸುವ ಯಾವ ಪಕ್ಷವೂ ನಿರ್ಲಕ್ಷಿಸುವಂತೆಯೇ ಇಲ್ಲ. ಒಂದು ವೇಳೆ ನಿರ್ಲಕ್ಷಿಸಿದರೆ ಏನಾಗುತ್ತದೆ ಎಂಬುದಕ್ಕೆ ಇಂದು ಕೆಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಏದುಸಿರು ಬಿಡುತ್ತಿರುವುದೇ ಸಾಕ್ಷಿ. ಇದು ಕಾಂಗ್ರೆಸ್ ಪಕ್ಷ ಅತಿಯಾದ ಆತ್ಮವಿಶ್ವಾಸ ಮತ್ತು ಜಾತ್ಯತೀತ ಶಕ್ತಿಗಳನ್ನೆಲ್ಲಾ ಒಟ್ಟುಗೂಡಿಸುವ ಬಗ್ಗೆ ತೋರಿದ ಉದಾಸೀನ ಮತ್ತು ದುರಹಂಕಾರಗಳಿಂದ ತಂದುಕೊಂಡ ಅವಸ್ಥೆಯೂ ಆಗಿದೆ.

ಕಾಂಗ್ರೆಸ್‌ನ ಈ ಧೋರಣೆಗೆ ಪ್ರತಿಕ್ರಿಯೆಯಾಗಿ ಕೋಮುವಾದಿ ಬಿಜೆಪಿಯನ್ನು ಸೋಲಿಸುವ ಪಣದೊಂದಿಗೆ ಪ್ರಚಾರಕ್ಕಿಳಿದಿದ್ದ ಕೆಎಫ್‌ಡಿ ನಂತರ ಉಡುಪಿ, ಮೈಸೂರು ಮತ್ತು ಮಂಗಳೂರಿನಲ್ಲಿ ತನ್ನ ಅಭ್ಯರ್ಥಿಗಳನ್ನೂ ನಿಲ್ಲಿಸಿತು. ತದ ನಂತರದಲ್ಲಿ ಇತರ ಕಡೆ ತನ್ನ ಅಭ್ಯರ್ಥಿಗಳನ್ನು ಜಾತ್ಯತೀತ ಪಕ್ಷಗಳ ಪರವಾಗಿ ಹಿಂತೆಗೆದುಕೊಂಡಿದ್ದರೂ ಮೈಸೂರಿನ ನರಸಿಂಹರಾಜದಲ್ಲಿ ತನ್ನ ಅಭ್ಯರ್ಥಿಯನ್ನು ಉಳಿಸಿಕೊಂಡಿದ್ದರೆ ಬಂಟ್ವಾಳದಲ್ಲಿ ಜಾತ್ಯತೀತ ಜನತಾದಳದ ಕೆ.ಎಂ.ಇಬ್ರಾಹಿಂ ಪರವಾಗಿ ತನ್ನ ಸಂಪೂರ್ಣ ಶಕ್ತಿಯನ್ನು ವಿನಿಯೋಗಿಸುತ್ತಿದೆ. ಇದು ಬಂಟ್ವಾಳದ ಫಲಿತಾಂಶದ ಮೇಲೆ ನಿರ್ಣಾಯಕ ಪರಿಣಾಮವನ್ನು ಬೀರುವುದಂತೂ ಖಚಿತ. ಆದರೆ ಇದರ ಲಾಭ ಬಿಜೆಪಿಗೆ ಆಗಿಬಿಡಬಹುದೇನೋ ಅಂಬ ಆತಂಕ ಮಾತ್ರ ಎಲ್ಲ ಪ್ರಗತಿಪರರನ್ನೂ ಕಾಡುತ್ತಿದೆ.

ತರೀಕೆರೆ: ಎದ್ದು ನಿಲ್ಲಲಿರುವ ಟಿ.ವಿ.ಶಿವಶಂಕರಪ್ಪ



ಸುರೇಶ್



ಶಿವಶಂಕರಪ್ಪ ಟಿ.ವಿ.

ಇಲ್ಲಿ ಕಾಂಗ್ರೆಸ್ ಹೊಸ ಮುಖಗಳಿಗೆ ಅವಕಾಶ ಮಾಡಿಕೊಡುತ್ತಾ ಗೆಲುವು ದಕ್ಕಿಸಿಕೊಳ್ಳುತ್ತಿರುವುದು ಒಂದು ಹೊಸ ಬೆಳವಣಿಗೆ. ಕಳೆದ ಬಾರಿ ಟಿ.ಎಚ್.ಶಿವಶಂಕರಪ್ಪ ಗೆದ್ದಿದ್ದರೆ ಈ ಸಲ ಟಿ.ವಿ. ಶಿವಶಂಕರಪ್ಪ ಗೆಲ್ಲುವ ನಿರೀಕ್ಷೆಯಿದೆ. ಕಡೂರು ಕಾಂಗ್ರೆಸ್‌ನಿಂದ ಪಲಾಯನ ಮಾಡಿ ಜೆಡಿಎಸ್‌ನಿಂದ ಸ್ಪರ್ಧಿಸುತ್ತಿರುವ ಅಡಿಕೆ ದೊರೆ ಓಂಕಾರಮೂರ್ತಿ ಕಾಂಗ್ರೆಸ್‌ಗೆ ಪ್ರಬಲ ಪೈಪೋಟಿ ನೀಡುತ್ತಿದ್ದಾರೆ. ಜೆಡಿಎಸ್‌ನಿಂದ ಹೊರಬಂದು ಬಜೆಪಿಯಿಂದ ಸ್ಪರ್ಧಿಸುತ್ತಿರುವ ದೋರನಾಳು ಸುರೇಶ್ ಕೂಡ ಒಂದಿಷ್ಟು ಪೈಪೋಟಿ ನೀಡಬಹುದಾದರೂ ಈತ ಗೆಲ್ಲುವ ಅಭ್ಯರ್ಥಿಯೇನಲ್ಲ.

ಶೃಂಗೇರಿ: ಬ್ರಾಹ್ಮಣ ಮತಗಳ ಒಡಕು ಡಿಬಿಸಿಗೆ ಲಾಭ!

ಕಳೆದ ಬಾರಿ ಬಜೆಪಿಯ ಜೀವರಾಜ್‌ಗೆ ಒಲಿದ ಕ್ಷೇತ್ರವಿದು. ಈ ಬಾರಿ ಕಣದಲ್ಲಿ ಈತನೊಂದಿಗೆ ಮಾಜಿ ಮಂತ್ರಿ ಕಾಂಗ್ರೆಸ್‌ನ ಡಿ.ಬಿ.ಚಂದ್ರೇಗೌಡ, ಜೆಡಿಎಸ್‌ನ ಎಸ್.ಟಿ.ರಾಜೇಂದ್ರ, ಬಿಎಸ್‌ಪಿಯ ರವಿಶಂಕರ್ ಇದ್ದಾರೆ.


ಜೀವರಾಜ್


ಚಂದ್ರೇಗೌಡ

ಕ್ಷೇತ್ರದಲ್ಲಿ ಬಜೆಪಿಗೆ ನೆಲೆಯಿರುವುದು ಬ್ರಾಹ್ಮಣರ ನಡುವೆ. ಈ ಬಾರಿ ಟಿಕೆಟ್ ಸಿಗಲಿಲ್ಲವೆಂದು ಸಿಟ್ಟಿಗೆದ್ದು ರವಿಶಂಕರ್ ಬಜೆಪಿ ತೊರೆದು ಬಿಎಸ್ಪಿ ಸೇರಿದ್ದಾನೆ. ಆದ್ದರಿಂದ ಬಜೆಪಿಯ ಗಣನೀಯ ಪ್ರಮಾಣದ ಓಟುಗಳನ್ನು ಈತ ಕಿತ್ತುಕೊಳ್ಳುವುದರಿಂದ ಬಜೆಪಿಯ ಜೀವರಾಜ್‌ಗೆ ಹಾನಿಯುಂಟಾಗಿ ಡಿ.ಬಿ.ಚಂದ್ರೇಗೌಡರಿಗೆ ಅನುಕೂಲವಾಗಲಿದೆ. ಅದೂ ಅಲ್ಲದೆ, ಜೆಡಿಎಸ್‌ನಿಂದ ಸ್ಪರ್ಧಿಸಿರುವ ಎಸ್.ಟಿ.ರಾಜೇಂದ್ರ ಹಾಗೂ ಬಿಎಸ್ಪಿಯ ರವಿಶಂಕರ್ ಇಬ್ಬರೂ ಬ್ರಾಹ್ಮಣರಾಗಿರುವುದರಿಂದ ಬ್ರಾಹ್ಮಣ ಮತಗಳು ಒಡೆದು ಬಜೆಪಿಗೆ ಹಾನಿಯಾಗುತ್ತದೆ. ಇದೆಲ್ಲದರ ಲಾಭವನ್ನು ಡಿ.ಬಿ.ಚಂದ್ರೇಗೌಡ ಪಡೆಯಲಿದ್ದಾರೆ.

ಮೂಡಿಗೆರೆ: ನಿಂಗಯ್ಯ V/s ಕುಮಾರಸ್ವಾಮಿ


ನಿಂಗಯ್ಯ


ಕುಮಾರಸ್ವಾಮಿ

ಕಳೆದ ಬಾರಿ ಬಜೆಪಿಯ ಕುಮಾರಸ್ವಾಮಿಗೆ ಒಲಿದ ಕ್ಷೇತ್ರವಿದು. ಈತ ಬಜೆಪಿಯ ಕೆಟ್ಟು ಕೆರ ಹಿಡಿದಿರುವ ಎಮ್ಮೆಲ್ಲೆಗಳಲ್ಲಿ ಒಂದಿಷ್ಟು ಉತ್ತಮನಂತೆ ಕಾಣುತ್ತಾನಾದರೂ ಈ ಬಾರಿ ಗೆಲುವು ಸಾಧಿಸುವುದು ತುಸು ಕಷ್ಟವಿದೆ. ಬಜೆಪಿಯ ಒಳಗಡೆಯೇ ಕುಮಾರಸ್ವಾಮಿಯ ವಿರುದ್ಧ ಅಸಮಾಧಾನದ ಹೊಗೆಯಾಡುತ್ತಿರುವುದು ಹಾಗೂ ಬಿಎಸ್‌ಪಿಯ ನಿಂಗಯ್ಯ ಪ್ರಬಲ ಸ್ಪರ್ಧೆಯೊಡ್ಡುತ್ತಿರುವುದು ಇದಕ್ಕೆ ಕಾರಣ.

ಕೆ.ವೆಂಕಟೇಶ್, ಎಸ್.ಎಲ್.ಬೋಜೇಗೌಡ, ವೈ.ಎಸ್.ವಿ.ದತ್ತ, ಎಸ್.ಎಲ್.ಧರ್ಮೇಗೌಡ ಮುಂತಾದವರ ಅಡ್ಡಗಾಲಿನಿಂದಾಗಿ ಜೆಡಿಎಸ್ ಟಿಕೆಟ್ ತಪ್ಪಿಸಿಕೊಂಡ ಬಿ.ಬಿ.ನಿಂಗಯ್ಯ ಬಿಎಸ್ಪಿಯಿಂದ ಸ್ಪರ್ಧಿಸಿದ್ದು ಕ್ಷೇತ್ರದ ಹಿಂದುಳಿದ, ದಲಿತ ಸಮುದಾಯಗಳ ಮತಗಳನ್ನು ಗಣನೀಯ ಪ್ರಮಾಣದಲ್ಲಿ ಕೀಳಲಿದ್ದಾರೆ. ಜೊತೆಗೆ ಬಿ.ಎಂ.ಭೈರೇಗೌಡ, ಬಾಲಕೃಷ್ಣೇಗೌಡ, ಎಂ.ಪಿ.ಜಗನ್ನಾಥ್ ಮುಂತಾದವರೂ ಬಿಎಸ್ಪಿಯ ಬೆಂಬಲಕ್ಕಿರುವುದು ಅದಕ್ಕೆ ಆನೆ ಬಲ ತಂದಂತಾಗಿದೆ.

– ಅಜೀಜ್ ಕಿರಗುಂದ

ಠುಸ್ ಎಂದ ಚುನಾವಣಾ ಬಾಂಬ್!

ಇದೇ ಮೇ 10ರಂದು ಹುಬ್ಬಳ್ಳಿಯ ಜೆಎಂಎಫ್‌ಸಿ ಒಂದನೇ ನ್ಯಾಯಾಲಯದಲ್ಲಿ ಬಾಂಬ್ ಸಿಡಿದು ಕಿಟಕಿ, ಪಿಠೋಪಕರಣಗಳು ಪುಡಿಯೆದ್ದಿವೆ. ಇಂತಹ ಘಟನೆಯ ನಿರೀಕ್ಷೆಯಲ್ಲಿಯೇ ಸಿದ್ಧರಾಗಿ ಕುಳಿತಿದ್ದ ಹುಬ್ಬಳ್ಳಿ ಬಾರ್ ಕೌನ್ಸಿಲ್ ಅಧ್ಯಕ್ಷ ಸಿ.ಆರ್. ಪಾಟೀಲ್, ಮನೋಜ್ ಹಾನಗಲ್, ಸಂಜು ಬಡಾಸ್ಕರ್ ಮುಂತಾದ ಸಂಘಪರಿವಾರದ ಚೆಡ್ಡಿ ವಕೀಲರುಗಳು ಪ್ರತಿಭಟನೆಗೆ ಇಳಿದೇಬಿಟ್ಟರು. ತಾವೇನು ಮಾಡುತ್ತಿದ್ದೇವೆಂಬುದರ ಬಗ್ಗೆ ಅರಿವೂ ಇಲ್ಲದೇ ಹುಬ್ಬಳ್ಳಿಯ ಅನೇಕ ಕಡೆ ಇಂತಹ ಬಾಂಬುಗಳನ್ನು ಇಡಲಾಗಿದೆ, ಅವು ಸ್ಫೋಟಗೊಳ್ಳಲಿವೆ ಎಂಬ ಭವಿಷ್ಯವನ್ನೂ ನುಡಿದರು.


ವಾಸ್ತವದಲ್ಲಿ ಹುಬ್ಬಳ್ಳಿ ಜನರ ನಡುವೆ ಹರಿದಾಡುತ್ತಿರುವ ಅನುಮಾನವೇ ಬೇರೆ. ಈ ಚುನಾವಣೆಯಲ್ಲಿ ಬಜೆಪಿಗೆ ಕಳೆದ ಬಾರಿಗಿಂತ ಕಡಿಮೆ ಸೀಟುಗಳು ದೊರೆಯುತ್ತವೆ ಎಂದು ಇತ್ತೀಚೆಗೆ ಮಾಧ್ಯಮಗಳಲ್ಲಿ ಸಮೀಕ್ಷಾ ವರದಿಗಳು ಪ್ರಕಟಗೊಳ್ಳುತ್ತಿರುವುದು, ಅದರಲ್ಲೂ ಮೊದಲ ಹಂತದ ಚುನಾವಣೆಯನ್ನು ಎದುರಿಸುತ್ತಿದ್ದ ದಕ್ಷಿಣ ಕರ್ನಾಟಕದಲ್ಲಿ ಬಜೆಪಿ ಮೂರನೇ ಸ್ಥಾನಕ್ಕಿಳಿಯುವುದೆಂಬ ವರದಿಗಳು ಬಂದಿರುವುದು ಬಜೆಪಿ ಮತ್ತು ಸಂಘಪರಿವಾರಕ್ಕೆ ಆತಂಕವನ್ನು ಹುಟ್ಟಿಸಿವೆ. ಹಾಗಾಗಿ ಈ ಬಜೆಪಿ ವಿರೋಧಿ ಅಲೆಯನ್ನು ಕಾಂಗ್ರೆಸ್ ವಿರೋಧಿ ಅಲೆಯನ್ನಾಗಿ ಪರಿವರ್ತಿಸುವುದಕ್ಕಾಗಿಯೇ ಹುಬ್ಬಳ್ಳಿ ಕೋರ್ಟಿನಲ್ಲಿ ಬಾಂಬ್ ಸ್ಫೋಟಿಸಿ, ಅದಕ್ಕೆ ಮುಸ್ಲಿಮ್ ಉಗ್ರಗಾಮಿಗಳು ಮತ್ತು ಮುಸ್ಲಿಮರನ್ನು ಓಲೈಸುತ್ತಿರುವ ಕಾಂಗ್ರೆಸ್ ಪಕ್ಷ ಕಾರಣ ಎಂದು ಬಿಂಬಿಸುವ ಪ್ರಯತ್ನ ಮಾಡಲಾಗಿದೆ.

ಇತ್ತೀಚೆಗೆ ತಮಿಳುನಾಡಿನಲ್ಲೂ ಇಂತಹದ್ದೇ ಒಂದು ಪ್ರಕರಣ ನಡೆದಿತ್ತು. ಅದರಲ್ಲಿ ಹಿಂದುತ್ವವಾಗಿರದೆ ಖಾಲಿ ಇದ್ದ ಆರೆಸ್ಸೆಸ್ ಆಫೀಸಿನಲ್ಲಿ ಬಾಂಬ್ ಸ್ಫೋಟಿಸಿ ಕೋಮುಗಲಭೆಗಳಿಗೆ ಚಾಲನೆ ನೀಡಲು ನೋಡಿದ್ದರು. ಆದರೆ ಆ ಚೆಡ್ಡಿಗಳೆ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದರು. ಅಂತಹದ್ದೇ ಒಂದು ಯತ್ನ ಇದೂ ಕೂಡ ಆಗಿರಬಹುದೇ ಎಂಬ ಸಂಶಯ ಹಲವರಲ್ಲಿ ಮೂಡಿದ್ದರೆ ಅದು ಸಹಜವಲ್ಲವೇ? ಇದಕ್ಕೆ ಪುಷ್ಟಿ ಕೊಡುವಂತೆ ಹುಬ್ಬಳ್ಳಿಯಲ್ಲಿ ರಜಾ ದಿನವಾದ ಎರಡನೇ ಶನಿವಾರವನ್ನು ಆಯ್ಕೆ ಮಾಡಿಕೊಂಡು ಬಾಂಬ್ ಸ್ಫೋಟಿಸಲಾಗಿದೆ ಎಂಬ ಗಮನಾರ್ಹ ಅಂಶ.

ಅದೇನೇ ಇರಲಿ, ವಾಸ್ತವವಾಗಿ ಈ ಚುನಾವಣಾ ಬಾಂಬ್ ಕೂಡ ಠುಸ್ ಪಟಾಕಿಯಾಗಿರುವುದು ಹಾಸ್ಯಾಸ್ಪದವಾಗಿದೆ!

ಗೆಲ್ಲಬೇಕಾದವರು

ಹರಪನಹಳ್ಳಿ: ಎಂ.ಪಿ. ಪ್ರಕಾಶ್



ಹರಪನಹಳ್ಳಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಸಜ್ಜನ ರಾಜಕಾರಣಿ ಎಂ.ಪಿ. ಪ್ರಕಾಶ್ ಗೆಲ್ಲಬೇಕು. ಅಲ್ಲಿಗೆ ದಂಡೆತ್ತಿ ಹೋಗಿರುವ ಬಿಜೆಪಿಯ ಕರುಣಾಕರ ರೆಡ್ಡಿ ದುಷ್ಟ ರಾಜಕಾರಣ, ಧನಮದ ಹಾಗೂ ಗೂಂಡಾಗಿರಿಯ ಸಂಕೇತದಂತಿದ್ದಾನೆ.

ಆರೋಗ್ಯಕರ ಪ್ರಜಾಪ್ರಭುತ್ವ ವ್ಯವಸ್ಥೆಗೆ ಕರುಣಾಕರ ರೆಡ್ಡಿ, ಜನಾರ್ದನ್ ರೆಡ್ಡಿ ತರಹದ ಖೇದಿಗಳಿಂದ ಆಪತ್ತು ಒದಗುವುದೇ ವಿನಃ ಬೇರೇನೂ ಅಲ್ಲ. ಹರಪನಹಳ್ಳಿಯ ಮತದಾರ ಪ್ರಕಾಶ್‌ರನ್ನು ಗೆಲ್ಲಿಸಿ ವಿಧಾನಸೌಧಕ್ಕೆ ಕಳಿಸುವುದು ಕರ್ನಾಟಕದ ಭವಿಷ್ಯದ ಹಿತದೃಷ್ಟಿಯಿಂದ ಅತ್ಯಗತ್ಯ.

ಚೆನ್ನಗಿರಿ: ಮಹಿಮಾ ಪಟೇಲ್

ಅತೀ ಕಲುಷಿತ ರಾಜಕೀಯ ವಾತಾವರಣವಿದ್ದಾಗ ಅತೀ ಆದರ್ಶಮಯ ನಿಲುವುಗಳು ಒಮ್ಮೆಗೆ ಜನರನ್ನು ತಲುಪಲು ಅಸಾಧ್ಯ. ವಾಸ್ತವ ಹೀಗಿದ್ದಾಗಲೂ 2004 ರ ಚುನಾವಣೆಯಲ್ಲಿ ಹಣ-ಹೆಂಡ ಏನನ್ನು ಹಂಚದೆ ಗೆದ್ದು ಬಂದಿದ್ದರು ಮಹಿಮಾ ಪಟೇಲ್.



ಅವರು ಈ ಬಾರಿ ತಮ್ಮ ಖಾಸಗಿ ಪಕ್ಷವಾದ 'ಸ್ವರ್ಣ ಯುಗ ಪಾರ್ಟಿ'ಯಿಂದ ಚೆನ್ನಗಿರಿಯಿಂದ ಮರು ಆಯ್ಕೆ ಬಯಸಿದ್ದಾರೆ. ಕಾಂಗ್ರೆಸ್‌ನ ವಡ್ನಾಳ್ ರಾಜಣ್ಣ, ಬಿಜೆಪಿಯ ಕೆ.ಎಂ. ವಿರೂಪಾಕ್ಷಪ್ಪ ಹಾಗೂ ಜೆಡಿಎಸ್‌ನ ರಮೇಶ್ ಎಲ್ಲಾ ರೀತಿಯ ಚುನಾವಣಾ ರಾಜಕೀಯದ ವರಸೆಗಳನ್ನು ಪ್ರದರ್ಶಿಸುತ್ತಿದ್ದಾರೆ. ಈ ಗದ್ದಲದಿಂದ ದೂರ ನಿಂತ ಮಹಿಮಾ ಕೆರೆದಡವೊಂದರ ಬಳಿ ಉಪವಾಸ ಕೂತಿದ್ದಾರೆ. ಹೀಗೆ ಜನರಿಂದ ದೂರ ನಿಲ್ಲುವ ಬದಲಾಗಿ ಮಹಿಮಾ ಒಂಚೂರು ಊಟ-ತಿಂಡಿ ತಿಂದುಕೊಂಡೇ ಒಳ್ಳೆಯ ಮೌಲ್ಯಕ್ಕಾಗಿ ತನಗೇ ಓಟು ಹಾಕುವಂತೆ ಓಡಾಡುತ್ತ ಸರಳ ಪ್ರಚಾರ ನಡೆಸಿದ್ದರೆ ಒಳ್ಳೆಯದಿತ್ತೇನೋ!

ಇರಲಿ... ಮಹಿಮಾ ಗೆದ್ದು ಬರಲಿ.

ಚಿತ್ರದುರ್ಗ: ಎಸ್.ಕೆ.ಬಸವರಾಜನ್

ಚಿತ್ರದುರ್ಗದ ಜೆಡಿಎಸ್ ಅಭ್ಯರ್ಥಿ ಬಸವರಾಜನ್ ಕಾಂಗ್ರೆಸ್‌ನ ತಿಪ್ಪಾರೆಡ್ಡಿಗೆ ಹೋಲಿಸಿದರೆ ಒಳ್ಳೇ ಮನುಷ್ಯ ಎನ್ನಬಹುದು. ಈ ತಿಪ್ಪಾರೆಡ್ಡಿ ಈ ಹಿಂದೆ ಎಲೆಕ್ಷನ್ ಗೆದ್ದಕೂಡಲೇ ಬೆಂಗಳೂರು ಸೇರಿಕೊಂಡು ಹಡಬೆ



ಹೆಂಗಸರನ್ನು ಹುಡುಕಿಕೊಂಡು ಅಲೆಯುವುದು, ಸಿಕ್ಕಷ್ಟು ಹಣ ಲಪಟಾಯಿಸಿ ಮೋಜು ಮಾಡುವುದನ್ನೇ ಕಾಯಕ ಮಾಡಿಕೊಂಡಿರುತ್ತಿದ್ದ.

ಈ ಲಂಪಟ ಜನಪ್ರತಿನಿಧಿಯಾಗಲು ಹಂಡ್ರೆಡ್ ಪರ್ಸೆಂಟ್ ನಾಲಾಯಕ್. ಎಸ್.ಕೆ. ಬಸವರಾಜನ್ ಗೆದ್ದರೆ ಮತದಾರನನ್ನು ನಿರ್ಲಕ್ಷಿಸುವುದಿಲ್ಲ ಎಂದು ಭರವಸೆ ತಾಳಬಹುದು.

ಕೊಪ್ಪಳ: ವೀರಸಂಗಯ್ಯ

ಕೊಪ್ಪಳ ಕ್ಷೇತ್ರದ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ ವೀರಸಂಗಯ್ಯ ರೈತ ಹೋರಾಟದ ನಾಯಕರೂ ಹೌದು. ಕೋಮುವಾದಿ ಬಿಜೆಪಿ ಬಗ್ಗೆ ಕರಪತ್ರ ಹಂಚಿದರೆಂದು ಚೆಡ್ಡಿಗಳು ಅವರನ್ನು ಕಳೆದ ವಾರ ಅರೆಸ್ಟ್ ಮಾಡಿಸಿದ್ದರು. ಕರ್ನಾಟಕದ ಒಟ್ಟಾರೆ ಜನಜೀವನದ ಬಗ್ಗೆ ಅಪಾರ ಕಾಳಜಿಗಳಿರುವ ಕೆಟ್ಟ



ರಾಜಕಾರಣಿಗಳು, ದುಷ್ಟ ಸರ್ಕಾರಗಳ ವಿರುದ್ಧ ಸದಾ ದನಿಎತ್ತಿ ಪ್ರತಿಭಟಿಸುವ ವೀರಸಂಗಯ್ಯ ವಿಧಾನಸೌಧಕ್ಕೆ ಬರಬೇಕು. ಬಡರೈತರ, ನೊಂದವರ ಪ್ರತಿನಿಧಿಯಾಗಿ ಅವರು ಹೊಣೆಯರಿತು ಕರ್ತವ್ಯ ನಿರ್ವಹಿಸಬಲ್ಲ ಪ್ರಾಮಾಣಿಕ ವ್ಯಕ್ತಿ.

ಸಾಗರ: ಕಾಗೋಡು ತಿಮ್ಮಪ್ಪ



ಸಮಾಜವಾದಿ ಆಶಯ ಹಾಗೂ ಕಾಂಗ್ರೆಸ್ ಮೌಲ್ಯ ಎರಡೂ ಬೆರೆತರೆ ಕೊನೆಗೆ ಉಳಿಯುವುದು ಕಾಂಗ್ರೆಸ್ ಮಾತ್ರ ಎಂಬುದನ್ನು ನಾವೆಲ್ಲಾ ಬಹಳ ಕಾಲದಿಂದ ನೋಡುತ್ತಾ ಬಂದಿದ್ದೇವೆ.


ಹಳೇ ಸಮಾಜವಾದಿ ಕಾಗೋಡು ತಿಮ್ಮಪ್ಪ ಕೂಡ ಇದಕ್ಕೆ ಹೊರತಲ್ಲ. ಇವರು ಅಧಿಕಾರ ಸಿಕ್ಕಾಗ ಪಕ್ಕಾ ಕಾಂಗ್ರೆಸ್‌ನವರಂತೆಯೂ ಸೋತಾಗಲೆಲ್ಲಾ ಸಮಾಜವಾದಿ ತರಹ ವರ್ತಿಸುವುದುಂಟು.

ಇಷ್ಟಾದರೂ ಕಾಗೋಡು ತಿಮ್ಮಪ್ಪ ಜನ ತಿರಸ್ಕರಿಸಬೇಕಾದ ನಾಯಕ ಅಲ್ಲ. ಅವರು ಈ ಬಾರಿ ಗೆಲ್ಲಬೇಕು. ಬಂಗಾರಪ್ಪರ ಹಳೇ ಶಿಷ್ಯ ಬೇಳೂರು ಗೋಪಾಲಕೃಷ್ಣ ಪಕ್ಕದ ಕ್ಷೇತ್ರದಿಂದ ವಲಸೆ ಬಂದು ಬಿಜೆಪಿ ಟಿಕೆಟ್ ಖರೀದಿಸಿ ಇವರ ವಿರುದ್ಧ ನಿಂತಿದ್ದಾನೆ. ದಳದಿಂದ ಕೆ.ಎಂ. ಕೃಷ್ಣಮೂರ್ತಿ ಇದ್ದಾರೆ.

ಕಾಗೋಡು ತಿಮ್ಮಪ್ಪನವರ ವ್ಯಕ್ತಿತ್ವದೆದುರು ಇವರೆಲ್ಲಾ ಕುಬ್ಜರಾಗಿ ಕಾಣುತ್ತಾರೆ. ಜೊತೆಗೆ ಈ ಬಾರಿ ಬಂಗಾರಪ್ಪ ಸಹ ತಿಮ್ಮಪ್ಪನವರ ವಿರುದ್ಧದ ತಮ್ಮ ಸಿಟ್ಟನ್ನು ಹರಿಬಿಡದೆ ಶಾಂತರಾಗಿರುವುದು ಒಳ್ಳೇ ಸೂಚನೆಯೇ ಸೈ.

ಸಾಗರದ ಜನ ಕಾಗೋಡು ತಿಮ್ಮಪ್ಪನವರನ್ನು ತಮ್ಮ ಪ್ರತಿನಿಧಿಯಾಗಿ ಆರಿಸಲಿ.

ತೀರ್ಥಹಳ್ಳಿ: ಕಿಮ್ಮನೆ ರತ್ನಾಕರ್




ಕಾಂಗ್ರೆಸ್‌ನ ಸಜ್ಜನ ಮುಖಗಳಲ್ಲಿ ತೀರ್ಥಹಳ್ಳಿಯ ವಕೀಲರಾದ ಕಿಮ್ಮನೆ ರತ್ನಾಕರ್ ಒಬ್ಬರು. ಅಪಾರ ಜನಾನುರಾಗಿ ಕಿಮ್ಮನೆ ಕಳೆದ ಬಾರಿ ಸೋತದ್ದೇ ಅತ್ಯಂತ ವಿಷಾದಕರ. ಈ ಬಾರಿ ಅವರೆದುರಾಗಿ ಬಿಜೆಪಿಯ ಆರಗ ಜ್ಞಾನೇಂದ್ರ, ದಳದ ಮಣಿ ಹೆಗ್ಡೆ ಇದ್ದಾರೆ.

ಕಿಮ್ಮನೆಯಂತವರು ಗೆದ್ದು ಬಂದರೆ ಮಲೆನಾಡಿನಲ್ಲಿ ಭಜರಂಗಿಗಳು ಹಚ್ಚಿರುವ ಬೆಂಕಿ ಆರುತ್ತದೆ ಮಾತ್ರವಲ್ಲ ಅಲ್ಲಿನ ಅಡಿಕೆ ಬೆಳೆಗಾರರ ಮತ್ತಿತರರ ಸಮಸ್ಯೆಗಳನ್ನು ಗಮನಿಸಿ ಪರಿಹಾರ ಹುಡುಕುವ ಪ್ರಯತ್ನಗಳಿಗೂ ಚಾಲನೆ ಸಿಗಬಲ್ಲದು.

ತೀರ್ಥಹಳ್ಳಿಯ ಜನರು ಕಿಮ್ಮನೆಯಂತವರನ್ನು ಗೆಲ್ಲಿಸಿ ಕಳುಹಿಸಲು ಹೆಮ್ಮೆಪಡಬೇಕು.

ಮಂಗಳೂರು: ಯು.ಟಿ. ಖಾದರ್




ರಾಜ್ಯದ ಮುಸ್ಲಿಂ ರಾಜಕಾರಣಿಗಳ ಪೈಕಿ ಜವಾಬ್ದಾರಿಯುತ ಮಾತು, ವರ್ತನೆ ಹಾಗೂ ಜನಪರ ಕಾಳಜಿಗಳಿರುವ ಮುಖಂಡರುಗಳ ಪೈಕಿ ಕಾಂಗ್ರೆಸ್‌ನ ಯು.ಟಿ. ಖಾದರ್ ಸಹ ಒಬ್ಬರು. ದಿಟ್ಟತನ, ಸರಳತೆ ಎರಡನ್ನೂ ಮೈಗೂಡಿಸಿಕೊಂಡಿರುವ ಖಾದರ್ ಕೇವಲ ಒಂದು ವರ್ಷದ ಹಿಂದೆ ಉಲ್ಲಾಳ್ ಉಪಚುನಾವಣೆಯಲ್ಲಿ ಗೆದ್ದು ಬಂದಿದ್ದರು.

ಈಗ ಮಂಗಳೂರಿನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಯುವಕ ಯು.ಟಿ. ಖಾದರ್ ಅಲ್ಲಿ ಗೆಲ್ಲಲೇಬೇಕು. ಬಿಜೆಪಿಗಳು ಮಂಗಳೂರನ್ನು ಕರ್ನಾಟಕದ ಕೋಮುದಳ್ಳುರಿಯ ಕೇಂದ್ರವಾಗಿ ಬೆಳೆಸಿ ಅಲ್ಲಿ ಕಾಯಂ ಅಶಾಂತಿ, ಅಭದ್ರತೆ, ಅರಾಜಕತೆ ವಾತಾವರಣ ಸೃಷ್ಟಿಸಿದ್ದಾರೆ. ಈ ಕಲ್ಮಶವನ್ನೆಲ್ಲಾ ತೊಳೆದು ಮಂಗಳೂರಿನ ಜನ ಮತ್ತೆ ನೆಮ್ಮದಿಯ, ಶಾಂತ ಬದುಕಿನತ್ತ ಹೊರಳಬೇಕೆಂದರೆ ಅದು ಖಾದರ್ ಗೆಲುವಿನಿಂದ ಮಾತ್ರ ಸಾಧ್ಯ.

ಚುನಾವಣೆ 2008

ಸೋಲಬೇಕಾದವರು

ಹಳಿಯಾಲ: ಆರ್.ವಿ. ದೇಶಪಾಂಡೆ



ನಾಮಪತ್ರ ಸಲ್ಲಿಸುವಾಗ ನೂರು ಚಿಲ್ಲರೆ ಕೋಟಿ ಆಸ್ತಿ ಘೋಷಣೆ ಮಾಡಿಕೊಂಡಿರುವ ಆರ್.ವಿ. ದೇಶಪಾಂಡೆ ಕರ್ನಾಟಕ ಕಂಡ ಮಹಾನ್ ಭ್ರಷ್ಟ ಹಾಗೂ ಕಂಕನರಿ ಬುದ್ಧಿಯ ರಾಜಕಾರಣಿ. ಅಧಿಕಾರಕ್ಕಾಗಿ ಯಾವ ಘಳಿಗೆಯಲ್ಲಿ ಯಾವ ಪಕ್ಷಕ್ಕೆ ಬೇಕಾದರೂ ನೆಗೆದು ನಗಬಲ್ಲ ಅವಕಾಶವಾದಿ ಈತ. ಬೃಹತ್ ಕೈಗಾರಿಕಾ ಸಚಿವನಾಗಿದ್ದಾಗ ಅರ್ಧ ಬೆಂಗಳೂರನ್ನೇ ಕಳ್ಳ ಖದೀಮರಿಗೆ ಮಾರಿ ತಾನೂ ಜೇಬು ಭರ್ತಿ ಮಾಡಿಕೊಂಡಿದ್ದಾನೆ.

ಈ ದೇಶಪಾಂಡೆಗೆ ಯಾವುದೇ ಮೌಲ್ಯ ಜನಪರ ಕಾಳಜಿಗಳಿಲ್ಲ, ರಾಜ್ಯ ರಾಜಕಾರಣದಲ್ಲಿ ಅತಿ ಕೆಟ್ಟ ಮುಖಗಳಲ್ಲಿ ಈತನದ್ದೂ ಒಂದು. ಈ ಭ್ರಷ್ಟನನ್ನು ಹಳಿಯಾಲದ ಜನತೆ ಸೋಲಿಸಿದರೆ ಇಡೀ ಕರ್ನಾಟಕವೇ ಬದುಕಿಕೊಳ್ಳುತ್ತದೆ.

ಬಂಟ್ವಾಳ: ನಾಗರಾಜ ಶೆಟ್ಟಿ

ಕರಾವಳಿಯ ನರೇಂದ್ರ ಮೋದಿಯಂತಾಡುವ ಬಿಜೆಪಿ ಅಭ್ಯರ್ಥಿ ನಾಗರಾಜ ಶೆಟ್ಟಿ ಒಬ್ಬ ದುಷ್ಟ ಕ್ರಿಮಿ. ಇವನಿಗೆ ರಕ್ತದಾಹ ಎಷ್ಟು ಮಿತಿ ಮೀರಿದೆಯೆಂದರೆ ವ್ಯಾಪಾರ, ಉದ್ಯಮ, ಅಧಿಕಾರಕ್ಕಿಂತಲೂ ಹೆಚ್ಚಾಗಿ ಈ ಶೆಟ್ಟಿಗೆ ಮುಸ್ಲಿಮರ ರಕ್ತ ಕುಡಿಯಬೇಕಿದೆ.



ಇದು ಕೋಮುವಾದಿಯೊಬ್ಬ ತಲುಪಬಹುದಾದ ಅತ್ಯಂತ ಅಪಾಯಕಾರಿ ಹಂತ. ಕರಾವಳಿಯ ಪೊಲೀಸರಿಗೆ ಈ ದೇಶದ ಸಂವಿಧಾನ ಮತ್ತು ಕಾನೂನಿನ ಬಗ್ಗೆ ಗೌರವ ಇದ್ದಿದ್ದರೆ ಈ ನಾಗರಾಜ ಶೆಟ್ಟಿ ಇಷ್ಟು ಹೊತ್ತಿಗೆ ಜೈಲಿನಲ್ಲಿರಬೇಕಿತ್ತು.

ಈಗಲೂ ಕಾಲ ಮಿಂಚಿಲ್ಲ.

ಬಂಟ್ವಾಳದ ಮತದಾರ ಕಾಂಗ್ರೆಸ್‌ನ ರಮಾನಾಥ್ ರೈ ತರಹದವರನ್ನು ಆರಿಸಿಕೊಳ್ಳುವ ಮೂಲಕ ಶೆಟ್ಟಿಯನ್ನು ತಿರಸ್ಕರಿಸಬೇಕಿದೆ. ಕರ್ನಾಟಕದಲ್ಲಿ ಬಿಜೆಪಿಗಳ ಕೋಮುದ್ವೇಷದ ಚಟುವಟಿಕೆಗಳನ್ನು ಬಗ್ಗು ಬಡಿಯಲು ಬಂಟ್ವಾಳದಲ್ಲಿ ಈ ಶೆಟ್ಟಿ ಸೋಲಲೇಬೇಕು.

ಕಾರ್ಕಳ: ಸುನೀಲ್‌ಕುಮಾರ್




ದೇವರ ಹೆಸರು ಹೇಳಿ ದುಡ್ಡು ಕದಿಯುವುದು, ಬಡವರ ಹೆಸರೇಳಿಕೊಂಡು ಭೂಮಿ ಕಬಳಿಸುವುದು... ಇಂಥದರಲ್ಲಿ ಎಕ್ಸ್‌ಪರ್ಟ್ ಆಗಿರುವ ಕಾರ್ಕಳದ ಮಾಜಿ ಶಾಸಕ ಚೆಡ್ಡಿ ಸುನೀಲ್ ಕುಮಾರ್ ಈ ಬಾರಿ ಮತ್ತೆ ಬಿಜೆಪಿ ಅಭ್ಯರ್ಥಿ. ಕಳೆದ ಬಾರಿ ಗೆದ್ದ ನಂತರ ಈ ಭಜರಂಗಿ ವೀರ ಬೆಂಗಳೂರಿನಲ್ಲಿ ನಡೆಸಿರುವ ರಿಯಲ್ ಎಸ್ಟೇಟ್ ಕಳ್ಳ ದಂಧೆ ನೋಡಿ ಬೆಂಗಳೂರಿನ ಭೂಗಳ್ಳರೇ ಬೆರಗಾಗಿದ್ದರು.

ಭಜರಂಗಿ ಪುಂಡರ ನಾಯಕ ಸುನೀಲ್ ಕುಮಾರ್ ಕಳೆದ ಬಾರಿ ಗೆದ್ದಿದ್ದು ಕೂಡ ಆಗ ಬಿಜೆಪಿಯಲ್ಲಿದ್ದ ಬಂಗಾರಪ್ಪನವರ ಶಕ್ತಿಯಿಂದಲೇ ವಿನಃ ಸ್ವಂತ ಯೋಗ್ಯತೆಯಿಂದಲ್ಲ. ಈ ಬಾರಿ ಕಾರ್ಕಳದ ಜನತೆ ಸುನೀಲನನ್ನು ಸೋಲಿಸಿದರೆ ಇಡೀ ಕರ್ನಾಟಕದ ಜನತೆ ಅಭಿನಂದಿಸಲಿದ್ದಾರೆ.

ಚಿಕ್ಕಮಗಳೂರು: ಸಿ.ಟಿ. ರವಿ


ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹಲವಾರು ಬಾರಿ ಘೋಷಿಸಿಕೊಂಡರೂ ಒಮ್ಮೆಯೂ ಅದನ್ನು ನಿಜ ಮಾಡದೆ ಕರ್ನಾಟಕದ ಜನತೆಗೆ ನಿರಾಶೆ ಮಾಡಿರುವ ಸಿ.ಟಿ. ರವಿ ಸೋಲಲೇಬೇಕು.



ರಾಜ್ಯ ಬಿಜೆಪಿಯ ರಕ್ತಬೀಜಾಸುರರ ಗುಂಡಿನ ನಾಯಕ ಸಿ.ಟಿ. ರವಿ ಪ್ರತಿವರ್ಷ ಬಾಬಾಬುಡನ್ ಗಿರಿ ವಿವಾದಕ್ಕೆ ಕಿಡಿ ಹಚ್ಚುತ್ತಾ ಇಡೀ ರಾಜ್ಯದ ನೆಮ್ಮದಿ ಹಾಳು ಮಾಡುತ್ತಾ ಬಂದಿದ್ದಾನೆ. ಈತ ಬಾಯಿಬಿಟ್ಟರೆ ಹಿಂದೂ ಧರ್ಮೋದ್ಧಾರದ ಬೊಗಳೆ ಮಾತಾಡುತ್ತಲೇ ತನ್ನ ಸ್ವಂತಕ್ಕೆ ನೂರಾರು ಕೋಟಿ ಆಸ್ತಿ ಮಾಡಿಕೊಂಡಿದ್ದಾನೆ. ಅಷ್ಟೇ ಅಲ್ಲ, ಈ ಭಂಡ "ನಾನು ಮೊದಲಿನಷ್ಟು ಪ್ರಾಮಾಣಿಕವಾಗಿ ಈಗ ಉಳಿದುಕೊಂಡಿಲ್ಲ" ಅಂತಲೂ ಹೇಳಿಕೊಂಡಿದ್ದಾನೆ.

ಕರ್ನಾಟಕದ ಜನತೆಯ ಪಾಲಿಗೆ ಪೀಡೆಯಾಗಿರುವ ಈ ಶನಿಯನ್ನು ಚಿಕ್ಕಮಗಳೂರಿನ ಜನ ಸೋಲಿಸಿ ತೊಲಗಿಸಬೇಕಿದೆ. ಸಾಮಾಜಿಕ ಕಾಳಜಿಗಳಿರುವ ಯಾರಾದರೂ ಈ ರವಿ ಬೆಂಗಳೂರು, ದೇವನಹಳ್ಳಿ ಸುತ್ತಾಮುತ್ತಾ ಸರ್ಕಾರಿ ಭೂಮಿ ಕದ್ದಿರುವ ಬಗ್ಗೆ ಮಾಹಿತಿ ಸಂಗ್ರಹಿಸಿ ಕೇಸ್ ಹಾಕಿದರೆ ರವಿ ವಿಧಾನಸೌಧದ ಬದಲು ಪರಪ್ಪನ ಅಗ್ರಹಾರ ಜೈಲಿಗೆ ಹೋಗಬೇಕಾಗುತ್ತದೆ.

ಹೊನ್ನಾಳಿ: ನರ್ಸ್ ರೇಣುಕಾ



'ಹೊನ್ನಾಳಿ ಹೊಡ್ತ' ಅನ್ನೋದರ ಅರ್ಥ ನಿಮಗೆಲ್ಲಾ ಗೊತ್ತಿರುತ್ತೆ. ಇಂಥ ಗಂಡುಮೆಟ್ಟಿದ ನಾಡಿನಿಂದ ಗೆದ್ದು ಶಾಸಕನಾಗಿದ್ದ ಬಿಜೆಪಿ ರೇಣುಕಾಚಾರ್ಯ ಆಮೇಲೆ ಹೊಡೆತ ತಿಂದಿದ್ದೆಲ್ಲಾ ಹೆಣ್ಣುಮಕ್ಕಳ ಕೈಲೇನೇ! ದಾವಣಗೆರೆ ಎಸ್‌ಪಿ ಸಾನಿಯಾ ನಾರಂಗ್ ಒಮ್ಮೆ 'ರೇಣುಕಾ'ಳನ್ನು ರಸ್ತೆ ಮೇಲೆ ಕೆಡವಿ ಕುಂಡೆ ಮೇಲೊದ್ದಿದ್ದರು. ಅಲ್ಲಿಂದ ಎದ್ದು ಬೆಂಗಳೂರಲ್ಲಿ ಅವಿತಿಟ್ಟುಕೊಂಡಿದ್ದಾಗ ಸುಂದರಿ ನರ್ಸ್ ಜಯಲಕ್ಷ್ಮಿ ರೇಣುಕನ ತಲ್‌ತಲೆ ಮೇಲೇ ಹೊಡೆದು ಅವಮಾನ ಮಾಡಿಬಿಟ್ಟಳು. ಯಡ್ಡಿಗೆ ಸಿಎಂಗಿರಿ ಕೈತಪ್ಪಿದ್ದಾಗ ಹಗಲು ರಾತ್ರಿ ಕಾವಲುಗಾರನಂತೆ ಯಡ್ಡಿಯ ಹಿಂದೆಯೇ ಇರುತ್ತಿದ್ದ ಈ ರೇಣುಕ ಈಗ ಮತ್ತೆ ಹೊನ್ನಾಳಿಗೆ ಬಂದು ಓಟು ಬೇಡುತ್ತಿದ್ದಾನೆ.

ಈ ಜೋಕರ್‌ಗೆ ಏನು ಯೋಗ್ಯತೆ ಇದೆ ಅಂತ ಓಟು ಹಾಕಬೇಕೋ ಹೊನ್ನಾಳಿ ಜನರೇ ತೀರ್ಮಾನಿಸಲಿ.

ಬಳ್ಳಾರಿ: ಶ್ರೀರಾಮುಲು



ಹೆಸರು ರಾಮುಲು ಅಂತಿದ್ದರೂ ಅಪ್ಪಟ ರಾಕ್ಷಸ, ಗೂಂಡಾ ಸ್ವಭಾವದ ಚೆಡ್ಡಿ ಶ್ರೀರಾಮುಲು ತರಹದ ರಾಜಕಾರಣಿಗಳು ಕರ್ನಾಟಕದ ಜನರಿಗೆ ಬೇಕಾಗಿಲ್ಲ. ಒಮ್ಮೆ ಶಾಸಕ ನಂತರ ಮಂತ್ರಿಯಾದರೂ ಈತನ ಬೀದಿ ಪುಂಡನ ಸ್ವಭಾವ ಬದಲಾಗಲೇ ಇಲ್ಲ. ಮುಖ್ಯವಾಗಿ ಬಳ್ಳಾರಿಯ ಗಣಿ ರೆಡ್ಡಿಗಳ ಬಾಡಿಗೆ ಭಂಟನಂತಿರುವ ರಾಮುಲು ಈ ಪ್ರಾಂತ್ಯದ ನಾಯಕ ಜನಾಂಗದವರ ಜಾತಿ ಭಾವನೆ ಕೆರಳಿಸಿ ತಾನೇ ಅವರೆಲ್ಲರ ಲೀಡರ್‌ನಂತೆ ಮೆರೆಯುತ್ತಿದ್ದಾನೆ. ಆದರ ಪ್ರತಿಫಲವಾಗಿ ರಾಮುಲುಗೆ ಗಣಿ ದುಡ್ಡು, ಹೆಲಿಕಾಪ್ಟರ್ ಎಲ್ಲಾ ಸಿಕ್ಕಿದೆ. ಆದರೆ ಇವನಿಗೆ ಬೆಂಬಲ ಕೊಟ್ಟ ಜನರಿಗೇನು ಸಿಕ್ಕಿದೆ....? ■

ಚಿತ್ರದುರ್ಗ : ಕಾಂಗ್ರೆಸ್, ಜೆಡಿಎಸ್ ಹಣಾಹಣಿ ಬಸವರಾಜನ್ ಪರ ಒಲವು


ಚುನಾವಣೆ 2008

ಸತತವಾಗಿ ಮೂರು ಬಾರಿ ಆಯ್ಕೆಯಾಗಿ ಹ್ಯಾಟ್ರಿಕ್ ಬಾರಿಸಿರುವ ಮಾಜಿ ಶಾಸಕ ತಿಪ್ಪಾರೆಡ್ಡಿ ಈ ಬಾರಿ ತುಂಬಾ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಕಳೆದ ಬಾರಿ ಗೆಲುವಿನಂಚಿಗೆ ಬಂದು ಪರಾಭವಗೊಂಡಿದ್ದ ಎಸ್. ಬಸವರಾಜನ್ ಪರವಾಗಿ ಇಡೀ ಕ್ಷೇತ್ರದಾದ್ಯಂತ 'ಒಂದು ಅವಕಾಶ ಕೊಟ್ಟು ನೋಡಬೇಕು'ಎಂಬ ಅಭಿಪ್ರಾಯಗಳು ಕೇಳಿಬರುತ್ತಿವೆ.

ಚಿತ್ರದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್, ಕಾಂಗ್ರೆಸ್, ಬಿಜೆಪಿ ನಡುವೆ ತ್ರಿಕೋಣ ಸ್ಪರ್ಧೆಯಿದೆ. ಸತತವಾಗಿ ಮೂರು ಬಾರಿ ಆಯ್ಕೆಯಾಗಿ ಹ್ಯಾಟ್ರಿಕ್ ಬಾರಿಸಿರುವ ಮಾಜಿ ಶಾಸಕ ತಿಪ್ಪಾರೆಡ್ಡಿ ಈ ಬಾರಿ ತುಂಬಾ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಕಳೆದ ಬಾರಿ ಗೆಲುವಿನಂಚಿಗೆ ಬಂದು ಪರಾಭವಗೊಂಡಿದ್ದ ಎಸ್. ಬಸವರಾಜನ್ ಪರವಾಗಿ ಇಡೀ ಕ್ಷೇತ್ರದಾದ್ಯಂತ 'ಒಂದು ಅವಕಾಶ ಕೊಟ್ಟು ನೋಡಬೇಕು'ಎಂಬ ಅಭಿಪ್ರಾಯಗಳು ಕೇಳಿಬರುತ್ತಿವೆ. ಬಿಜೆಪಿಯ ಜಿ.ಎಸ್. ಮಂಜುನಾಥ್, ಜೆಡಿಎಸ್-ಕಾಂಗ್ರೆಸ್‌ಗಳಿಗೆ ಪ್ರಬಲ ಪ್ರತಿಸ್ಪರ್ಧೆ ನೀಡಲಿದ್ದಾರೆ.


ತಿಪ್ಪಾರೆಡ್ಡಿಯವರ ಮೋಡಿ ಈ ಬಾರಿ ವರ್ಕ್‌ಔಟ್ ಆಗುವ ಲಕ್ಷಣಗಳು ಕಾಣಿಸುತ್ತಿಲ್ಲ. ತಿಪ್ಪಾರೆಡ್ಡಿಯವರು ತಮ್ಮ ಅಧಿಕಾರಾವಧಿಯಲ್ಲಿ ಮಾಡಿದ ಸಾಧನೆಗಳಿಗಿಂತ ಸೃಷ್ಟಿಸಿಕೊಂಡ ವೈರಿಗಳ ಸಂಖ್ಯೆಯೇ ಹೆಚ್ಚಾಗಿದೆ. ತಿಪ್ಪಾರೆಡ್ಡಿಯವರನ್ನು ಪ್ರತಿಬಾರಿ ಹೆಗಲ ಮೇಲೊತ್ತುಕೊಂಡು ಶಾಸಕರನ್ನಾಗಿ ಪ್ರತಿಷ್ಠಾಪಿಸಿದವರ ಪರಿಸ್ಥಿತಿ, ಹೊಳೆ ದಾಟಿಸಿದ ಅಂಬಿಗನಂತಾಗಿದೆ.

ನಗರಸಭೆಯ ಮಾಜಿ ಅಧ್ಯಕ್ಷ ಬಿ.ಕಾಂತರಾಜ್, ಸಿ.ಟಿ. ಕೃಷ್ಣಮೂರ್ತಿ ಸೇರಿದಂತೆ ಬಹುತೇಕರು ಈ ಬಾರಿ ಜೆಡಿಎಸ್‌ನ ಬಸವರಾಜನ್ ಬೆಂಬಲಕ್ಕೆ ನಿಂತಿದ್ದಾರೆ. ಲಾಗಾಯ್ತಿನಿಂದ ಕಾಂಗ್ರೆಸ್‌ಗೆ ನಿಷ್ಠರಾಗಿದ್ದ ಎಂ.ಕೆ. ತಾಜ್‌ಪೀರ್ ಅಧಿಕೃತವಾಗಿ ಜೆಡಿಎಸ್‌ಗೆ ಸೇರ್ಪಡೆಯಾಗಿದ್ದಾರೆ.


ಮಂಜುನಾಥ್

ಚಿತ್ರದುರ್ಗ ಕ್ಷೇತ್ರವನ್ನು ಗುಡಿಸಲುರಹಿತವಾಗಿಸಿದ ಹಾಗೂ ನಗರಕ್ಕೆ ಸೂಳೆಕೆರೆಯಿಂದ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಕ್ಕೆ ತಂದ ಹೆಗ್ಗಳಿಕೆ ನನ್ನದೇ ಎಂದು ತಿಪ್ಪಾರೆಡ್ಡಿ ಹೇಳುತ್ತಿದ್ದರೂ ಅವರೇ ಸೃಷ್ಟಿಸಿಕೊಂಡ ರಾಜಕೀಯ ಒಳಸುಳಿಗಳು ಎಲ್ಲವನ್ನು ಆಪೋಶನ ತೆಗೆದುಕೊಳ್ಳುತ್ತಿವೆ.

ತಮಗೆ ರಾಜಕೀಯವಾಗಿ ಸಾಥ್ ನೀಡಿದ ಬೆಂಬಲಿಗರ, ಹಿಂಬಾಲಕರ ಹೆಗಲ ಮೇಲೆ ಕೈಹಾಕಿ ಬೆಂಬಲಿಗರಿಗೆ ಶಾಕ್ ನೀಡುವುದು ತಿಪ್ಪಾರೆಡ್ಡಿ ಪಾಲಿಸಿಕೊಂಡು ಬರುತ್ತಿರುವ ಪರಿಪಾಠ. ತಮ್ಮನ್ನು ಬೆಂಬಲಿಸುವವರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ವಿಮರ್ಶಾತೀತವಾಗಿ ಸ್ವಾಮಿನಿಷ್ಠೆಯನ್ನು ಪ್ರದರ್ಶಿಸಬೇಕೆಂದು ನಿರೀಕ್ಷಿಸುತ್ತಾರೆ.


ಬಸವರಾಜನ್

ಚಿತ್ರದುರ್ಗ ನಗರ ಹಾಗೂ ಗ್ರಾಮೀಣ ಪ್ರದೇಶಗಳೆರಡನ್ನೂ ಒಮ್ಮೆ ಅವಲೋಕಿಸಿದರೆ ಸತತವಾಗಿ ಮೂರು ಬಾರಿ ಪ್ರತಿನಿಧಿಸಿದ ತಿಪ್ಪಾರೆಡ್ಡಿಯವರು ಕ್ಷೇತ್ರದ ಜನರಿಗಾಗಿ ಏನು ಮಾಡಿದ್ದಾರೆಂದು ಕೇಳಲು ನೂರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಇನ್ನು ತಿಪ್ಪಾರೆಡ್ಡಿಯವರು ಹಿಂದುಳಿದವರ, ಅಲ್ಪಸಂಖ್ಯಾತರ ರಾಜಕೀಯ ಕಾಳಜಿ ಕೂಡಾ ಅವರ ಹೆಗಲ ಮೇಲೆ ಕೈಹಾಕಿ ಮಾತನಾಡಿಸುವುದಕ್ಕಷ್ಟೇ ಸೀಮಿತವಾಗಿದೆ. ಕಾಂಗ್ರೆಸ್‌ನಿಂದ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಿದಾಗಲೆಲ್ಲ ಬಂಡಾಯ ಅಭ್ಯರ್ಥಿಯಾಗಿ ನಿಂತು ಚುನಾವಣೆ ಎದುರಿಸಿ ಗೆದ್ದಿದ್ದಾರೆ. ಇದೇ ಕಾರಣಕ್ಕೆ ಪಕ್ಷದಲ್ಲಿ ಹಿರಿಯರಾಗಿ, ನಿಷ್ಠರಾಗಿ ದುಡಿದ ಅಲ್ಪಸಂಖ್ಯಾತರನ್ನು ಅತ್ಯಂತ ನಿಕೃಷ್ಟವಾಗಿ ಕಾಣುತ್ತಾ ಅನ್ವರ್ ಶಿವುನಂತಹ ದೋ ನಂಬರ್ ದಂಧೆಕೋರರನ್ನು ವೈಭವೀಕರಿಸುತ್ತಾ ಬಂದಿದ್ದಾರೆ. ತಿಪ್ಪಾರೆಡ್ಡಿಯವರ ಈ ಅಲ್ಪಸಂಖ್ಯಾತ ವಿರೋಧಿ ಧೋರಣೆಗೆ ಬೇಸತ್ತು ಬಹುತೇಕ ನಾಯಕರು ಕಾಂಗ್ರೆಸ್‌ಗೆ ಗುಡ್‌ಬೈ ಹೇಳಿದ್ದಾರೆ.

ಇದೆಲ್ಲದರ ಪರಿಣಾಮವನ್ನು ಈ ಬಾರಿ ಚುನಾವಣೆಯಲ್ಲಿ ಅನುಭವಿಸಲೇಬೇಕಿದೆ.

ಬಿಜೆಪಿಯಿಂದ ಸ್ಪರ್ಧಿಸಿರುವ ಭೀಮಸಮುದ್ರದ ಅಡಿಕೆ ಧಣಿ ಜಿ.ಎಸ್. ಮಂಜುನಾಥ್ ಕ್ಷೇತ್ರದಲ್ಲಿ ಹಣದ ಹೊಳೆಯನ್ನೇ ಹರಿಸುತ್ತಿದ್ದಾರೆ. ಈತನ ರೊಕ್ಕದ ಗಂಟನ್ನು ನೋಡಿಯೇ ಯುವಕರು, ಪುಢಾರಿನಾಯಕರು ಜೈಕಾರ ಹಾಕಿಕೊಂಡು ಸುತ್ತುತ್ತಿದ್ದಾರೆ. ಮಂಜುನಾಥ್‌ಗೆ ಮತದಾರರ ಮೇಲಿನ ವಿಶ್ವಾಸಕ್ಕಿಂತ ತಾನು ಚೆಲ್ಲುವ ರೊಕ್ಕದ ಮೇಲೆಯೇ ಹೆಚ್ಚು ವಿಶ್ವಾಸವಿದ್ದಂತಿದೆ. ಸಾದ ಲಿಂಗಾಯತರ ಮತಗಳು ಹಾಗೂ ನಗರದಲ್ಲಿ ಆರೆಸ್ಸೆಸ್ ಪ್ರೀತಿಯುಳ್ಳ ಮಾರ್ವಾಡಿಗಳು, ಶೆಟ್ಟರ ಓಟುಗಳನ್ನು ನೆಚ್ಚಿಕೊಂಡಿರುವ ಈತ ಪ್ರಬಲ ಸ್ಪರ್ಧೆಯನ್ನಂತೂ ನೀಡುವುದು ಖಚಿತ.



ತಿಪ್ಪಾರೆಡ್ಡಿ

ಜಾತ್ಯತೀತ ಜನತಾದಳದಿಂದ ಸ್ಪರ್ಧಿಸಿರುವ ಎಸ್.ಕೆ ಬಸವರಾಜನ್‌ಗೆ ಈ ಬಾರಿ ಅದೃಷ್ಟ ಖುಲಾಯಿಸಿದಂತಿದೆ. ಕಳೆದಬಾರಿ ಗೆಲುವಿನಂಚಿಗೆ ಬಂದು ಪರಾಭವಗೊಂಡಿದ್ದ ಬಸವರಾಜನ್ ಎಂತಹ ರಾಜಕೀಯ ಬೆಳವಣಿಗೆಯ ಸಂದರ್ಭದಲ್ಲೂ ವಿಚಲಿತರಾಗದೆ ಜೆಡಿಎಸ್‌ನಲ್ಲೆ ಉಳಿದು ತಮ್ಮ ರಾಜಕೀಯ ನೆಲೆಯನ್ನು ಭದ್ರಗೊಳಿಸಿಕೊಂಡಿದ್ದಾರೆ. ಕಳೆದಬಾರಿ ಬೆಂಬಲಿಗರ ಜೈಕಾರಗಳಿಗೆ ಕರಗಿಹೋಗಿದ್ದ ಬಸವರಾಜನ್ ಈ ಬಾರಿ ಪ್ರಸನ್ನಚಿತ್ತರಾಗಿಯೇ ಅಖಾಡಕ್ಕಿಳಿದಿದ್ದಾರೆ. ಇತ್ತೀಚೆಗೆ ನಡೆದ ನಗರಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗಳ ಸಾಧನೆಯೇ ಇದಕ್ಕೆ ಒಳ್ಳೆಯ ನಿದರ್ಶನ.

ಮುರುಘಾಮಠದ ವಿವಾದವನ್ನು ಕೇಂದ್ರವಾಗಿಟ್ಟುಕೊಂಡು ಎಸ್.ಕೆ. ಬಸವರಾಜನ್‌ರ ರಾಜಕೀಯ ಭವಿಷ್ಯವನ್ನು ಸಮೀಕರಣ ಮಾಡುವ ಪರಿಸ್ಥಿತಿಯಂತೂ ಈಗಿಲ್ಲ. ಕೆಲ ಲಿಂಗಾಯತ ಮುಖಂಡರು ಬಸವರಾಜನ್‌ರನ್ನು ಸೋಲಿಸಲೇಬೇಕೆಂದು ಹೆಣೆಯುತ್ತಿರುವ ಗುಂಪುಗಾರಿಕೆಗಳು ಫಲ ಕೊಡಲಾರವು. ಇಂತಹ ಬೆರಳೆಣಿಕೆಯ ಜನರನ್ನು ಹೊರತುಪಡಿಸಿದರೆ ಬಹುತೇಕರು ಬಸವರಾಜನ್ ಜೊತೆಗಿದ್ದಾರೆ. ಹಾಗೆಂದು ಎಸ್.ಕೆ. ಬಸವರಾಜನ್ ವಿಮರ್ಶಾತೀತ ಮಿಸ್ಟರ್ ಕ್ಲೀನ್ ಇಮೇಜನ್ನೇನೂ ಹೊಂದಿಲ್ಲ, ಶಕ್ತಿರಾಜಕಾರಣದ ಎಲ್ಲಾ ಪಟ್ಟುಗಳನ್ನು -ಅಸ್ತ್ರಗಳನ್ನು ಬಸವರಾಜನ್ ಕೂಡಾ ಅನುಸರಿಸುತ್ತಿದ್ದಾರೆ.

ಈ ಓರೆಕೋರೆಗಳ ನಡುವೆಯೂ ಚಿತ್ರದುರ್ಗದ ಜನ ಬದಲಾವಣೆಯನ್ನು ಬಯಸುತ್ತಿದ್ದಾರೆ. ಇಡೀ ಕ್ಷೇತ್ರದಲ್ಲಿ ಬಸವರಾಜನ್ ಪರ ಅಲೆ ಇದೆ. ಕಳೆದ ಬಾರಿ ಗೆಲುವಿನಂಚಿಗೆ ಬಂದು ಸೋತುಹೋದರೆಂಬ ಅನುಕಂಪವೂ ಇದೆ. ಇದರ ಜೊತೆಗೆ ಚಿತ್ರದುರ್ಗ ನಗರ ಸೇರಿದಂತೆ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಒಳ್ಳೆಯ ದೃಷ್ಟಿಕೋನವನ್ನು ಹೊಂದಿದ್ದಾರೆ. ಇದೆಲ್ಲಾ ಬಸವರಾಜನ್‌ಗೆ ಅನುಕೂಲವಾಗಲಿದ್ದು ಗೆಲುವಿನ ಹಾದಿ ಸುಗಮವಾಗಿದೆ. ■

ಚಳ್ಳಕೆರೆ: ಮಾಜಿ ಸಚಿವ ತಿಪ್ಪೆಸ್ವಾಮಿ V/s ನಟ ಶಶಿಕುಮಾರ್



ತಿಪ್ಪೇಸ್ವಾಮಿ

ಕ್ಷೇತ್ರ ಪುನರ್ವಿಂಗಡನೆಯಿಂದಾಗಿ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರುವ ಚಳ್ಳಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಸಚಿವ ತಿಪ್ಪೇಸ್ವಾಮಿ ಮತ್ತು ನಟ ಶಶಿಕುಮಾರ್ ನಡುವೆ ನೇರಾ ಹಣಾಹಣಿಯಿದೆ. ದೇವೇಗೌಡರ ಬಲಗೈ ಭಂಟರಾಗಿದ್ದ ಮಾಜಿ ಸಚಿವ ತಿಪ್ಪೇಸ್ವಾಮಿ ಇಲ್ಲಿ ಬಿಜೆಪಿ ಅಭ್ಯರ್ಥಿ. ಮಾಜಿ ಸಂಸದ ಶಶಿಕುಮಾರ್ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದಾರೆ.

ಆರಂಭದಲ್ಲಿ ಬಿಜೆಪಿ ಪರವಾದ ಅಲೆಯೇ ಪ್ರಧಾನವಾಗಿದ್ದರೂ, ದಿನಕಳೆದಂತೆ ಶಶಿಕುಮಾರ್ ಪ್ರಭಾವ ಹೆಚ್ಚುತ್ತಿದೆ. ಶಶಿಕುಮಾರ್‌ಗೆ ಕ್ಷೇತ್ರ ಸುತ್ತಲಿಕ್ಕೂ ಸಮಯವಿಲ್ಲ. ಸಂಸದರಾಗಿದ್ದಾಗ ಮಾಡಿದ ಒಂದಷ್ಟು ಕೆಲಸಗಳು ಹಾಗೂ ಸಿನಿಮಾ ನಟನೆಂಬ ಇಮೇಜು ಶಶಿಕುಮಾರ್‌ಗೆ ಸಹಾಯಕವಾಗಿದೆ. ಜೆಡಿಎಸ್‌ನಿಂದ ಕಣಕ್ಕಿಳಿದಿರುವ ಪುರಸಭಾ ಸದಸ್ಯ ತಿಪ್ಪೇಸ್ವಾಮಿ ಕಣದಲ್ಲಿದ್ದಾರೆ.


ಶಶಿಕುಮಾರ್

ಮೊಳಕಾಲ್ಮೂರು : ಎನ್.ವೈ.ಗೋಪಾಲಕೃಷ್ಣ V/s ಎತ್ನಟ್ಟಿಗೌಡ





ಗೋಪಾಲಕೃಷ್ಣ

ಸತತವಾಗಿ ಎರಡು ಬಾರಿ ಕ್ಷೇತ್ರವನ್ನು ಪ್ರತಿನಿಧಿಸಿದ ಕಾಂಗ್ರೆಸ್‌ನ ಎನ್.ವೈ. ಗೋಪಾಲಕೃಷ್ಣ ಈ ಬಾರಿ ಏದುಸಿರು ಬಿಡುತ್ತಿದ್ದಾರೆ. ಪ್ರಚಾರಕ್ಕೆ ಹೋದೆಡೆಯಲ್ಲೆಲ್ಲಾ ಮತದಾರರ ತೀವ್ರ ಅಸಮಾಧಾನವನ್ನು ಎದುರಿಸುತ್ತಿದ್ದಾರೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಎನ್.ವೈ. ಗೋಪಾಲಕೃಷ್ಣ ಅವರ ರಾಜಕೀಯ ಚರಿತ್ರೆ-ಬುದ್ಧಿವಂತಿಕೆ ಕ್ಷೇತ್ರದ ಜನರ ಅಭಿವೃದ್ಧಿಗೆ ಬಳಕೆಯಾದ ನಿದರ್ಶನಗಳು ಇಲ್ಲ. ಮೊಳಕಾಲ್ಮೂರು ಈಗಲೂ ಜಿಲ್ಲೆಯಲ್ಲಿ ಅತ್ಯಂತ ಹಿಂದುಳಿದ ಕ್ಷೇತ್ರ. ಅಲ್ಲಿನ ಮೂಲಭೂತ ಸೌಕರ್ಯಗಳ ಕೊರತೆ ಜನರ ಜೀವನಮಟ್ಟ ಅಧೋಗತಿಗೆ ಇಳಿದಿದೆ. ಸ್ಥಳೀಯ ರೇಷ್ಮೆ ಉದ್ಯಮ ಕೂಡಾ ಅನೇಕ ರೀತಿಯ ಸಂಕಷ್ಟಗಳನ್ನೆದುರಿಸುತ್ತಿದೆ. ಎನ್.ವೈ. ಗೋಪಾಲಕೃಷ್ಣರ ವೈಫಲ್ಯದ ಪರಿಣಾಮ ಜೆಡಿಎಸ್‌ನ ಎತ್ನಟ್ಟಿಗೌಡ ಅವರಿಗೆ ಸಹಾಯಕವಾಗಲಿದೆ.

ಜಿ.ಪಂ.ಸದಸ್ಯರಾಗಿದ್ದ ಎತ್ನಟ್ಟಿಗೌಡ ನೇರವಂತಿಕೆಯ ವ್ಯಕ್ತಿ, ಸಾರ್ವಜನಿಕ ಜೀವನದಲ್ಲಿ ಈಗಲೂ ಒಳ್ಳೆಯ ವ್ಯಕ್ತಿತ್ವ ಕಾಪಾಡಿಕೊಂಡಿದ್ದಾರೆ. ಸತತವಾಗಿ ಮೂರು ಬಾರಿ ಸೋತಿದ್ದರೂ ಈತನ ರಾಜಕೀಯ ಉತ್ಸಾಹ ಬತ್ತಿಲ್ಲ, ಈ ರಾಜಕೀಯ ಛಲವೇ ಜನರ ಅನುಕಂಪಕ್ಕೆ ಕಾರಣವಾಗಿದೆ. ಬಿಜೆಪಿಯಿಂದ ಸ್ಪರ್ಧಿಗಿಳಿದಿರುವ ತಿಪ್ಪೇಸ್ವಾಮಿ ಗಣನೀಯ ಮತಗಳನ್ನು ಪಡೆಯಲಿದ್ದಾರೆ.

ಹಿರಿಯೂರು : ಯಾರ ಜಪ್ತಿಗೂ ಸಿಗಲಾರದ ಮತದಾರರ ಒಲವು

ಮೀಸಲು ಕ್ಷೇತ್ರವಾಗಿದ್ದ ಹಿರಿಯೂರು ಈಗ ಸಾಮಾನ್ಯ ಕ್ಷೇತ್ರವಾಗಿರುವುದರಿಂದ ತೀವ್ರ ಸ್ವರೂಪದ ರಾಜಕೀಯ ಹಣಾಹಣಿಯ ಕೇಂದ್ರವಾಗಿದೆ. ಇಲ್ಲಿ ಒಕ್ಕಲಿಗರು ಮತ್ತು ಗೊಲ್ಲರ ಸಮುದಾಯದ ರಾಜಕೀಯ ಬಲಾಬಲದ ಪ್ರದರ್ಶನವೇ ನಿರ್ಣಾಯಕ. ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಗೀತಾ ನಂದಿನಿಗೌಡ, ಜೆಡಿಎಸ್‌ನಿಂದ ಸ್ಪರ್ಧಿಸಿರುವ ಡಿ.ಯಶೋಧರ, ಕಾಂಗ್ರೆಸ್‌ನಿಂದ ಬಂಡಾಯ ಅಭ್ಯರ್ಥಿಗಳಾಗಿ ಡಿ. ಸುಧಾಕರ್, ಆರ್ ಮಂಜುನಾಥ್, ಜಿ.ಎಸ್, ಮಂಜುನಾಥ್, ಬಿಎಸ್ಪಿಯಿಂದ ಕಣಕ್ಕಿಳಿದಿರುವ ವದ್ದಿಕೆರೆ ಕಾಂತರಾಜ್... ಎಲ್ಲರೂ ಘಟಾನುಘಟಿಗಳೇ. ಇಲ್ಲಿ ನಿರ್ಣಾಯಕವಾಗಿ ಒಕ್ಕಲಿಗೆ ಜನಾಂಗ ಹಾಗೂ ಯಾದವ ಜನಾಂಗದ ಮತಗಳು ಹರಿದು ಹಂಚಿಹೋಗುವ ಸನ್ನಿವೇಶ ನಿರ್ಮಾಣವಾಗಿದೆ.

ಒಕ್ಕಲಿಗರ ಮತಗಳು ಡಿ.ಯಶೋಧರ ಮತ್ತು ಕಾಂಗ್ರೆಸ್‌ನ ಬಂಡಾಯ ಅಭ್ಯರ್ಥಿ ಆರ್. ಮಂಜುನಾಥರಿಗೆ ಹಂಚಿಕೆಯಾದರೆ, ಯಾದವ ಜನಾಂಗದ ಮತಗಳು ಬಿಜೆಪಿಯ ಲಕ್ಷ್ಮೀಕಾಂತ್, ಕಾಂಗ್ರೆಸ್‌ನ ಗೀತಾನಂದಿನಿಗೌಡ, ಮಾಜಿ ಶಾಕ ಎ.ವಿ. ಉಮಾಪತಿಯವರ ನಡುವೆ ಹಂಚಿಕೆಯಾಗಲಿವೆ.


ಈ ಹಂಚಿಕೆಯ ಸೂತ್ರವನ್ನು ಮಾನದಂಡವಾಗಿಟ್ಟುಕೊಂಡೇ ಚಳ್ಳಕೆರೆಯ ಮಾಜಿ ಶಾಸಕ ಡಿ. ಸುಧಾಕರ್, ಪೌರಸೇವಾ ನೌಕರರ ಸಂಘದ ಅಧ್ಯಕ್ಷ ಜಿ.ಎಸ್. ಮಂಜುನಾಥ್ ಕಣಕ್ಕಿಳಿದಿದ್ದಾರೆ. ಇಲ್ಲಿ ನಿಜವಾದ ಸ್ಪರ್ಧೆ ಇರುವುದು ಬಿಜೆಪಿಯ ಲಕ್ಷ್ಮೀಕಾಂತ್, ಜೆಡಿಎಸ್‌ನ ಯಶೋಧರ ಹಾಗೂ ಸ್ವತಂತ್ರ ಅಭ್ಯರ್ಥಿಗಳಾದ ಡಿ. ಸುಧಾಕರ್ ಮತ್ತು ಜಿ.ಎಸ್. ಮಂಜುನಾಥ್ ನಡುವೆ ಮಾತ್ರ. ಬಿಜೆಪಿಯ ಲಕ್ಷ್ಮೀಕಾಂತ್, ಜೆಡಿಎಸ್‌ನ ಯಶೋಧರ ಪಕ್ಷದ ಇಮೇಜು ಹಾಗೂ ತಮ್ಮ ತಮ್ಮ ಜನಾಂಗದ ಬೆಂಬಲವನ್ನೆ ನೆಚ್ಚಿಕೊಂಡಿದ್ದಾರೆ

ಡಿ.ಸುಧಾಕರ್ ತಮ್ಮ ವೈಯಕ್ತಿಕ ಇಮೇಜು ಹಾಗೂ ಚಳ್ಳಕೆರೆಯಲ್ಲಿ ತಾವು ಶಾಸಕರಾಗಿ ಮಾಡಿದ ಅಭಿವೃದ್ಧಿ ಕೆಲಸಗಳನ್ನು ನಂಬಿಕೊಂಡಿದ್ದಾರೆ. ಪೌರಸೇವಾ ನೌಕರರ ಸಂಘದ ಅಧ್ಯಕ್ಷ ಜಿ.ಎಸ್. ಮಂಜುನಾಥ್ ಕ್ಷೇತ್ರದಲ್ಲಿ ನಿರ್ಣಾಯಕವಾಗಿರುವ ಮಾದಿಗ ಸಮುದಾಯದ ಮತಗಳನ್ನೇ ಆಧರಿಸಿದ್ದಾರೆ. ಹಿರಿಯೂರಿನಲ್ಲಿ ಲಾಗಾಯ್ತಿನಿಂದ ಮುಂದುವರಿದುಕೊಂಡು ಬರುತ್ತಿರುವ ಒಕ್ಕಲಿಗರು ಹಾಗೂ ಯಾದವ ಜನಾಂಗದ ರಾಜಕೀಯ ಪ್ರಾಬಲ್ಯ ಉಳಿದ ಜನಾಂಗಗಳಿಗೆ ಉಸಿರುಕಟ್ಟಿಸುವ ವಾತಾವರಣ ನಿರ್ಮಿಸಿದೆ. ಈ ಪ್ರಾಬಲ್ಯಕ್ಕೆ ಕಡಿವಾಣ ಬೀಳಬೇಕು. ಹಿರಿಯೂರು ಕ್ಷೇತ್ರದಲ್ಲಿ ನೆಮ್ಮದಿಯ ರಾಜಕೀಯ ವಾತಾವರಣ ನೆಲೆಸಬೇಕೆಂದಾದರೆ ಉಳಿದಿರುವ ಆಯ್ಕೆ ಸ್ವತಂತ್ರ ಅಭ್ಯರ್ಥಿಗಳಾಗಿ ಕಣಕ್ಕಿಳಿದಿರುವ ಡಿ.ಸುಧಾಕರ್ ಅಥವಾ ಪೌರ ಸೇವಾ ನೌಕರರ ಸಂಘದ ಅಧ್ಯಕ್ಷ ಜಿ.ಎಸ್. ಮಂಜುನಾಥ್ ಮಾತ್ರ.

ಹೊಸದುರ್ಗ: ತ್ರಿಕೋಣ ಸ್ಪರ್ಧೆ



ಹೊಸದುರ್ಗ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಬಿ.ಜಿ.ಗೋವಿಂದಪ್ಪ, ಬಿಜೆಪಿಯ ಲಿಂಗಮೂರ್ತಿ, ಪಕ್ಷೇತರ ಅಭ್ಯರ್ಥಿ ಗೂಳಿಹಟ್ಟಿ ಡಿ. ಶೇಖರ್ ನಡುವೆ ತ್ರಿಕೋಣ ಸ್ಪರ್ಧೆಯಿದೆ. ಕಳೆದ ಎರಡು ಮೂರು ವರ್ಷಗಳಿಂದ ಹೊಸದುರ್ಗದಲ್ಲಿ ಗಣಿದಂಧೆಯಿಂದ ಗಳಿಸಿದ ಹಣವನ್ನು ನೀರಿನಂತೆ ಚೆಲ್ಲಿ ರಾಜಕೀಯ ನಾಯಕನಾಗಿ ಪ್ರವರ್ಧಮಾನಕ್ಕೆ ಬಂದಿರುವ ಗೂಳಿಹಟ್ಟಿ ಶೇಖರ್ ಬಗ್ಗೆ ವಿಶೇಷವಾಗಿ ಹೇಳುವುದೇನೂ ಇಲ್ಲ. ಆತ ತಾನು ಹಂಚಿರುವ ಹಣವನ್ನೇ ನಂಬಿಕೊಂಡಿದ್ದಾನೆ. ಬಿಜೆಪಿಯ ಲಿಂಗಮೂರ್ತಿ ಲಿಂಗಾಯತರ ಮತಗಳು ಧ್ರುವೀಕರಣಗೊಂಡಲ್ಲಿ ತನ್ನ ಗೆಲುವು ಖಚಿತ ಎಂಬ ಭರವಸೆಯಲ್ಲಿದ್ದಾರೆ. ಅಂತಹ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಇನ್ನು ಮೂರು ಬಾರಿ ಶಾಸಕರಾಗಿರುವ ಗೋವಿಂದರಾಜಪ್ಪನವರ ಕುರಿತು ಏನೇ ಟೀಕೆ-ಟಿಪ್ಪಣಿಗಳಿರಲಿ, ಇಡೀ ಜಿಲ್ಲೆಯಲ್ಲಿ ಸರ್ಕಾರಿ ಯೋಜನೆಗಳು ಒಂದಿಷ್ಟು ಜನರಿಗೆ ತಲುಪಿದೆಯೆಂದಾದರೆ ಅದು ಹೊಸದುರ್ಗದಲ್ಲಿ ಮಾತ್ರ. ಅದರಲ್ಲೂ ಜಲಸಂಬಂಧಿ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ತುಂಬಾ ಕಾಳಜಿ ವಹಿಸಿದ್ದಾರೆ. ಬಿ.ಜಿ. ಗೋವಿಂದಪ್ಪ ಮತ್ತೊಮ್ಮೆ ಆಯ್ಕೆ ಯಾಗುವುದರಿಂದ ಹೊಸದುರ್ಗದ ಮತದಾರರಿಗೆ ನಷ್ಟವೇನೂ ಇಲ್ಲ.



ಹೊಳಲ್ಕೆರೆ: ತ್ರಿಕೋಣ ಸ್ಪರ್ಧೆ


ದೇವೇಂದ್ರನಾಯ್ಕ

ಈಗ ಮೀಸಲು ಕ್ಷೇತ್ರ ವಾಗಿರುವ ಹೊಳಲ್ಕೆರೆಯಲ್ಲೂ ಜೆಡಿಎಸ್- ಕಾಂಗ್ರೆಸ್-ಬಿಜೆಪಿ ನಡುವೆ ತ್ರಿಕೋಣ ಸ್ಪರ್ಧೆಯಿದೆ. ಇಲ್ಲಿ ನಿರ್ಣಾಯಕವಾಗಿರುವ ಸಾಧುಲಿಂಗಾಯತರ ಮತಗಳು ಜೆಡಿಎಸ್‌ನ ದೇವೇಂದ್ರ ನಾಯ್ಕ್ ಹಾಗೂ ಬಿಜೆಪಿಯ ಎಂ. ಚಂದ್ರಪ್ಪ ನವರಿಗೆ ಹಂಚಿಕೆಯಾಗಲಿವೆ. ಕಾಂಗ್ರೆಸ್‌ನ ಎಚ್. ಆಂಜನೇಯ ತಮ್ಮ ಮಾದಿಗ ಸಮುದಾಯದ ಮತಗಳ ಜೊತೆಗೆ ಕಾಂಗ್ರೆಸ್‌ನ ಪಾರಂಪರಿಕ ಮತಗಳನ್ನು ನೆಚ್ಚಿಕೊಂಡಿದ್ದಾರೆ. ಜೆಡಿಎಸ್ ದೇವೇಂದ್ರ ನಾಯ್ಕ್ ಸ್ಥಳೀಯ ಎಂಬ ಕಾರಣಕ್ಕೆ ವಿಶೇಷ ಅನುಕೂಲಕರ ವಾತಾವರಣವಿದೆ. ಬಿಜೆಪಿಯ ಚಂದ್ರಪ್ಪನಿಗೆ ಅವರದ್ದೇ ಸಮುದಾಯದ ಕರಿಯಣ್ಣ ತೊಡರುಗಾಲು ಹಾಕಿದ್ದಾರೆ. ಹೇಗೇ ನೋಡಿದರೆ ದೇವೇಂದ್ರನಾಯ್ಕ್, ಕಾಂಗ್ರೆಸ್ ಆಂಜನೇಯ ರವರಿಗೆ ಪೂರಕ ವಾತಾವರಣವಿದೆ.


ಆಂಜನೇಯ

ಸೋದರ ದೀಪಕ್ ಸಿಂಗ್ ಚಾಲೆಂಜ್

ಹೊಸಪೇಟೆ: ಆನಂದ್ ಸಿಂಗ್ ಹರೋಹರಾ


ದೀಪಕ್ ಸಿಂಗ್

ಕ್ಷೇತ್ರ ಪುನರ್ ವಿಂಗಡಣೆಯಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಹೊಸಪೇಟೆ (ವಿಜಯನಗರ) ಕ್ಷೇತ್ರದಲ್ಲಿ ಬಿಜೆಪಿಯ ಆನಂದ್ ಸಿಂಗ್ ಮಣ್ಣುಮುಕ್ಕುವ ಸಾಧ್ಯತೆ ಕಾಣುತ್ತಿದೆ. ಇಲ್ಲಿ ಕಾಂಗ್ರೆಸ್‌ನ ಎಚ್.ಆರ್. ಗವಿಯಪ್ಪ ಗೆಲ್ಲುವ ಕುದುರೆಯಾದರೂ ಬಿಜೆಪಿಯ ಆನಂದ್ ಸಿಂಗ್‌ನನ್ನು ಕೆಡುವುವ ಶಕ್ತಿ ಇರುವುದು ಬಂಡಾಯ ಕಾಂಗ್ರೆಸ್ ಅಭ್ಯರ್ಥಿ ದೀಪಕ್ ಕುಮಾರ್ ಸಿಂಗ್‌ಗೆ.

ಮಾಜಿ ಶಾಸಕ ಸತ್ಯನಾರಾಯಣ ಸಿಂಗ್‌ರ ಮಗ ದೀಪಕ್ ಸಿಂಗ್ ಕ್ಷೇತ್ರಾದ್ಯಂತ ಬಿರುಸಿನ ಪ್ರಚಾರ ನಡೆಸುತ್ತಿರುವುದು ಬಿಜೆಪಿಗಳಿಗೆ ನುಂಗಲಾರದ ತುತ್ತಾಗಿ ಹೋಗಿದೆ.


ಸತ್ಯನಾರಾಯಣ ಸಿಂಗ್

ಇಡೀ ಬಳ್ಳಾರಿ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಮುರಿದು ಬಿದ್ದು ಅರಾಜಕತೆ ತುಂಬಿರುವ ಹೊಸಪೇಟೆಯಲ್ಲಿ ನಿತ್ಯ ಜಗಳ, ಹಲ್ಲೆ, ಅತ್ಯಾಚಾರ, ಜೂಜು, ದಕಾಯಿತಿಗಳು ನಡೆಯುತ್ತಿರುತ್ತದೆ. ಅಸಲಿಗೆ ಈ ಆನಂದ್ ಸಿಂಗ್ ಮುಖ ನೋಡಿದರೆ ಜನರಿಗೆ ಅಗುವುದೇ ಇಲ್ಲಿ, ಇಷ್ಟಕ್ಕೂ ಈ ಆನಂದ್ ಸಿಂಗ್‌ನಿಗೆ ಎಲೆಕ್ಷನ್‌ಗೆ ನಿಲ್ಲುವ ಧೈರ್ಯವೂ ಇರಲಿಲ್ಲ, ಆದರೆ ಜನಾರ್ದನ್ ರೆಡ್ಡಿ ಗ್ಯಾಂಗ್ ಇವನಿಗೆ ಬೆದರಿಸಿ ಎಲೆಕ್ಷನ್‌ಗೆ ನಿಲ್ಲಿಸಿದ್ದಾರೆ. ಕಾಂಗ್ರೆಸ್‌ನ ಗವಿಯಪ್ಪರನ್ನು ಹೇಗಾದರು ಮಾಡಿ ಸೋಲಿಸಿಬಿಡಬೇಕೆಂದು ಹಂಚಿಕೆ ಹಾಕಿದ್ದ ರೆಡ್ಡಿಗಳಿಗೆ ಈಗ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ದೀಪಕ್‌ಕುಮಾರ್ ಸಿಂಗ್‌ರ ಪ್ರತಿರೋಧ ಭಾರಿ ಹೊಡೆತ ಕೊಡುತ್ತಿದೆ: ಜೆಡಿಎಸ್‌ನ ಕೆ. ಕೊಟ್ರೇಶ್, ಬಿಎಸ್‌ಪಿಯ ಕೆ. ನಾರಾಯಣಸ್ವಾಮಿಯವರು ಗವಿಯಪ್ಪ, ದೀಪಕ್‌ಕುಮಾರ್ ಸಿಂಗ್ ಹಾಗೂ ಆನಂದ್‌ಸಿಂಗ್‌ರ ಜಂಗಿಕುಸ್ತಿಯಲ್ಲಿ ಮೂಲೆಗುಂಪಾಗಿ ಹೋಗಿದ್ದಾರೆ.



ಆನಂದ್ ಸಿಂಗ್

ಕಾಂಗ್ರೆಸ್‌ನ ಗವಿಯಪ್ಪ ಕಳೆದ ಬಾರಿ ಗೆದ್ದು ಹೋದ ನಂತರ ಲಿಕ್ಕರ್ ಲಾಬಿ ಹಾಗೂ ಗಣಿ ಹಣದಲ್ಲಿ ಮೈಮರೆತು ಕ್ಷೇತ್ರದ ಜನರನ್ನು ಮರೆತಿದ್ದರು. ಅದು ಈಗ ಸ್ವಲ್ಪ ಏಟು ಕೊಡಲಿದೆ.

ಇನ್ನು ಪುಕ್ಕಟೆ ಪ್ರಚಾರದ ಗಿರಾಕಿ, ಶಿಕ್ಕಲುತನಗಳ ಆನಂದ್ ಸಿಂಗ್ ಯಾರಿಗಾದರೂ 10 ರೂಪಾಯಿ ದಾನ ಕೊಟ್ಟರೆ ಲಕ್ಷ ರೂಪಾಯಿ ತೆಗೆದುಕೊಟ್ಟನೆಂಬಂತೆ ಪುಗಸಟ್ಟೆ ಪ್ರಚಾರ ಪಡೆಯುವ ಗಿರಾಕಿ. ಇವನನ್ನು ಹೊಸಪೇಟೆ ಜನ 'ಪುಕ್ಕಟಾನಂದ್ ಸಿಂಗ್' ಅಂತಲೇ ಗೇಲಿ ಮಾಡುತ್ತಾ ನಗುತ್ತಿರುತ್ತಾರೆ. ಹೊಸಪೇಟೆಯ ಕ್ಯಾನ್ಸರ್ ಪೀಡಿತ ಯುವತಿಯೊಬ್ಬಳಿಗೆ ಸಣ್ಣ ಮೊತ್ತದ ಚೆಕ್ ಕೊಟ್ಟು ಅವರ ಫೋಟೋ ತೆಗೆಸಿ ಊರ ತುಂಬೆಲ್ಲಾ ಪೋಸ್ಟರ್ ಹಾಕಿಸಿಕೊಂಡಿದ್ದ ಕ್ರೂರಿ ಈ ಆನಂದ್ ಸಿಂಗ್.

ಹೊಸಪೇಟೆಯಲ್ಲಿ ಎಪಿಎಂಸಿ ಪುರಸಭೆ, ಕಮಲಾಪುರ ಪಟ್ಟಣ ಪಂಚಾಯಿತಿಯಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿದಿದೆ. ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿಗಳಲ್ಲೂ ಕಾಂಗ್ರೆಸ್‌ನದ್ದೇ ಮೇಲುಗೈ. ಹೀಗಾಗಿ ಬಿಜೆಪಿಯ ಆನಂದ್ ಸಿಂಗ್ ಈಗ ಗಾಬರಿಯಾಗಿದ್ದಾನೆ. ವರಸೆಯಲ್ಲಿ ತನ್ನ ಸೋದರನೇ ಆಗಿರುವ ಬಂಡಾಯ ಅಭ್ಯರ್ಥಿ ದೀಪಕ್‌ಕುಮಾರ್ ಸಿಂಗ್‌ರ ಬೆಂಬಲ ಸಿಕ್ಕಿದ್ದಿದ್ದರೆ ಬಿಜೆಪಿಯ ಆನಂದ್ ಸಿಂಗ್‌ಗೆ ಸ್ವಲ್ಪ ನಿರಾಳ ಆಗುತ್ತಿತ್ತೇನೋ. ಆದರೆ ಅದೀಗ ಮುಗಿದ ಮಾತು.

ಹೊಸಪೇಟೆಯಲ್ಲಿ ಕಾಂಗ್ರೆಸ್ ಹಾಗೂ ಬಂಡಾಯ ಕಾಂಗ್ರೆಸ್ ಈ ಬಾರಿ ಬಿಜೆಪಿಯನ್ನು ಕೆಡವಲಿದೆ. ■



ದಳ-ಅಂಬಿ ಸ್ಕೆಚ್

ರೆಡ್ಡಿ ಧೂಳ್

ಈ ಕಾಂಗ್ರೆಸ್‌ನೋರು ಶತಸೋಮಾರಿಗಳು, ರಾಜಕೀಯ ತಂತ್ರಗಾರಿಕೆ ಮರೆತ ಜನ ಎಂದು ಗೇಲಿ ಮಾಡುತ್ತಿದ್ದವರೆಲ್ಲಾ ಈಗ ಶಾ[...] ಹೊಡೆಸಿಕೊಂಡವರಂತೆ ನೋಡುತ್ತಿದ್ದಾರೆ.

ಬಳ್ಳಾರಿ ಗೂಂಡಾ ಗಣಿಖೋರರ ಕೋಟೆಗೇ ಈಗ ಬಾಂಬ್ ಬಿದ್ದಿದೆ. ದಿವಾಕರ ಬಾಬು ಎಂಬ ಸೂಸೈಡ್ ಬಾಂಬರ್ ಈಗ ಕಾಂಗ್ರೆಸ್[...] ಅನಿಲ್ ಲಾಡ್ ಪರ ನಿಂತು ರೆಡ್ಡಿಗಳ ಪಾಳೆಯದೊಳಕ್ಕೆ ನೇರ ದಾಳಿ ನಡೆಸಲು ರೆಡಿಯಾಗಿದ್ದಾರೆ. ಈ ಅಪರೂಪದ ಸೆನ್ಸೇಷನಲ್ ಸ್ಕೆ[...] ಹಾಕಿರುವುದು ಕಾಂಗ್ರೆ ಸಂಸದ ಅಂಬರೀಷ್. ಜೊತೆಗೆ ಜೆಡಿಎಸ್‌ನ ನಾಯಕ ಕುಮಾರಸ್ವಾಮಿಯ ಒಪ್ಪಿಗೆಯೂ ಇದಕ್ಕೆ ಇದ್ದಿರಲೂಬಹುದ[...]

ಏಕೆಂದರೆ ಕಾಂಗ್ರೆಸ್-ದಳ ಇವರಿಬ್ಬರಿಗೂ ಬಳ್ಳಾರಿಯ ರೆಡ್ಡಿಗಳ ಅಟ್ಟಹಾಸವನ್ನು ಮೆಟ್ಟಿ ನಿಲ್ಲಲೇಬೇಕಿದೆ. ಶಿಕಾರಿಪುರದಲ್ಲಿ ಯಡ್ಡಿಯ[...] ಕೆಡವಲು ಬಂಗಾರಪ್ಪನವರನ್ನು ಅಖಾಡಕ್ಕಿಳಿಸಿದ ಕಾಂಗ್ರೆಸ್ ಈಗ ಬಳ್ಳಾರಿ ರೆಡ್ಡಿಗಳ ಸೊಂಟ ಮುರಿಯಲು ಮುನ್ನುಗ್ಗಿದೆ. ಬಹ[...] ಕಾಲದಿಂದಲೂ ಕಾಂಗ್ರೆಸ್‌ನಲ್ಲೇ ಇದ್ದು ತೀರಾ ಇತ್ತೀಚೆಗೆ ಜೆಡಿಎಸ್ ಸೇರಿ ಬಳ್ಳಾರಿಯಿಂದ ಸ್ಪರ್ಧಿಸಿದ್ದ ದಿವಾಕರ್ ಬಾಬು ಮಹಾನ್ ಬಲಿ[...] ಲೀಡರ್. ಇಡೀ ಕ್ಷೇತ್ರದ ಜನರನ್ನು ಬಲ್ಲವರು.

ಕಾಂಗ್ರೆಸ್ ಸೇರಿ ಬಳ್ಳಾರಿಯಿಂದ ನಿಂತಿದ್ದ ಅನಿಲ್ ಲಾಡ್‌ಗೆ ಜೇಬು ತುಂಬಾ ಹಣವಿತ್ತೇ ವಿನಃ ಕಾರ್ಯಕರ್ತರ ಬಲಶಾಲಿ ನೆಟ್‌ವರ್[...]

ಬಳ್ಳಾರಿ: ರೆಡ್ಡಿ ಕೋಟೆಗೆ ಕಾಂಗ್ರೆಸ್ ದಾಳಿ

ಒಂಭತ್ತು ವಿಧಾನಸಭಾ ಕ್ಷೇತ್ರಗಳಿರುವ ಬಳ್ಳಾರಿ ಜಿಲ್ಲೆ ಇಡೀ ರಾಜ್ಯದ ಗಮನ ಸೆಳೆದಿರುವುದು ಗ[...] ದಂಧೆಯ ಗೂಂಡಾ ರೆಡ್ಡಿಗಳ ಕಾರಣದಿಂದ. ಬಳ್ಳಾರಿಯ ಒಂಭತ್ತು ಮತ್ತು ಹರಪನಹಳ್ಳಿ (ದಾವಣ[...] ಜಿಲ್ಲೆ) ಸೇರಿದಂತೆ ಹತ್ತಕ್ಕೆ ಹತ್ತೂ ಸೀಟು ನಾವೇ ಗೆಲ್ಲುತ್ತೇವೆಂದು ಜನಾರ್ದನ್ ರೆಡ್ಡಿ ಗ್ಯಾಂಗ್ ಸವಾ[...] ಹಾಕಿದೆ. ಆದರೆ ಈ ಅವಿವೇಕಿಗಳ ಆಸೆ ಈ ಬಾರಿ ಈಡೇರುವುದಿಲ್ಲ. ಕಾಂಗ್ರೆಸ್ ಇಲ್ಲಿ ಮತ್ತೆ ಬಲಿಷ್ಠಗೊಂಡಿ[...]

ಬಳ್ಳಾರಿ ಮೀಸಲು: ರಾಮುಲು ಆರ್ಭಟ


ರಾಂಪ್ರಸಾದ್


ಶ್ರೀರಾಮುಲು

ರೆಡ್ಡಿಗಳ ವಾಚ್‌ಮ್ಯಾನ್ ಶ್ರೀರಾಮುಲು ಇಲ್ಲಿ ಬಿಜೆಪಿ ಅಭ್ಯರ್ಥಿ. ದಳದಿಂದ ಕೆ. ಚನ್ನಪ್ಪ ಅಖಾಡದಲ್ಲಿದ್ದರೂ ಸಹ ಪೈಪೋಟಿ ನಡೆದಿರುವುದು ರಾಮುಲು ಹಾಗೂ ಕಾಂಗ್ರೆಸ್‌ನ ರಾಂಪ್ರಸಾದ್ ನಡುವೆ. ಈ ರಾಮುಲು ರೆಡ್ಡಿಗಳು ಕೊಡುವ ಎಂಜಲು ಕಾಸನ್ನು ತಂದು ಖರ್ಚು ಮಾಡುತ್ತಿದ್ದಾನೆ. ಮತ್ತೊಂದೆಡೆ ರಾಂಪ್ರಸಾದ್ ಹಣದಲ್ಲಿ ಕಡಿಮೆಯಿದ್ದರೂ ಲಿಂಗಾಯತರು ಹಾಗೂ ಕುರುಬರ ಸಾಲಿಡ್ ಬೆಂಬಲ ಕಾಂಗ್ರೆಸ್‌ಗಿದೆ. ಜೊತೆಗೆ ರಾಮುಲು ಹಾಗೂ ರೆಡ್ಡಿಗಳು ಲಿಂಗಾಯತರನ್ನು ತುಳಿದು ಸರ್ವನಾಶ ಮಾಡಲು ಹೊರಟಿರುವುದೂ ಕೂಡ ಲಿಂಗಾಯತ ಮತದಾರರ ಸಿಟ್ಟಿಗೆ ಕಾರಣವಾಗಿದೆ. ಇಲ್ಲಿ ಹೊರನೋಟಕ್ಕೆ ರಾಮುಲು ಆರ್ಭಟ ಎದ್ದು ಕಾಣುತ್ತಿದೆ. ಆದರೆ ದಿವಾಕರ್ ಬಾ[...] ಬೆಂಬಲ ಕಾಂಗ್ರೆಸ್‌ಗೆ ಸಿಗುತ್ತಿರುವುದರಿಂದ ರಾಮುಲು ಗೋತಾ ಹೊಡೆದರೂ ಆಶ್ಚರ್ಯವಿಲ್ಲ.

ಹಡಗಲಿ (ಮೀಸಲು) : ಪರಮೇಶ್ವರ ನಾಯಕ್ ಮುಂದೆ





ಕಾಂಗ್ರೆಸ್‌ನ ಪಿ.ಬಿ. ಪರಮೇಶ್ವರ ನಾಯಕ್ ಗೆಲ್ಲುತ್ತಾರೆಂಬ ಭಾವನೆ ಈಗಾಗಲೇ ಕ್ಷೇತ್ರದಲ್ಲಿದೆ. ಎಂ.ಪಿ. ಪ್ರಕಾಶ್‌ರ ಹಿಂದಿನ ಕ್ಷೇತ್ರವಾಗಿದ್ದ ಹಡಗಲಿಯಲ್ಲಿ ಅವರಿಗೆ ಹಿತ್ತೋಟ ಇದೆ.

ಬಿಜೆಪಿಯ ಚಂದ್ರನಾಯ್ಕನಿಗೂ ಸಾಕಷ್ಟು ಕಾರ್ಯಕರ್ತರ ಬಲವಿದೆ. ಜೆಡಿಎಸ್‌ನ ಎಂ.ಪಿ. ನಾಯಕ್ ಸೇರಿದಂತೆ ಎಲ್ಲಾ ಅಭ್ಯರ್ಥಿಗಳೂ ನಾಯಕ ಜನಾಂಗದವರೇ ಆಗಿದ್ದು ಅವರ ಓಟುಗಳು ಡಿವೈಡ್ ಆಗುವುದು ಖಚಿತ. ಆದರೆ ಕಾಂಗ್ರೆಸ್ ಅಭ್ಯರ್ಥಿಗೆ ಪಕ್ಷದ ಬೆಂಬಲ, ಎಂ.ಪಿ. ಪ್ರಕಾಶರ ನೆರವು ಎಲ್ಲಾ ಇರುವುದರಿಂದ ಪರಮೇಶ್ವರ ನಾಯಕ್ ಮುಂದಿದ್ದಾರೆ.

ಜನಾರ್ದನ್ ರೆಡ್ಡಿ-ಶ್ರೀರಾಮುಲು ಗ್ಯಾಂಗ್ ಇಡೀ ಬಳ್ಳಾರಿಯನ್ನೇ ನ ತೆಗೆದುಕೊಂಡವರಂತೆ ಮೆರೆಯುತ್ತಿದ್ದರು. ಬಳ್ಳಾರಿಯ 9 ಕ್ಷೇತ್ರ ಹರಪನಹಳ್ಳಿಯ ಒಂದು... ಹೀಗೆ ಹತ್ತಕ್ಕೆ ಹತ್ತೂ ಕ್ಷೇತ್ರಗಳನ್ನು ಗೆದ್ದೇ ನೆಂದು ಛಾಲೆಂಜ್ ಮಾಡಿತ್ತು ಈ ರೆಡ್ಡಿ ಗ್ಯಾಂಗ್. ಆದರ ಭಾಗ ಇಡೀ ಬಳ್ಳಾರಿ ಜಿಲ್ಲೆಯಲ್ಲಿ ತಮ್ಮ ಚೇಲಾಗಳಿಗೇ ಬಿಜೆಪಿ ಟಿಕೆಟ್ ಕೊಡಿಸಿದ್ದರು. ಇಲ್ಲಿ ಸಿರಗುಪ್ಪದ ಒಬ್ಬ ಸೋಮಲಿಂಗಪ್ಪನ್ನ ಬಿಟ್ಟರೆ ರೆಲ್ಲಾ ರೆಡ್ಡಿ ಚೇಲಾಗಳೇ. ಇದೀಗ ದಳದ ದಿವಾಕರ ಬಾಬು ಹಿಂದೆ ಕಾಂಗ್ರೆಸ್ ಬೆಂಬಲಕ್ಕೆ ನಿಂತರೆ ಅಲ್ಲಿಗೆ ಬಳ್ಳಾರಿ ಡ್ಡಿಗಳಿಂದ ಬಿಡುಗಡೆ ಸಿಕ್ಕಂತೆಯೇ ಸರಿ. ಜನಾ ಡ್ಡಿ, ಕರುಣಾಕರ ರೆಡ್ಡಿ, ಸೋಮಶೇಖರ ರೆಡ್ಡಿ ಇವರ ವಾಚ್‌ಮ್ಯಾನ್ ಶ್ರೀರಾಮುಲು ಕಳೆ ದಶಕದಿಂದ ಇಡೀ ಬಳ್ಳಾರಿಯನ್ನು ತಮ್ಮ ಬಲ, ದರ್ಪಗಳಿಂದ ಆಳುತ್ತಾ ಬಂದಿದ್ದಾರೆ. ಸರ್ಕಾರಗಳ ರಚನೆ ಹಾಗೂ ಬೀಳಿಸುವಿಕೆ ಈ ರೆಡ್ಡಿಗಳು ತಲೆ ಹಾಕುತ್ತಲೇ ಬಂದಿದ್ದಾರೆ. ಮುತ್ಸದ್ದಿ ಗಂಧ ಗಾಳಿಯೇ ಗೊತ್ತಿರದ ಈ ಗೂಂಡಾ ಅಸಲಿಗೆ ಕರ್ನಾಟಕದವರೇ ಅಲ್ಲ.



ದಿವಾಕರ್ ಏಕೆ ಬದಲಾದರು

ಬಳ್ಳಾರಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಅನಿಲ್ ಲಾಡ್ ಬಿಜೆಪಿಯ ಸೋಮಶೇಖರ ರೆಡ್ಡಿ ನಡುವೆ ನಿಂತು : ಗುಂಪಾಗಿ ದಳದಿಂದ ಸೆಣಸಾಡುತ್ತಿದ್ದ ದಿವಾ ಬುಗೆ ಗೆಲ್ಲುವ ಅವಕಾಶ ಕಡಿಮೆ ಇತ್ತು, ಬಹಳ ಆಗಿ ಲಾಡ್-ದಿವಾಕರ್ ನಡುವೆ ಬಿಜೆಪಿ ವಿರೋಧಿ ಹಂಚಿಹೋಗಿ ರೆಡ್ಡಿ ಗೆಲ್ಲುವ ಸಂಭವವಿತ್ತು, ರೆ ಈಗ ಇಡೀ ದೃಶ್ಯವೇ ಬದಲಾಗಿ ಹೋಗು ಬಳ್ಳಾರಿಯಲ್ಲಿ 50 ಸಾವಿರದಷ್ಟು ಲಿಂಗಾಯತರು, ರ ಕುರುಬರು, 38 ಸಾವಿರ ಮುಸ್ಲಿಮರಿದ್ದಾರೆ. ದಿವಾಕರ ಬಾಬು ಸ್ವಜಾತಿಯ ಹತ್ತು ಹದಿನೈದು ಸಾವಿರ ಕಮ್ಮ ವೆ. ಇನ್ನು ವಾಲ್ಮೀಕಿ ನಾಯಕರ ಓಟುಗಳ ಮೇಲೆ ಶ್ರೀರಾಮುಲು ಕಂಟ್ರೋಲ್ ಇದೆಯೋ ಅಷ್ಟೇ ಹತೋಟಿ ಕಾಂಗ್ರೆಸ್‌ನ ನಾಯಕ ಲಾಡ್‌ಗೂ ಇದೆ. ಬಳ್ಳಾರಿ ಗ್ರಾಮೀಣ ಕ್ಷೇತ್ರದಿಂದ ರಾಮುಲು ಎದಿರು ಸುವ ರಾಂಪ್ರಸಾದ್‌ಗೆ ಲಾಡ್-ದಿವಾಕರ್ ಬಾಬು ಜೊತೆಯಾದ ಸ್ಟಾನ್ನಷ್ಟು ಶಕ್ತಿ ಸಿಗಲಿದೆ.

ಕಾಂಗ್ರೆಸ್ ನಾಯಕರು ಇದನ್ನೆಲ್ಲಾ ಯೋಚಿಸಿಯೇ ಅಂಬಿ ಮೂಲಕ ದಿವಾಕರ್ ಬಾಬು ಮನ ಒಲಿಸಿದಂತೆ ಕಾಣುತ್ತಿದೆ. ಇನ್ನು ಜೆಡಿಎಸ್‌ನವರಿಗೆ ದಿವಾಕರ ಬಾಬು ದಳದಿಂದ ಹಿಂದೆ ಸರಿದು ತಾತ್ಕಾಲಿಕವಾಗಿ ಕಾಂಗ್ರೆಸ್‌ನ ಲಾಡ್‌ಗೆ ಬೆಂಬಲಿಸಿದರೆ ಏನೂ ಆಕ್ಷೇಪ ಇರಲಾರದು. ಏಕೆಂದರೆ ಕುಮಾರಸ್ವಾಮಿ ವಿರುದ್ಧ ತೀರಾ ಕೆಳಮಟ್ಟದ ಅಪಪ್ರಚಾರ ನಡೆಸುತ್ತಾ ಸತತ ದಾಳಿ ಮಾಡಿದ್ದ ರೆಡ್ಡಿ ಗ್ಯಾಂಗ್ ಸರ್ವನಾಶವಾಗುವುದು ದಳದವರಿಗೂ ಬೇಕಿದೆ. ಇದೀಷ್ಟೇ ಅಲ್ಲ ಲಾಡ್-ರೆಡ್ಡಿ ಹೀಗೆ ಮುಖಾಮುಖಿಯಾಗುವ ಮೂಲಕ ರಾಜ್ಯದ ಇಡೀ ಗಣಿ ಲಾಬಿ ಚುನಾವಣೆ ಫಲಿತಾಂಶದ ನಂತರ ಮರುಧ್ರುವೀಕರಣವಾಗಲು ರೆಡಿಯಾದಂತಿದೆ.

ಶಿಕಾರಿಪುರದಲ್ಲಿ ಯಡ್ಡಿಯನ್ನು ಕೆಡವಿ, ಬಳ್ಳಾರಿಯಲ್ಲಿ ರೆಡ್ಡಿ ಕೋಟೆ ಉಡಾಯಿಸಿ ಧೂಳು ಮಾಡಿಬಿಟ್ಟರೆ ಅಲ್ಲಿಗೆ ಕರ್ನಾಟಕದಲ್ಲಿ ಕಾಂಗ್ರೆಸ್ ಹಾಗೂ ದಳದವರಿಗೆ ನಿರಾಳ.


ದಿವಾಕರ್ ಬಾಬು ಹಿಂದೆಸರಿದು ಕಾಂಗ್ರೆಸ್‌ನ ಲಾಡ್‌ಗೆ ಬೆಂಬಲಿಸುವ ಸುದ್ದಿ ಕೇಳಿಯೇ ರೆಡ್ಡಿಗಳ ಕೈಕಾಲು ನಡುಗಲು ಶುರುವಾಗಿದೆ. 10 ಕ್ಕೆ ಹತ್ತು ಸೀಟ್ ಗೆಲ್ಲುತ್ತೇವೆಂದು ಮೀಸೆ ತಿರುವಿಕೊಳ್ಳುತ್ತಿದ್ದ ಜನಾರ್ದನ ರೆಡ್ಡಿ ನಾಳೆ ಮೀಸೆ ಬೋಳಿಸಿಕೊಳ್ಳಬೇಕಾಗಿ ಬಂದರೂ ಆಶ್ಚರ್ಯವಿಲ್ಲ.

ಸದ್ಯದಲ್ಲೇ ರಾಹುಲ್ ಗಾಂಧಿ ಹರಪನಹಳ್ಳಿಗೆ ಭೇಟಿ ನೀಡಲಿದ್ದು ಆನಂತರ ಸೋನಿಯಾ ಗಾಂಧಿ ಕೂಡ ಬಳ್ಳಾರಿಗೆ ವಿಶೇಷ ಭೇಟಿ ನೀಡಲಿದ್ದಾರೆ. ಈ ಎರಡೂ ಭೇಟಿಗಳು ಅಲ್ಲಿನ ಕಾಂಗ್ರೆಸ್ ಸ್ಪರ್ಧಿಗಳಿಗೆ ಮತ್ತಷ್ಟು ಉತ್ತೇಜನವನ್ನು ನೀಡಲಿದೆ.

ಇಂತಹ ಸಂದರ್ಭದಲ್ಲೇ ದಿವಾಕರ್ ಬಾಬು ಕೂಡ ಕಾಂಗ್ರೆಸ್‌ನೊಂದಿಗೆ ಕೈಜೋಡಿಸಿದರೆ ಅದಕ್ಕಿಂತ ಇನ್ನೊಂದು ಚಾಣಾಕ್ಷ ತಂತ್ರ ಇನ್ನೊಂದಿಲ್ಲ, ಯಾಕೆಂದರೆ ಅನಿಲ್ ಲಾಡರನ್ನು ಗೆಲ್ಲಿಸಿ ರೆಡ್ಡಿಗಳ ಸೊಕ್ಕು ಮುರಿಯುವಷ್ಟು ತಾಕತ್ತು ದಿವಾಕರ್ ಬಾಬುಗಿದೆ.

ಅದೀಗ ಕರ್ನಾಟಕಕ್ಕೆ ಬೇಕಿದೆ.

■ ಬಿಳಿದಾಳೆ ಪಾರ್ವತೀಶ



ಸಂಡೂರು: ಕಾಂಗ್ರೆಸ್ ತುಕಾರಾಂ



ಬಿಜೆಪಿ ಇಲ್ಲಿ ಲೆಕ್ಕಕ್ಕಿಲ್ಲ, ಕಾಂಗ್ರೆಸ್‌ನ ಬಲಿಷ್ಠ ಅಭ್ಯರ್ಥಿ ಈ. ತುಕಾರಾಂ ವಿರುದ್ಧ ಬಿಎಸ್‌ಪಿಯ ಬಿ. ಜಯಣ್ಣ ಭಾರಿ ಪೈಪೋಟಿ ನಡೆಸುತ್ತಿದ್ದಾರೆ. ಜೆಡಿಎಸ್‌ನ ಟಿ. ಬಸವರಾಜು ಕೂಡ ಕಡಿಮೆ ಏನಲ್ಲ, ಆದರೂ ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್‌ನ ತುಕಾರಾಂ ಮೇಲುಗೈ ಆಗಿದೆ.

ಹಗರಿಬೊಮ್ಮನಹಳ್ಳಿ: ಬಿಜೆಪಿ ಔಟ್

ಪಿ ಅಡ್ರೆಸ್ಸಿಗೆ ಇರದ ಇನ್ನೊಂದು ಕ್ಷೇತ್ರವಿದು. ಕಾಂಗ್ರೆಸ್‌ನ ಹೆಗ್ಡಾಳ್ ರಾಮಣ್ಣ ಹಾಗೂ ಜೆಡಿಎಸ್‌ನ ಎಲ್.ಬಿ.ಪಿ. ಭೀಮಾನಾಯಕ್ ನಡುವೆ ಸಮಬಲದ 3 ನಡೆಯುತ್ತಿದೆ. ಕೊನೆಗೆ ಇವರಿಬ್ಬರಲ್ಲಿ ಯಾರೇ ಗೆದ್ದರೂ ಫೋಟೋ ಫಿನಿಷ್ ಆಗಿರುತ್ತದೆ.

ಸಿರಗುಪ್ಪ: ಬಿಜೆಪಿ ಸೋಲಿಸಲು ರೆಡ್ಡಿ ಸ್ಕೆಚ್

: ರಾಜ್ಯದಲ್ಲೆಲ್ಲೂ ನಡೆದಿರದ ವಿಚಿತ್ರ ತಿಕ್ಕಲು ವಿದ್ಯಾಮಾನವೊಂದು ಸಿರಗುಪ್ಪದಲ್ಲಿ ನಡೆಯುತ್ತಿದೆ. ಅದು ಬಿಜೆಪಿಯ ಅಧಿಕೃತ ಅಭ್ಯರ್ಥಿ ಎಂ.ಎಸ್. ಲಿಂಗಪ್ಪನನ್ನು ಸೋಲಿಸಲು ಬಿಜೆಪಿ ನಾಯಕನೊಬ್ಬ ಸುಪಾರಿ ಕೊಟ್ಟಿರುವುದು.

. ಬೇರಾರೂ ಅಲ್ಲ....


ರ್ದನ್ ರೆಡ್ಡಿ!

ಪಿಯ ಸೋಮಲಿಂಗಪ್ಪನನ್ನು ಸೋಲಿಸಲು ಹೊರಟಿರುವ ಈ ರೆಡ್ಡಿ ಅದಕ್ಕಾಗಿ ಕಾಂಗ್ರೆಸ್‌ನ ಬಿ.ಎಂ. ನಾಗರಾಜ್‌ಗೆ ಮತ್ತು ದಳದ ಮಲ್ಲಿಕಾರ್ಜುನ ಗೆ ತಲಾ ಒಂದು ಕೋಟಿ ಹಣ ಕೊಟ್ಟಿದ್ದಾನಂತೆ.

ಕ್ಕೆ ಕಾರಣ ಏನು ಗೊತ್ತೆ?

ರೆಡ್ಡಿ ಸಿರಗುಪ್ಪ ಟಿಕೆಟ್‌ಅನ್ನು ತನ್ನ ಭಂಟನೊಬ್ಬನಿಗೆ ಕೊಡುವಂತೆ ಕೇಳಿದ್ದ. ಅಷ್ಟೇ ಅಲ್ಲ ಸೋಮಲಿಂಗಪ್ಪನಿಗೆ ಟಿಕೆಟ್ ಕೊಡಬಾರದೆಂತಲೂ ಹೇಳಿದ್ದ. ಆದರೆ ಪಾರ್ಟಿ ನಾಯಕರು ರೆಡ್ಡಿ ಮಾತಿಗೆ ಬೆಲೆ ಕೊಡದೆ ಸೋಮಲಿಂಗಪ್ಪನಿಗೇ ಟಿಕೆಟ್ ಕೊಟ್ಟ ಕಾರಣ ರೆಡ್ಡಿ ಈಗ ಕೆರಳಿದ್ದಾನೆ.

ರೆಡ್ಡಿ ಎಲ್ಲಾ ಮುಚ್ಚಿಕೊಂಡಿದಿದ್ದರೆ ಇಲ್ಲಿ ಬಿಜೆಪಿಗೆ ಹಂಡ್ರೆಡ್ ಪರ್ಸೆಂಟ್ ಗೆಲ್ಲುವ ಛಾನ್ಸಿತ್ತು, ಈಗಲೂ ಸೋಮಲಿಂಗಪ್ಪ ರೇಸಿನಲ್ಲಿ ಮುಂದೆಯೇ ಇದ್ದಾರೆ. ರೆಡ್ಡಿ ಈಗಲಾದರೂ ಸುಮ್ಮನಾದರೆ ಇಲ್ಲಿ ಬಿಜೆಪಿ ಗೆಲ್ಲಲಿದೆ.




ಕಂಪ್ಲಿ (ಮೀಸಲು): ಅಕ್ಕ-ಅಪ್ಪ ಪೈಪೋಟಿ




ಇಲ್ಲಿ ಕಾಂಗ್ರೆಸ್‌ನ ಸಣ್ಣ ಹನುಮಕ್ಕ ಹಾಗೂ ದಳದ ಮಾದೆಪ್ಪ ಇಬ್ಬರೂನೂ ಬಿಜೆಪಿಯ ಟಿ.ಎಚ್. ಸುರೇಶ್ ಬಾಬು ವಿರುದ್ಧ ಭಾರೀ ಪೈಪೋಟಿ ನಡೆಸಿದ್ದಾರೆ. ಬಿಜೆಪಿ ಅಭ್ಯರ್ಥಿಗೆ ಮಾಮೂಲಿನಂತೆ ಗಣಿ ರೆಡ್ಡಿಯ ಹಣ ಹರಿದು ಬರುತ್ತಿದೆ. ಆದರೆ ಕಾಂಗ್ರೆಸ್‌ನ ಸಣ್ಣ ಹನುಮಕ್ಕಗೆ ಅಷ್ಟು ಹಣಬಲ ಇಲ್ಲದಿದ್ದರೂ ಲಿಂಗಾಯತರು, ಕುರುಬರು ಹಾಗೂ ಮುಸ್ಲಿಮರ ಬೆಂಬಲ ಕಂಡುಬರುತ್ತಿದೆ.

ಈಕೆಗೆ ಈಗ ದಕ್ಕಿರುವ ಬೆಂಬಲ ಕೊನೇತನಕ ಮುಂದುವರೆದರೆ ಇಲ್ಲಿ ಕಾಂಗ್ರೆಸ್ ಗೆಲ್ಲಬಲ್ಲದು. ಆದರೆ ಹಣದ ಅಬ್ಬರ ಫಲಿತಾಂಶ ಏರುಪೇರು ಮಾಡಬಲ್ಲದು.



ಕೂಡ್ಲಿಗಿ: ಬಿಜೆಪಿ ನಾಗೇಂದ್ರ ಮುಂದೆ



ಕಾಂಗ್ರೆಸ್‌ನ ಎಸ್. ವೆಂಕಟೇಶ್ ಹಾಗೂ ಜೆಡಿಎಸ್‌ನ ಸಿ. ರಾಜುಗಿಂತ ಬಿಜೆಪಿಯ ಬಿ. ನಾಗೇಂದ್ರ ಇಲ್ಲಿ ಮುಂದಿದ್ದಾನೆ. ಬಳ್ಳಾರಿಯ ಹಳೇ ರೌಡಿಗಳಲ್ಲಿ ಒಬ್ಬನಾದ ನಾಗೇಂದ್ರನಿಗೆ ಇಲ್ಲಿ ರೆಡ್ಡಿಗಳು ಹಣದ ಬೆಂಬಲ ನೀಡುತ್ತಿದ್ದಾರೆ.

ಬಳ್ಳಾರಿ: ಬಿಜೆಪಿಗೆ ಒದೆಯಲಿರುವ ಲಿಂಗಾಯತರು



ಕಳೆದೆರಡು ಲೋಕಸಭಾ ಚುನಾವಣೆ ಹಾಗೂ ಮೊನ್ನಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸಾರಾಸಗಟಾಗಿ ಬೆಂಬಲಿಸಿದ್ದ ಬಳ್ಳಾರಿಯ ವೀರಶೈವರು ಈ ಬಾರಿ ಬಿಜೆಪಿಯನ್ನು ಗಟಾರಕ್ಕೆ ತಳ್ಳುವ ಅಘೋಷಿತ ನಿರ್ಧಾರ ಕೈಗೊಂಡಿದ್ದಾರೆ. ವೀರಶೈವರ ಈ ನಿರ್ಧಾರಕ್ಕೆ ರಾಜ್ಯ ರಾಜಕೀಯ ವಿದ್ಯಮಾನಗಳೇನೂ ಕಾರಣವಲ್ಲ, ಬದಲಿಗೆ ಸ್ಥಳೀಯವಾಗಿ ಬಳ್ಳಾರಿಯ ಗಣಿರೆಡ್ಡಿ ಸಹೋದರರು ಹಾಗೂ ಶ್ರೀರಾಮುಲು ಪಾಲಿಸಿಕೊಂಡು ಬರುತ್ತಿರುವ ವೀರಶೈವ ವಿರೋಧಿ ಧೋರಣೆಯೇ ಆಗಿದೆ.

1999 ರ ಲೋಕಸಭಾ ಚುನಾವಣೆಯಲ್ಲಿ ಸುಷ್ಮಾ ಸ್ವರಾಜ್ ಬಿಜೆಪಿಯಿಂದ ಸ್ಪರ್ಧಿಸಿದಾಗ ಮೊದಲಬಾರಿಗೆ ವೀರಶೈವರು ಬಿಜೆಪಿಯನ್ನು ಬೆಂಬಲಿಸಿದ್ದರು. ಆದರೆ ಇದೇ ಲೋಕಸಭಾ ಸ್ಥಾನಕ್ಕೆ ಸೋನಿಯಾ ಗಾಂಧಿ ರಾಜೀನಾಮೆ ನೀಡಿದಾಗ ಕಾಂಗ್ರೆಸ್‌ನಿಂದ ವೀರಶೈವ ಸಮಾಜದ ಕೊಳೂರು ಬಸವನಗೌಡರನ್ನು ಕಣಕ್ಕಿಳಿಸಲಾಗಿತ್ತು, ಬಸವನಗೌಡ ಸೋನಿಯಾಗಾಂಧಿಯವರಿಗಿಂತಲೂ ಅತ್ಯಧಿಕ ಮತಗಳನ್ನು ಪಡೆದು ಆಯ್ಕೆಯಾಗಿದ್ದರು.

2004 ರಲ್ಲಿ ವಾಜಪೇಯಿ ಪ್ರಭಾವ, ಸ್ಥಳೀಯ ಕಾಂಗ್ರೆಸ್ ನಾಯಕರಿಂದ ವೀರಶೈವರ ಕಡೆಗಣನೆಯಂಥ ಅಂಶಗಳು ವೀರಶೈವರು ಬಿಜೆಪಿಯನ್ನು ಬೆಂಬಲಿಸಲು ಕಾರಣವಾಗಿದ್ದವು. ಅದರಲ್ಲೂ ಕಾಂಗ್ರೆಸ್‌ನಲ್ಲಿ ವೀರಶೈವರನ್ನು ನಡೆಸಿಕೊಳ್ಳುತ್ತಿದ್ದ ರೀತಿ ದೊಡ್ಡಮಟ್ಟದ ಅಸಮಾಧಾನಕ್ಕೆ ದಾರಿ ಮಾಡಿಕೊಟ್ಟಿತ್ತು. ಆಗ ಬಿಜೆಪಿ ಪರ್ಯಾಯವಾಗಿ ಆಯ್ಕೆಗೆ ಇದ್ದ ಏಕೈಕ ಪಕ್ಷವಾಗಿತ್ತು. ಬಿಜೆಪಿಯನ್ನು ಬೆಂಬಲಿಸಿದಲ್ಲಿ ವೀರಶೈವ ಸಮಾಜದ ಮುಖಂಡರಿಗೆ ರಾಜಕೀಯ ಪ್ರಾತಿನಿಧ್ಯ ಸಿಗಬಹುದೆಂಬ ನಿರೀಕ್ಷೆಗಳು ಹೆಚ್ಚಾಗಿದ್ದವು. ಈಗ ಅಂತಹ ನಿರೀಕ್ಷೆಗಳು-ಭರವಸೆಗಳೆಲ್ಲಾ ಹುಸಿಯಾಗಿವೆ.


ಕಲ್ಲುಕುಟಿಗನಾಹಾಳ್ ಗ್ರಾಮದಲ್ಲಿ ದೀಪಾವಳಿ ಅಮಾವಾಸ್ಯೆಯ ದಿನದಂದು ನಡೆದ ಮೂರು ಕಗ್ಗೊಲೆಗಳು ವೀರಶೈವರಲ್ಲಿ ತೀವ್ರ ಅಸಮಾಧಾನ ಹಾಗೂ ಅಭದ್ರತೆಗೆ ಕಾರಣವಾಗಿವೆ. ಸಿರಗುಪ್ಪದ ಮಾಜಿ ಶಾಸಕ ಸೋಮಲಿಂಗಪ್ಪ ವೀರಶೈವರ ಮೇಲೆ ನಡೆಸುತ್ತಿರುವ ದೌರ್ಜನ್ಯದ ದಬ್ಬಾಳಿಕೆಗಳು ಮೇರೆ ಮೀರಿವೆ.



ಕೋಳೂರು

ಇತ್ತೀಚೆಗೆ ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘಕ್ಕೆ ನಡೆದ ಚುನಾವಣೆಯೇ ವೀರಶೈವರು ಬಿಜೆಪಿ ವಿರೋಧಿ ನಿಲುವು ತಳೆದಿರುವುದಕ್ಕೆ ಉತ್ತಮ ಉದಾಹರಣೆಯಾಗಿದೆ. ಮಾಜಿ ಸಂಸದ ಕೊಳೂರು ಬಸವನಗೌಡ ನೇತೃತ್ವದಲ್ಲಿ ಬಿಜೆಪಿ ಕೃಪಾಪೋಷಿತ 30 ಅಭ್ಯರ್ಥಿಗಳು ವೀವಿ ಸಂಘದ ಚುನಾವಣೆಗೆ ಸ್ಪರ್ಧಿಸಿದ್ದರು. ಅದರಲ್ಲಿ ಗೆದ್ದದ್ದು 3 ಸ್ಥಾನಗಳು ಮಾತ್ರ. ಇಂಥದೊಂದು ಅನಿರೀಕ್ಷಿತ-ಆಘಾತಕಾರಿ ಫಲಿತಾಂಶ ನೀಡುವುದರೊಂದಿಗೆ ವೀರಶೈವರು ಗಣಿ ರೆಡ್ಡಿ ಸಹೋದರರಿಗೆ ತೀವ್ರ ಮುಖಭಂಗ ವಾಗುವಂತೆ ನೋಡಿಕೊಂಡಿದ್ದಾರೆ.

ಇಂತಹ ಬೆಳವಣಿಗೆಗಳ ನಡುವೆ ಪ್ರಸ್ತುತ ಹಿರಿಯ ರಾಜಕಾರಣಿ ಎಂ.ಪಿ. ಪ್ರಕಾಶ್ ವಿರುದ್ಧ ಗಣಿ ರೆಡ್ಡಿ ಸಹೋದರರು ಹೂಡಿರುವ ರಾಜಕೀಯ ಷಡ್ಯಂತ್ರ ಕೂಡಾ ವೀರಶೈವರಲ್ಲಿ ಬಿಜೆಪಿ ವಿರೋಧಿ ನಿಲುವು ತಳೆಯಲು ದಾರಿ ಮಾಡಿಕೊಟ್ಟಿದೆ. "ಎಂ.ಪಿ. ಪ್ರಕಾಶ್‌ರ ರಾಜಕೀಯ ಭವಿಷ್ಯ ಮುಗಿಸುತ್ತೇವೆ. ಜಿಲ್ಲೆಯಿಂದಲೇ ಓಡಿಸುತ್ತೇವೆ..."ಎಂದು ಹೇಳುತ್ತಲೇ ಬಂದಿರುವ ಗಣಿರೆಡ್ಡಿ ಸಹೋದರರು ಜಿಲ್ಲೆಯಲ್ಲಿ ನಿರ್ಣಾಯಕವಾಗಿರುವ ವೀರಶೈವ ವಿರೋಧಕ್ಕೆ ಗುರಿಯಾಗಿದ್ದಾರೆ. ಹರಪನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಎಂ.ಪಿ. ಪ್ರಕಾಶ್‌ಗೆ ವಿರುದ್ಧವಾಗಿ ಸ್ವತಃ ಕರುಣಾಕರ ರೆಡ್ಡಿಯೇ ಅಖಾಡಕ್ಕಿಳಿದ ನಂತರ ಇದು ತಾರಕಕ್ಕೇರಿದೆ.



ಕರುಣಾಕರ ರೆಡ್ಡಿ

ರಾಜಕೀಯವಾಗಿ ಎಂ.ಪಿ. ಪ್ರಕಾಶ್‌ರ ಶಕ್ತಿ-ಸಾಮರ್ಥ್ಯ, ಪ್ರಭಾವಗಳೇನೇ ಇರಲಿ ಈ ಹೊತ್ತಿನ ತುರ್ತಿಗೆ ಎಂ.ಪಿ. ಪ್ರಕಾಶ್ ವೀರಶೈವರ ಮೆಚ್ಚಿನ ನಾಯಕರಾಗಿದ್ದಾರೆ. ಇದ್ದಬದ್ದ ವೀರಶೈವ ಮುಖಂಡರನೇಕರು ಗಣಿರೆಡ್ಡಿ ಸಹೋದರರ ಬಾಲಂಗೋಚಿಗಳಾಗಿ ತಿರುಗುತ್ತಿರುವಾಗ ಎಂ.ಪಿ. ಪ್ರಕಾಶ್ ತಮ್ಮ ಸ್ವಂತಿಕೆಯ ನೆಲೆಯಲ್ಲಿ ಸಕ್ರಿಯ ರಾಜಕಾರಣದಲ್ಲಿರುವುದು ವೀರಶೈವರಲ್ಲಿ ಭರವಸೆ ಹುಟ್ಟಿಸಿದೆ. ಎಂ.ಪಿ. ಪ್ರಕಾಶ್‌ರ ಈ ದೃಢ ರಾಜಕೀಯ ನಿಲುವೇ ವೀರಶೈವರು ಎಂ.ಪಿ.ಪಿ. ಬೆಂಬಲಕ್ಕೆ ನಿಲ್ಲುವಂತೆ ಪ್ರೇರಣೆ ನೀಡಿದೆ. ಹಾಗಾಗಿ ಬಳ್ಳಾರಿ ಜಿಲ್ಲೆಯಲ್ಲಿ ವೀರಶೈವರ ಮತಗಳು ಅನಾಯಾಸವಾಗಿ ಕಾಂಗ್ರೆಸ್‌ಗೆ ಜಮೆಯಾಗಲಿವೆ. ಮಾಜಿ ಶಾಸಕ ಬಿ. ಶಿವರಾಮರೆಡ್ಡಿ, ಮಾಜಿ ಸಚಿವ ಬಸವರಾಜೇಶ್ವರಿಯವರ ಪುತ್ರ, BUDA ದ ಮಾಜಿ ಅಧ್ಯಕ್ಷ ಡಾ. ವೆಂಕಟ್ ಮಹಿಪಾಲ್, ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಜೆ. ಉಮೇಶ್, ಈಗಿನ ಅಧ್ಯಕ್ಷ ನಿಷ್ಠಿ ರುದ್ರಪ್ಪ, ಎಸ್. ಇಂದುಶೇಖರ್, ಮೃತ್ಯುಂಜಯಸಂಘದ ಗಣಿ ರೆಡ್ಡಿಗಳ ಆಶ್ರಯದಲ್ಲಿ ವೀರಶೈವ ಸಮಾಜದ ಪ್ರತಿನಿಧಿಗಳೆಂಬಂತೆ ವಿರಾಜಮಾನರಾಗಿದ್ದರೂ ವೀರಶೈವ ಸಮಾಜದಲ್ಲಿ ಇವರಿಗೆ ಯಾವ ಕಾಸಿನ ಕಿಮ್ಮತ್ತೂ ಇಲ್ಲ, ಬೆರಳೆಣಿಕೆಯ ಮತ ಹಾಕಿಸುವ ಸಾಮರ್ಥ್ಯವಿಲ್ಲದಿದ್ದರೂ ಗಣಿ ರೆಡ್ಡಿಗಳ ಪ್ರಸಾದ ತಿನ್ನಲಿಕ್ಕೆ ಅವಕಾಶ ಮಾಡಿಕೊಂಡಿದ್ದಾರೆ

ಯಡ್ಡಿ ಮುಖ್ಯಮಂತ್ರಿಯಾಗುವರೆಂಬ ಕಾರಣಕ್ಕೆ ಕೋಟಿಂತಗೊಂಡು ಬಿಜೆಪಿಗೆ ಮತ ಹಾಕಬೇಕೆಂಬ ಉಮೇದಿ ಇಲ್ಲಿನ ವೀರಶೈವರಲ್ಲಿ ಕಂಡುಬರುತ್ತಿಲ್ಲ.

ಉಡುಪಿ: ಹಣದ ಚೆಲ್ಲಾಟ, ಜಾತಿ ಮೇಲಾಟ

ಕೋಮುವಾದ, ಜಾತಿವಾದ, ಮೌಢ್ಯ, ಅತೀ ಬುದ್ಧಿವಂತಿಕೆ (ಅಂದರೆ ಎಲ್ಲದಕ್ಕೂ ಮೌನವಾಗಿರುವುದು!?) ಧಾರ್ಮಿಕತೆ, ಪಾಳೇಗಾರಿಕೆ, ಮೂಲಭೂತವಾದ ಇತ್ಯಾದಿಗಳು ವ್ಯಾಪಕವಾಗಿ ಹರಡಿರುವುದು ಉಡುಪಿಯ ವಿಷಾದ! ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಮುಂದುವರಿದಿರುವ ಜಿಲ್ಲೆ ಸಾಮಾಜಿಕವಾಗಿ ಬದಲಾಗದಿರುವುದೇ ಆಶ್ಚರ್ಯ!

ಉಡುಪಿ ಜಿಲ್ಲೆಯಲ್ಲಿ ಐದು ವಿಧಾನಸಭಾ ಕ್ಷೇತ್ರಗಳಿವೆ. ಉಡುಪಿ ತಾಲ್ಲೂಕಿನಲ್ಲಿ ಉಡುಪಿ ಮತ್ತು ಕಾಪು, ಕುಂದಾಪುರ ತಾಲ್ಲೂಕಿನಲ್ಲಿ ಕುಂದಾಪುರ ಮತ್ತು ಬೈಂದೂರು, ಕಾರ್ಕಳ ತಾಲ್ಲೂಕಿನಲ್ಲಿ ಕಾರ್ಕಳ ವಿಧಾನಸಭಾ ಕ್ಷೇತ್ರಗಳಿವೆ.

ಉಡುಪಿ, ಕಾಪು, ಕಾರ್ಕಳ, ಕುಂದಾಪುರ ಕ್ಷೇತ್ರಗಳ ಮತದಾರರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಿದ್ದರು. ಬೈಂದೂರಿನ ಮತದಾರರು ಕಾಂಗ್ರೆಸ್‌ನ್ನು ಗೆಲ್ಲಿಸಿದ್ದರೆ, ಬ್ರಹ್ಮಾವರ ಕ್ಷೇತ್ರದ ಮತದಾರರು ಕಾಂಗ್ರೆಸ್ ಮತ್ತು ಬಜೆಪಿಯನ್ನು ಸೋಲಿಸಿ ಪಕ್ಷೇತರ ಅಭ್ಯರ್ಥಿ ಕೆ. ಜಯಪ್ರಕಾಶ್ ಹೆಗ್ಡೆಯವರನ್ನು ಗೆಲ್ಲಿಸಿದ್ದರು. ಕ್ಷೇತ್ರ ಪುನರ್ವಿಂಗಡಣೆಯಿಂದಾಗಿ ಈ ಬಾರಿ ಬ್ರಹ್ಮಾವರ ವಿಧಾನಸಭಾ ಕ್ಷೇತ್ರ ಇಲ್ಲವಾಗಿದೆ.

ಬ್ರಹ್ಮಾವರ ಕ್ಷೇತ್ರದ ಶೇ. 50 ರಷ್ಟು ಭಾಗ ಉಡುಪಿ ಕ್ಷೇತ್ರಕ್ಕೆ ಸೇರ್ಪಡೆಗೊಂಡಿದೆ. ಉಳಿದ ಭಾಗಗಳು ಕುಂದಾಪುರ ಮತ್ತು ಕಾಪು ಕ್ಷೇತ್ರಗಳಿಗೆ ಹಂಚಿಹೋಗಿದೆ.

ಬಿಲ್ಲವರು (ಈಡಿಗರು) ಜಿಲ್ಲೆಯಲ್ಲಿ ಬಹುಸಂಖ್ಯಾತರು. ಶೇ. 38 ರಷ್ಟಿರುವ ಬಿಲ್ಲವ ಮತದಾರರು ಇಲ್ಲಿ ಸೋಲು-ಗೆಲುವುಗಳನ್ನು ಬಹುತೇಕ ನಿರ್ಣಯಿಸುವವರು. ಶೇ. 35 ರಷ್ಟಿರುವ ಬಂಟರು, ಶೇ. 32 ರಷ್ಟಿರುವ ಮೊಗವೀರರು, ಶೇ. 18 ರಷ್ಟಿರುವ ದಲಿತರು, ಶೇ. 14 ರಷ್ಟಿರುವ ಮುಸ್ಲಿಮರು, ಶೇ. 12 ರಷ್ಟಿರುವ ಬ್ರಾಹ್ಮಣರು ಹಾಗೂ ಶೇ. 9 ರಷ್ಟಿರುವ ಕ್ರೈಸ್ತ ಮತದಾರರು ಚುನಾವಣೆಯಲ್ಲಿ ಮುಖ್ಯ ಪಾತ್ರವನ್ನೇ ವಹಿಸುತ್ತಾರೆ.

ಉಡುಪಿ


ರಘುಪತಿ ಭಟ್

ಉಡುಪಿ ವಿಧಾನಸಭಾ ಕ್ಷೇತ್ರದಲ್ಲಿ ಬಜೆಪಿಯಿಂದ ಮಾಜಿ ಶಾಸಕ ಕೆ. ರಘುಪತಿ ಭಟ್, ಕಾಂಗ್ರೆಸ್‌ನಿಂದ ಉದ್ಯಮಿ ಪ್ರಮೋದ್ ಮಧ್ವರಾಜ್ ಹಾಗೂ ಬಿಎಸ್‌ಪಿಯಿಂದ ಝುಕೀರ್ ಹುಸೇನ್ ಸ್ಪರ್ಧೆಯಲ್ಲಿದ್ದಾರೆ.

ಚಿಕ್ಕಮಗಳೂರಿನವರಾದ ಝುಕೀರ್ ಹುಸೇನ್ ಉಡುಪಿ ಮತದಾರರಿಗೆ ಅಪರಿಚಿತರು. ಪರಿಚಿತರಾಗುವ ರೀತಿಯಲ್ಲಿ ಕನಿಷ್ಠ ಕೆಲಸವನ್ನೂ ಆರಂಭಿಸದ ಝುಕೀರ್ ಹುಸೇನ್ ಅವರಿಗೆ ಬಿಎಸ್‌ಪಿ ಎಂಬ ನೆಲೆಯಲ್ಲಿ ಒಂದಷ್ಟು ಓಟು ಬೀಳುವ ಸಾಧ್ಯತೆ ಇದ್ದೇ ಇದೆ.

ಕೇರಳದಿಂದ ವಲಸೆ ಬಂದು ಉಡುಪಿ ಮಠಾಧೀಶರೊಬ್ಬರ ಕಾರು ಚಾಲಕನಾಗಿ ಕೆಲಸಕ್ಕೆ ಸೇರಿದ ಬಡ ಮಲೆಯಾಳಿ ಬ್ರಾಹ್ಮಣ ಕುಟುಂಬದ ಕುಡಿಯಾದ ರಘುಪತಿ ಭಟ್ಟರು ಫೈನಾನ್ಷಿಯರ್ ಮತ್ತು ದ್ವಿಚಕ್ರ ವಾಹನ ಡೀಲರ್ ಆಗಿ ಶ್ರೀಮಂತರಾದವರು.

ಹಣದ ಮೂಲಕವೇ ಬಜೆಪಿ ನಾಯಕನಾದ ಭಟ್, ನಗರಸಭಾ ಸದಸ್ಯರಾಗಿ, ಬಳಿಕ ಶಾಸಕರಾದವರು. ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪರ ಬೆಂಬಲ ಮತ್ತು ಹಿರಿಯಡ್ಕ ಎಂಬಲ್ಲಿ ನಡೆದ ಭಜರಂಗದಳದ ಕಾರ್ಯಕರ್ತ, ಹಲವು ಕ್ರಿಮಿನಲ್ ಪ್ರಕರಣಗಳ ಆರೋಪಿ ಸುಧಾಕರ ಪೂಜಾರಿ ಎಂಬಾತನ ಕೊಲೆ ಪ್ರಕರಣವನ್ನು ಚುನಾವಣೆಗೆ ಪೂರಕವಾಗಿ, ಸಮರ್ಥವಾಗಿ ಉಪಯೋಗಿಸಿಕೊಂಡದ್ದೇ ಇಲ್ಲಿ ಬಜೆಪಿ ಅಭ್ಯರ್ಥಿಯ ಗೆಲುವಿಗೆ ಮೂಲವಾಗಿತ್ತು.


ಪ್ರಮೋದ್ ಮಧ್ವರಾಜ್


ಕೋಟಿ ರೂಪಾಯಿಗಳ ಮನೆ ಕಟ್ಟಿಸಿರುವ, ಭೂಮಿ ಖರೀದಿಸಿರುವ, ಉದ್ಯಮಗಳನ್ನೂ ಸ್ಥಾಪಿಸಿರುವ ರಘುಪತಿ ಭಟ್ ಇಂದು ಕೋಟ್ಯಾಧಿಪತಿ. ಶ್ರೀಮಂತಿಕೆಯಿಂದ ಬಂದ ದರ್ಪ, ಅಧಿಕಾರದಿಂದ ಬಂದ ದುರಹಂಕಾರ ಮತ್ತು ಭಾರೀ ಭ್ರಷ್ಟಾಚಾರದಿಂದ ಬಂದ ಕಳಂಕ ರಘುಪತಿ ಭಟ್ಟರ ಗೆಲುವಿಗೆ ತಡೆಯೊಡ್ಡಲಿದೆ.

ಬಜೆಪಿಯ ರಘುಪತಿ ಭಟ್ಟರ ವಿರುದ್ಧ ಕಾಂಗ್ರೆಸ್‌ನಿಂದ ಸೆಣಸುತ್ತಿರುವ ಪ್ರಮೋದ್ ಮಧ್ವರಾಜ್ ಅವರು ಬಜೆಪಿ ಸಂಸದೆ, ಕಾಂಗ್ರೆಸ್‌ನ ಮಾಜಿ ಸಚಿವೆ ಮನೋರಮಾ ಮಧ್ವರಾಜ್‌ರ ಸುಪುತ್ರ.

ಮೊಗವೀರ ಜನಾಂಗದ ಮುಂದಾಳುವಾದ ಪ್ರಮೋದ್, ಕೋಟ್ಯಾಧಿಪತಿ ಉದ್ಯಮಿ. ಕಳೆದ ಚುನಾವಣೆಯಲ್ಲಿ ಬ್ರಹ್ಮಾವರ ಕ್ಷೇತ್ರದಿಂದ ಜಯಪ್ರಕಾಶ್ ಹೆಗ್ಡೆ ಎದುರು ಸ್ಪರ್ಧಿಸಿ ಸೋಲುಂಡದ್ದು, ಈ ಸಲ ಪ್ರಮೋದ್‌ಗೆ ಪ್ಲಸ್!

ಬ್ರಹ್ಮಾವರದಿಂದ ಸ್ಪರ್ಧಿಸಿ ಗೆದ್ದ ಹೆಗ್ಡೆ ಈ ಸಲ ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿದ್ದಾರೆ. ಬ್ರಹ್ಮಾವರದಲ್ಲಿ ಪ್ರಮೋದ್ ಚಿರಪರಿಚಿತ. ಪ್ರಮೋದ್ ಬಗ್ಗೆ ಮತದಾರರಿಗೆ ಅನುಕಂಪವೂ ಇದೆ. ರಘುಪತಿ ಭಟ್ ಇಲ್ಲಿ ಅಪರಿಚಿತ ಭಟ್ ಮಾಜಿ ಶಾಸಕರಾಗಿಯೇ ಉಳಿದು ಬಿಡುವ ಸಾಧ್ಯತೆ ಇಲ್ಲಿ ಹೆಚ್ಚಿದೆ. ■

ಕಾಪು


ಲಾಲಾಜಿ ಮೆಂಡನ್

ಸತತವಾಗಿ ನಾಲ್ಕು ಬಾರಿ ಕಾಪು ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದ ಕಾಂಗ್ರೆಸ್‌ನ ವಸಂತ ವಿ. ಸಾಲ್ಯಾನ್, ಕಳೆದ ಚುನಾವಣೆಯಲ್ಲಿ ಬಜೆಪಿಯ ಲಾಲಾಜಿ ಆರ್. ಮೆಂಡನ್ ಎದುರು ಸೋಲುಣ್ಣಬೇಕಾಗಿ ಬಂದಿತ್ತು.

ಕಾಂಗ್ರೆಸ್‌ನ ಪಂಚಾಯತ್ ಸದಸ್ಯೆ ಗ್ಲಾಡಿಸ್ ಡಿ ಅಲ್ಮೇ[...] ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇ ಸಾಲ್ಯಾನ್ ಸೋ[...] ಕಾರಣವಾಗಿತ್ತು. ಬಂಗಾರಪ್ಪರ ಬೆಂಬಲ ಬಜೆಪಿಯ ಲಾಲಾಜಿ[...] ಗೆಲುವಿಗೆ ಒಂದಿಷ್ಟು ಕೆಲಸ ಮಾಡಿತ್ತು.

ಮಾಜಿ ಶಾಸಕರಾದ ಅವಧಿಯಲ್ಲೂ ನಿಷ್ಕ್ರಿಯರಾಗಿರ[...] ಕ್ಷೇತ್ರದಾದ್ಯಂತ ಮದುವೆ, ಮರಣ, ಅಪಘಾತ ಇತ್ಯಾದಿ ಎಲ್ಲೆ[...] ಸಾಧ್ಯವೋ ಅಲ್ಲಿಗೆಲ್ಲ ಹಾಲಿ ಶಾಸಕರಾಗಿದ್ದ ಲಾಲಾಜಿಗ[...] ಮುಂಚಿತವಾಗಿ ಭೇಟಿ ಕೊಟ್ಟು ಸಾಂತ್ವನ ಹೇಳುತ್ತಿದ್ದು[...] ಸಾಲ್ಯಾನ್‌ರವರಿಗೆ ಈ ಬಾರಿ ವರದಾನವಾಗಿ ಪರಿಣಮಿಸಿ[...]


ವಸಂತ ಸಾಲ್ಯಾನ್

ಈ ಸಲ ಬಂಡಾಯದ ಭ[...] ವಿಲ್ಲದಿರುವುದು ಸಾಲ್ಯಾನ್‌ರ[...] ಗೆಲುವಿನ ಮೆಟ್ಟಲಿಗೆ ಹತ್ತಿರ ತಂ[...] ನಿಲ್ಲಿಸಿದೆ. ಇದೇ ಸಂದರ್ಭದ[...] ಜೆಡಿಎಸ್‌ನ ಲೀಲಾಧರ ಶೆ[...] ಸಮಾಜವಾದಿ ಪಕ್ಷದ ಕರುಣಾ[...] ಪ್ರಭು ಹಾಗೂ ಪಕ್ಷೇತರ ನಾಗೇ[...] ರಾವ್ ಇವರ ಸ್ಪರ್ಧೆ ಬಜೆಪಿ[...] ಲಾಲಾಜಿಗೆ ಬೀಳುವ ಓಟುಗಳ[...] ಕಿತ್ತುಕೊಳ್ಳಲಿದೆ. ಕಲ್ಲಿದ್ದಲು ಆಧಾರಿತ ನಾಗಾರ್ಜುನ ಉ[...] ವಿದ್ಯುತ್ ಸ್ಥಾವರದ ಕಟ್ಟಾ ವಿರೋಧಿಗಳೆಂದು ಪ್ರಚಾರ ಪಡೆ[...] ತೆರೆಮರೆಯಲ್ಲಿ ನಾಗಾರ್ಜುನವನ್ನು ಬೆಂಬಲಿಸಿದ್ದು ಇ[...] ನಾಗಾರ್ಜುನ ವಿರೋಧಿಗಳ ನಡುವೆ ಬಯಲಾದುದು [...] ಚುನಾವಣೆಯಲ್ಲಿ ಬಜೆಪಿಗೆ ದೊಡ್ಡ ಹೊಡೆತವಾ[...] ಪರಿಣಮಿಸಲಿದೆ.

ಲಾಲಾಜಿ ಆಪ್ತ ಸಹಾಯಕ ಗೋಪಾಲಕೃಷ್ಣ ಪ್ರಭು ಎಂಬ[...] ಸತ್ತ ಹಂದಿಯ ರುಂಡವನ್ನು ಮಸೀದಿಯೊಂದರ ಎದು[...] ತಂದು ಹಾಕಿ ಕೋಮು ಗಲಭೆ ಸೃಷ್ಟಿಸಲು ಯತ್ನಿಸಿದ್ದರು. [...] ಮೂಲಕ ಹಿಂದೂ ಓಟ್‌ಬ್ಯಾಂಕ್, ಬುಟ್ಟಿಗೆ ಹಾಕಲು ಸಂ[...] ಹೂಡಿದ್ದರಾದರೂ ಇದು ವಿಫಲಗೊಂಡ ಬಜೆಪಿಯನ[...] ಚಿತ್ತಲಾಗಿಸಿತ್ತು. ■

ಚುನಾವಣೆ 2008

ಕೊಪ್ಪಳ:

ಹಿಟ್ನಾಳ್ V/s ಕರಡಿ



ಇಲ್ಲಿ ಸದ್ಯ ಹಣಾಹಣಿ ಇರುವುದು ಕಾಂಗ್ರೆಸ್‌ನ ಬಸವರಾಜ್ ಹಿಟ್ನಾಳ್ ಮತ್ತು ಜೆಡಿಎಸ್‌ನ ಸಂಗಣ್ಣ ಕರಡಿಯ ನಡುವೆ. ಇವರಿಬ್ಬರ ಹಣೆಬರಹ ನಿಂತಿರುವುದು ನಿರ್ಣಾಯಕವಾಗಿರುವ ಮುಸ್ಲಿಮ್ ಮತಗಳ ಮೇಲೆ. ಸದ್ಯದ ಪರಿಸ್ಥಿತಿಯಲ್ಲಿ ಸಂಗಣ್ಣ ಕರಡಿಗೆ ಮುಸ್ಲಿಮ್ ಮತಗಳು ಒಲಿಯುವ ಲಕ್ಷಣಗಳು ಕಾಣುತ್ತಿಲ್ಲ, ಹಾಗಾಗಿ ಕರಡಿಯ ಗೆಲುವು ಇನ್ನೂ ಡೌಟಾಗಿಯೇ ಉಳಿದಿದೆ.

ಆದರೆ, ಭರದಿಂದ ಮುನ್ನುಗ್ಗುತ್ತಿರುವ ಕಾಂಗ್ರೆಸ್‌ನ ಬಸವರಾಜ್ ಹಿಟ್ನಾಳ್‌ಗೆ ಪಕ್ಷೇತರವಾಗಿ ಸ್ಪರ್ಧಿಸಿರುವ ಮಾಜಿ ಎಮ್ಮೆಲ್ಸಿ ಕರಿಯಣ್ಣ ಸಂಗಟಿಯದ್ದೇ ಕಿರಿಕಿರಿ. ಇವರಿಬ್ಬರೂ ಕುರುಬ ಸಮುದಾಯಕ್ಕೆ ಸೇರಿದವರಾಗಿರುವುದರಿಂದ ಹಿಂದುಳಿದ ವರ್ಗಗಳ ಮತಗಳು ಒಡೆಯುವ ಛಾನ್ಸು ಜಾಸ್ತಿಯಿದೆ. ಕಾಂಗ್ರೆಸ್ಸನ್ನು ಮಣಿಸಲೆಂದೇ ವೈಟ್‌ಹೌಸ್‌ನ ಹೆಚ್.ಜಿ.ರಾಮುಲು ಅವರಿಂದ ಸುಫಾರಿ ಪಡೆದಿರುವ ಕರಿಯಣ್ಣ ಸಂಗಟಿ ಗಣನೀಯ ಪ್ರಮಾಣದಲ್ಲಿ ಕಾಂಗ್ರೆಸ್‌ನ ಓಟ್ ಬ್ಯಾಂಕಿಗೆ ಕೈಹಾಕುವ ನಿರೀಕ್ಷೆಯಿದೆ. ಹಾಗೇನಾದರೂ ಆದರೆ ಸಂಗಣ್ಣ ಕರಡಿ ಗೆದ್ದುಬರಬಹುದು. ಅಳವಂಡಿ, ಕೊಪ್ಪಳ, ಗಿಣಿಗೇರಿ ಭಾಗದಲ್ಲಿ ಕಾಂಗ್ರೆಸ್ಸಿಗೆ ಉತ್ತಮ ವಾತಾವರಣ ಇದೆ. ಕೊಪ್ಪಳಕ್ಕೆ ಸಿದ್ದರಾಮಯ್ಯ, ಸೋನಿಯ, ಇಬ್ರಾಹಿಂ ಬಂದು ಹೋದರೆ ಕಾಂಗ್ರೆಸ್‌ಗೆ ಒಂದಿಷ್ಟು ಹುರುಪು ಬರಬಹುದು. ಮೇ 14ರ ತನಕ ಕ್ಷೇತ್ರದ ಕುರುಬ, ಮುಸ್ಲಿಮ್ ಮತಗಳು ಚದುರದಂತೆ ನೋಡಿಕೊಂಡರೆ ಕಾಂಗ್ರೆಸ್‌ನ ಹಾದಿ ಸುಗಮವಾಗಲಿದೆ. ಅಸಲಿಗೆ ಕ್ಷೇತ್ರದ ಹಣೆಬರಹ 34 ಸಾವಿರದಷ್ಟಿರುವ ಮುಸ್ಲಿಮ್ ಮತಗಳ ಮೇಲೆ ನಿರ್ಧಾರವಾಗಿರುವುದಂತೂ ಸತ್ಯ ಇವು ಈ ಎರಡು ಪಕ್ಷಗಳಲ್ಲಿ ಯಾರ ಕಡೆ ಒಲಿಯುತ್ತವೆಯೋ ಅವರೆ ವಿನ್!


ಸಂಗಣ್ಣ ಕರಡಿ

ಇನ್ನು ಬಜೆಪಿ ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲದ ಪರಿಸ್ಥಿತಿಯಲ್ಲಿದೆ. ನಿರ್ಣಾಯಕವಾಗಿರುವ ಮುಸ್ಲಿಮ್ ಮತಗಳಲ್ಲಿ ಒಂದೂ ಅದರ ಪಾಲಾಗುವುದಿಲ್ಲ, ಬಜೆಪಿಯಿಂದ ಸ್ಪರ್ಧಿಸಿರುವ ಅಂದಪ್ಪ ಬಹಳ ಎಂದರೆ 20 ಸಾವಿರದಷ್ಟು ಮತ ಬಾಚಿಕೊಳ್ಳಬಹುದು. ರೈತ ಸಂಘದ ವೀರಸಂಗಯ್ಯ, ಬಿಎಸ್‌ಪಿಯ ಸಂಗಪ್ಪ ವಕ್ಕಳದ ಸ್ಪರ್ಧೆಯಲ್ಲಿದ್ದಾರಾದರೂ ಅವರ ಪರಿಸ್ಥಿತಿ ಕಷ್ಟದಲ್ಲಿದೆ.

ಕೊಪ್ಪಳ ಜಿಲ್ಲೆ: ಕಾಂಗ್ರೆಸ್-ಜೆಡಿಎಸ್ ನಡುವೆ ಹಣಾಹಣಿ

ಬಿಜೆಪಿಗೆ ಮೂರನೇ ಸ್ಥಾನ

ಎರಡನೇ ಹಂತದ ಚುನಾವಣೆಗೆ ಸಿದ್ಧವಾಗುತ್ತಿರುವ ಕೊಪ್ಪಳ ಜಿಲ್ಲೆಯಲ್ಲೀಗ ಚುನಾವಣಾ ಚಿತ್ರಣ ನಿಧಾನಕ್ಕೆ ಸ್ಪಷ್ಟಗೊಳ್ಳುತ್ತಿದೆ. ಈಗಿರುವ ಪರಿಸ್ಥಿತಿಯನ್ನು ಇಟ್ಟುಕೊಂಡು ಹೇಳುವುದಾದರೆ ಜಿಲ್ಲೆಯಲ್ಲಿ ನೇರ ಹಣಾಹಣಿ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ನಡುವೆಯೇ ಇದ್ದು ಬಿಜೆಪಿ ಮೂರನೇ ಸ್ಥಾನಕ್ಕೆ ತೃಪ್ತಿ ಪಟ್ಟುಕೊಳ್ಳಬೇಕಿದೆ. ಜಿಲ್ಲೆಯಲ್ಲಿ ಒಟ್ಟು ಐದು ಕ್ಷೇತ್ರಗಳಿದ್ದು ಕಾಂಗ್ರೆಸ್ ಮತ್ತು ಜೆಡಿಎಸ್‌ಗಳು ತಲಾ ಎರಡರಿಂದ ಮೂರು ಕ್ಷೇತ್ರಗಳನ್ನು ಬಾಚಿಕೊಳ್ಳುವ ನಿರೀಕ್ಷೆಯಿದ್ದು ಬಿಜೆಪಿ ಒಂದರಿಂದ ಎರಡು ಕ್ಷೇತ್ರಗಳಲ್ಲಿ ಜಯ ಸಾಧಿಸಬಹುದು.

ಗಂಗಾವತಿ: ಅನ್ಸಾರಿಗೆ ವಿಜಯದ ಹಾರ!


ಅನ್ಸಾರಿ


ಭತ್ತದ ಕಣಜವೆಂದೇ ಪ್ರಸಿದ್ಧವಾಗಿರುವ ಗಂಗಾವತಿಯಲ್ಲಿ ಜೆಡಿಎಸ್‌ನ ಇಕ್ಬಾಲ್ ಅನ್ಸಾರಿಯದ್ದು ಎಂದೂ ಬತ್ತದ ಹವಾ. ಬಜೆಪಿಯ ಟಿಕೆಟ್ ಲಿಂಗಾಯತರಿಗೇ ಬೇಕು ಅಂದಿದ್ದವರಲ್ಲಿ ಯಾರೂ ಈಗ ಬಜೆಪಿ ಅಭ್ಯರ್ಥಿ ಪರಣ್ಣ ಮನವಳ್ಳಿ ಪರ ಕಾಣಿಸಿಕೊಳ್ಳುತ್ತಿಲ್ಲ. ಇನ್ನು ಕಾಂಗ್ರೆಸ್‌ನ ಹಿಂದುಳಿದ ವರ್ಗದ ಸಾವೇಣಿ ನಾಗಪ್ಪ ಈಗಾಗಲೇ ಸೋಲೊಪ್ಪಿಕೊಂಡು "ನಾನು ಸೋಲುತ್ತೇನೆ, ಆದರೂ ನನ್ನ ಕೊರಳಿಗೆ ಟಿಕೆಟ್ ತಂದು ಕಟ್ಟಿದ್ದಾರೆ. ಏನು ಮಾಡಲಿ?" ಎಂದು ಆತ ಅಳುತ್ತಿದ್ದರೆ ಮಲ್ಲಿಕಾರ್ಜುನಪ್ಪ ನಗುತ್ತಿದ್ದಾನೆ. ಕುರುಬರ ನಾಗಪ್ಪನನ್ನು ಬಳಸಿಕೊಂಡು ಅನ್ಸಾರಿಯ ಜೊತೆ ನಾಗಪ್ಪನನ್ನೂ ಸೋಲಿಸುವ ಪ್ಲಾನ್ ಹಾಕಿರುವ ರಾಮುಲು ಸಿದ್ದರಾಮಯ್ಯನವರನ್ನು ಕರೆಸುತ್ತಿದ್ದಾನೆ.

ಒಂದು ಲಕ್ಷ ಎಂಭತ್ತೆರಡು ಸಾವಿರ ಮತಗಳಿರುವ ಗಂಗಾವತಿ ಕ್ಷೇತ್ರಕ್ಕೆ ಹೊಸದಾಗಿ ಸೇರಿರುವ ಕೊಪ್ಪಳದ ಇರಕಲ್ಲಗಡ ಹೋಬಳಿಯಲ್ಲಿ 60 ಸಾವಿರ ಮತಗಳಿವೆ. ಅವು ಅನ್ಸಾರಿ ವಶವಾಗದಂತೆ ತಡೆಯುವಲ್ಲಿ ಖುದ್ದು ಜೆಡಿಎಸ್‌ನ ಕೊಪ್ಪಳದ ಅಭ್ಯರ್ಥಿ ಸಂಗಣ್ಣ ಕರಡಿಯೇ ಪ್ರಸನ್ನ ಗಡಾದನನ್ನು ಕಟ್ಟಿಕೊಂಡು ಓಡಾಡುತ್ತಿದ್ದಾನೆ. ತನ್ನದೇ ಪಕ್ಷವನ್ನು ಸೋಲಿಸುವುದಕ್ಕೆ ಕರಡಿ ಕೈಯಾಡಿಸುತ್ತಿರುವುದನ್ನು ಕಂಡು ದೇವೇಗೌಡರೇ 'ಮೊದಲು ನಿನ್ನ ಕ್ಷೇತ್ರದಲ್ಲಿ ಗೆಲುವನ್ನು ಖಾತ್ರಿ ಮಾಡಿಕೊ, ಆನಂತರ ಬೇರೆಯವರ ಕ್ಷೇತ್ರದಲ್ಲಿ ಕೈಯಾಡಿಸು' ಎಂದು ಝಾಡಿಸಿದ್ದಾರೆ. ಕಾಂಗ್ರೆಸ್‌ನ ಓಟುಗಳು, ಅನ್ಸಾರಿಯ ಅಭಿವೃದ್ಧಿ ಕೆಲಸಗಳೇ ಅವನನ್ನು ಗೆಲ್ಲಿಸುತ್ತವೆಯಾದರೂ ಆತ ಮೈಮರೆತು ಕೂರುವಂತಿಲ್ಲ. ಹೀಗಾಗಿ ಇಲ್ಲಿ ಜೆಡಿಎಸ್‌ನ ಗೆಲುವು ನಿಶ್ಚಿತವಾಗಿದ್ದು ಬಜೆಪಿ ಮತ್ತು ಕಾಂಗ್ರೆಸ್‌ಗಳು ಎರಡು ಮತ್ತು ಮೂರನೇ ಸ್ಥಾನಕ್ಕೆ ದೂಡಲ್ಪಡುತ್ತವೆ.

...ಮೂರು



...ಮೂರು ಕ್ಷೇತ್ರದಲ್ಲಿ ಜಿಲ್ಲೆಯಲ್ಲೇ ಅತೀ ಹೆಚ್ಚು ಎಂಟು ... ಚುನಾವಣಾ ಕಣದಲ್ಲಿದ್ದಾರೆ. ...ದ ಶಾಸಕ ಕಾಂಗ್ರೆಸ್‌ನ ಗೋಪಾಲ ಪೂಜಾರಿ ಹಾಗೂ ...ದ ಕೆ. ಲಕ್ಷ್ಮೀನಾರಾಯಣ ಎಂಬ ಉದ್ಯಮಿ ನಡುವೆ ನೇರ ಜಿದ್ದಾಜಿದ್ದಿ ಏರ್ಪಟ್ಟಿದೆ. ಸಿಪಿಐ(ಎಂ)ನ ದಾಸ ಭಂಡಾರಿ, ಬಿಎಸ್‌ಪಿಯ ಉದಯಕುಮಾರ ತಲ್ಲೂರು, ಜೆಡಿಎಸ್‌ನ ಶಿರಿಯಾರ್ ಮುದ್ದಣ್ಣ ಶೆಟ್ಟಿ ಇವರ್‍ಯಾರು ಗೆಲ್ಲುವ ಅಭ್ಯರ್ಥಿಗಳಲ್ಲವಾದರೂ, ಕಾಂಗ್ರೆಸ್ಸನ್ನು ಸೋಲಿಸುವ ಸಾಮರ್ಥ್ಯ ಇರುವವರು.



ಕಳೆದ ಬಾರಿ ಕಾಂಗ್ರೆಸ್‌ಗೆ ಬಿದ್ದ ಒಂದಷ್ಟು ದಲಿತ ಓಟುಗಳನ್ನು ಬಿಎಸ್‌ಪಿ, ಬಂಟರ ಮತಗಳು ಮುದ್ದಣ್ಣ ಶೆಟ್ಟರ, ಹಾಗೂ ...ಥೀಯರ ಓಟು ಸಿಪಿಐ(ಎಂ) ಪಾಲಿಗೆ ಬೀಳುವುದರಿಂದ ಗೋಪಾಲ ಪೂಜಾರಿ ...ಫುಲ್‌ಟೈಂ ಹೋಟೆಲ್ ಉದ್ಯಮಕ್ಕೆ ಮರಳಬೇಕಾಗಿ ಬರುವ ಸಾಧ್ಯತೆಗಳಿವೆ. ಕ್ರಿಮಿನಲ್ ...ಯಾಗಿ ಗುರುತಿಸಲ್ಪಟ್ಟಿರುವ ಲಕ್ಷ್ಮೀನಾರಾಯಣ ಜೈಲಿನ ಬದಲು ವಿಧಾನಸೌಧ ...ಸಿದರೆ ಆಶ್ಚರ್ಯಪಡಬೇಕಾದುದಿಲ್ಲ. ಕಾಂಗ್ರೆಸ್-ಬಿಜೆಪಿ ಅಭ್ಯರ್ಥಿಗಳಿಬ್ಬರೂ ...ಧಿಪತಿಗಳಾಗಿದ್ದು ಕ್ಷೇತ್ರದಾದ್ಯಂತ ಮತದಾರರನ್ನು ಸೆಳೆಯಲು ಹಣದ ಥೈಲಿಯೊಂದಿಗೆ ... ಪ್ರಯತ್ನದಲ್ಲಿ ತೊಡಗಿದ್ದಾರೆ.

...ರ್ಕಳ



...ರ್ಕಳ ಕ್ಷೇತ್ರದಲ್ಲಿ ಇಬ್ಬರೇ ಇಬ್ಬರು ನೇರ ಹಣಾಹಣಿಯಲ್ಲಿದ್ದಾರೆ. ... ಮಾಜಿ ಶಾಸಕರು. ಬಿಜೆಪಿಯಿಂದ ಉಗ್ರ ಹಿಂದೂತ್ವವಾದಿ ...ಕುಮಾರ್, ಕಾಂಗ್ರೆಸ್‌ನಿಂದ ಸರಳ-ಸಜ್ಜನ ಗೋಪಾಲ ...


...ಲೇಜು ವಿದ್ಯಾರ್ಥಿನಿ ಸುಚೇತಾ ಎಂಬಾಕೆಯ ಅತ್ಯಾಚಾರ ...ಕೊಲೆ ಪ್ರಕರಣವನ್ನೇ ಚುನಾವಣಾ ಪ್ರಚಾರದ ವಿಷಯವನ್ನಾಗಿ ... ಎಂಎಲ್‌ಎ ಆದ ಸುನೀಲ್ ಗೆದ್ದ ನಂತರ ಸುಚೇತಾ ...ವನ್ನೇ ಮರೆತು ಬಿಟ್ಟು ಕುಖ್ಯಾತಿಗಳಿಸಿದ್ದಾರೆ. ...ಸಕನಾದ ಬಳಿಕ ಕಾರ್ಯಕರ್ತರಿಂದ ದೂರವಾದ ಸುನೀಲ್ ಕುಮಾರ್ ಭ್ರಷ್ಟಾಚಾರದ ...ಕವೂ ಮತದಾರರ ಆಕ್ರೋಶಕ್ಕೆ ಗುರಿಯಾಗಿಬಿಟ್ಟಿದ್ದಾನೆ. ...ೋಮು ಪ್ರಚೋದಕ ಭಾಷಣಗಾರ ಎನ್ನುವುದನ್ನು ಬಿಟ್ಟರೆ ಸುನೀಲ್‌ಕುಮಾರ್ ಶಾಸಕಗಿರಿಯ



ಸಾಧನೆ ಶೂನ್ಯ. ಮಾಜಿಯಾದರೂ ಹಾಲಿಯಂತೆ ಮತದಾರರ ನಿರಂತರ ಸಂಪರ್ಕದಲ್ಲಿದ್ದ ಕಾಂಗ್ರೆಸ್‌ನ ಗೋಪಾಲ ಭಂಡಾರಿ, ಸುನೀಲ್ ಕುಮಾರ್‌ನ ಬಾನಗಡಿಗಳನ್ನು ಕಾಲಕಾಲಕ್ಕೆ ಬಯಲುಪಡಿಸುತ್ತಾ ರಾಜಕೀಯ ಪ್ರಬುದ್ಧತೆ ಪ್ರದರ್ಶಿಸಿ ಸಾರ್ವಜನಿಕರ ವಿಶೇಷ ಅಭಿಮಾನಕ್ಕೆ ಪಾತ್ರರಾಗಿದ್ದಾರೆ.

ಬಿಜೆಪಿಯಲ್ಲಿನ ಒಡಕು ಮತ್ತು ದಲಿತ, ಶೂದ್ರ ಹಾಗೂ ಅಲ್ಪಸಂಖ್ಯಾತರಲ್ಲಿ ಮೂಡಿದ ಬಿಜೆಪಿ ವಿರೋಧಿಭಾವನೆಯ ಪರಿಣಾಮ ಈ ಬಾರಿಯ ಫಲಿತಾಂಶದಲ್ಲಿ ಕಂಡುಬರಲಿದೆ. ■

ಕುಂದಾಪುರ




ಕುಂದಾಪುರ ವಿಧಾನಸಭಾ ಕ್ಷೇತ್ರ ಈ ಬಾರಿ ಅತಿರಥ-ಮಹಾರಥರ ನೇರ ಸ್ಪರ್ಧೆಗೆ ಆಖಾಡ ಸಿದ್ಧವಾಗಿದೆ. ಇಬ್ಬರೂ ಬಂಟ ಸಮುದಾಯಕ್ಕೆ ಸೇರಿದವರು. ಬಂಧುಗಳು ಬೇರೆ.

ಬ್ರಹ್ಮಾವರ ಕ್ಷೇತ್ರದಿಂದ ನಿರಂತರವಾಗಿ ಗೆದ್ದುಕೊಂಡು ಬಂದ ಜಯಪ್ರಕಾಶ್ ಹೆಗ್ಡೆ ಕಾಂಗ್ರೆಸ್‌ನಿಂದಲೂ, ಕುಂದಾಪುರ ಕ್ಷೇತ್ರದಿಂದ ನಿರಂತರವಾಗಿ ಗೆಲ್ಲುತ್ತಾ ಬಂದ ಹಾಲಾಡಿ ಶ್ರೀನಿವಾಸ ಶೆಟ್ಟಿ ಬಿಜೆಪಿಯಿಂದಲೂ ಅದೃಷ್ಟ ಪರೀಕ್ಷೆ ಮಾಡುತ್ತಿದ್ದಾರೆ.

ಕುಂದಾಪುರ ಕ್ಷೇತ್ರ ಬಿಜೆಪಿ ಹಾಗೂ ಹಾಲಾಡಿಯವರ ಭದ್ರಕೋಟೆ. ಬ್ರಹ್ಮಾವರ ಕ್ಷೇತ್ರದ ಶೇ. 30ರಷ್ಟು ಭಾಗ ಕುಂದಾಪುರ ಕ್ಷೇತ್ರಕ್ಕೆ ಸೇರ್ಪಡೆಯಾಗಿರುವುದು ಮಾತ್ರ ಹೆಗ್ಡೆಯವರಿಗೆ ಸಮಾಧಾನ ಕೊಡುವ ಅಂಶ.

ಹಾಗೆ ನೋಡಿದರೆ, ಜಯಪ್ರಕಾಶ ಹೆಗಡೆಯವರು ಇದ್ದುದರಲ್ಲಿ ಒಳ್ಳೆಯ ರಾಜಕಾರಣಿ. ಅವರು ಈ ತನಕ ಪ್ರತಿನಿಧಿಸುತ್ತಿದ್ದ ಬ್ರಹ್ಮಾವರ ಕ್ಷೇತ್ರದಲ್ಲಿ ತೀರಾ ಕಡಿಮೆ ಪ್ರಮಾಣದ ಕೋಮು ಗಲಭೆಗಳು ನಡೆದಿರುವುದು.




ತಮ್ಮ ವೈಯಕ್ತಿಕ ಆಸಕ್ತಿಯಿಂದ ಉಳಿದೆಲ್ಲ ಕ್ಷೇತ್ರಗಳಿಗಿಂತ ಹೆಚ್ಚಿನ ಅಭಿವೃದ್ಧಿಯನ್ನು ಮೂಡಿಸಿರುವುದು ಅವರ ವ್ಯಕ್ತಿತ್ವವನ್ನು ಎತ್ತಿ ತೋರಿಸುತ್ತವೆ.

ಈ ಹಿಂದೆ ಬ್ರಹ್ಮಾವರದಲ್ಲಿ ಚರ್ಚಿನ ಪಾದ್ರಿಯೊಬ್ಬ ಹುಡುಗಿಯನ್ನು ಅತ್ಯಾಚಾರ ಮಾಡಿದ ಎಂದು ಆರೋಪಿಸಿ ಬಿಜೆಪಿ ಮತ್ತು ಚೆಡ್ಡಿಗಳು ಕೋಮುಗಲಭೆ ಹಚ್ಚಲು ಪ್ರಯತ್ನಿಸಿದ್ದರು. ಆಗ ಇದೇ ಜಯಪ್ರಕಾಶ ಹೆಗಡೆ ಎಲ್ಲ ರಾಜಕೀಯ ಪಕ್ಷಗಳ ಮುಖಂಡರ ಸಭೆ ನಡೆಸಿ ಕೋಮುಗಲಭೆಯಾಗದಂತೆ ನೋಡಿಕೊಂಡರು.

ಇದಕ್ಕೂ ಮೊದಲು ಆದಿ ಉಡುಪಿ ಬೆತ್ತಲೆ ಪ್ರಕರಣ ನಡೆದಾಗಲೂ ವಿಧಾನಸಭೆಯಲ್ಲಿ ಈ ವಿಚಾರದ ಬಗ್ಗೆ ದನಿ ಎತ್ತಿದ್ದರು. ಭಜರಂಗದಳದ ಕಾರ್ಯಕರ್ತರು ಕರಾವಳಿಯಲ್ಲಿ ಸಂಸ್ಕೃತಿ ಪೊಲೀಸಂತೆ ವರ್ತಿಸುತ್ತಾ ಕಾನೂನನ್ನು ಕೈಗೆತ್ತಿಕೊಳ್ಳುತ್ತಿರುವುದರ ವಿರುದ್ಧವೂ ಹೆಗಡೆಯವರು ವಿಧಾನಸಭೆಯಲ್ಲಿ ದನಿ ಎತ್ತಿದ್ದಾರೆ. ಆದ್ದರಿಂದ ಇಂತಹ ರಾಜಕಾರಣಿ ಗೆಲ್ಲಬೇಕಿರುವುದು ಅವಶ್ಯವಾಗಿದೆ. ಗೆಲುವು ಅವರ ಕಡೆ ವಾಲಿರುವುದು ಸ್ಪಷ್ಟವಾಗಿದೆ. ■

ಯಲಬುರ್ಗಿ: ...ಯುವಿನಂಚಿನಲ್ಲಿ ಅಮರಗುಂಡಪ್ಪ



...ಂಗ್ರೆಸ್‌ನಿಂದ ಸ್ಪರ್ಧಿಸಿರುವ ಬಸವರಾಜ್ ...ಡ್ಡಿ ಕ್ಷೇತ್ರದಲ್ಲಿ ತನ್ನ ಪರವಾಗಿ ಪ್ರಚಾರ ...ವುದನ್ನು ಬಿಟ್ಟು ಮೊದಲನೇ ಹಂತದಲ್ಲಿ ...ನಣೆಗೆ ಹೋದ ಬೆಂಗಳೂರು ಗ್ರಾಮಾಂತರ ... ರಾಮನಗರದಲ್ಲಿ ಮಾಜಿ ಸಿ.ಎಂ. ...ಸ್ವಾಮಿಯ ಎದುರು ಸ್ಪರ್ಧಿಸಿರುವ ಮಮತಾ ...ಯ ಪರವಾಗಿ ಪ್ರಚಾರ ಮಾಡಿದ. ಹೀಗಾಗಿ ...ಮೇ ಹತ್ತರ ನಂತರವೇ ತನ್ನ ಕ್ಷೇತ್ರಕ್ಕೆ ...ಗುವ ಲಕ್ಷಣಗಳಿವೆ.

...ತಿ ಬೆಂಬಲವಿಲ್ಲದೆ ಕೇವಲ ಅನುಕಂಪವನ್ನೇ ನೆಚ್ಚಿಕೊಂಡಿರುವ ಬಿಜೆಪಿಯ ...ಗೆ ಮತ್ತು ಕಾಂಗ್ರೆಸ್‌ನ ರಾಯರೆಡ್ಡಿಗೆ ದಿಗಿಲು ಹುಟ್ಟಿಸಿರುವುದು ...ಸ್‌ನ ಅಮರಗುಂಡಪ್ಪ, ಇಲ್ಲಿ ಲಿಂಗಾಯತ ಮತಗಳೇ ...ಯಕವಾಗಿರುವುದರಿಂದ ಮೂರೂ ಪಕ್ಷಗಳು ಲಿಂಗಾಯತ ಅಭ್ಯರ್ಥಿಗಳನ್ನೇ ...ಸಿವೆ. ಆದರೆ ಲಿಂಗಾಯತರಲ್ಲಿಯೂ ಗಾಣಿಗರ ಮತಗಳು ಜಾಸ್ತಿ ...ದರಿಂದ ಜೆಡಿಎಸ್‌ನಿಂದ ಸ್ಪರ್ಧಿಸಿರುವ ಗಾಣಿಗರ ಸಮುದಾಯದ ...ಗುಂಡಪ್ಪನಿಗೆ ಹೆಚ್ಚಿನ ಲಾಭವಾಗಲಿದೆ.

...ದರೆ ರಾಯರೆಡ್ಡಿಯ ದುರಾಡಳಿತದ ವಿರೋಧಿ ಅಲೆಯೇನಾದರೂ ... ಕಡೆ ವಾಲಿದರೆ ಅದು ಜೆಡಿಎಸ್‌ಗೆ ಹಾನಿ ಮಾಡಲಿದೆ. ಸದ್ಯಕ್ಕಿಲ್ಲಿ ... ಸ್ಪರ್ಧೆಯ ವಾತಾವರಣವಿದ್ದು ಅಮರಗುಂಡಪ್ಪನ ಪರ ವಿಜಯಲಕ್ಷ್ಮಿ ... ನಿರೀಕ್ಷೆಗಳೇ ಜಾಸ್ತಿಯಿವೆ.

ಕುಷ್ಟಗಿ: ಹಣ ಹರಿಸುತ್ತಿರುವ ಬಯ್ಯಾಪುರ್




ಇಲ್ಲಿ ಥೇಟ್ ಬಳ್ಳಾರಿಯ ಗಣಿಧಣಿಗಳ ಸ್ಟೈಲ್‌ನಲ್ಲಿ ಎಲೆಕ್ಷನ್ ಎದುರಿಸುತ್ತಿರುವುದು ಕಾಂಗ್ರೆಸ್‌ನ ಅಮರೇಗೌಡ ಬಯ್ಯಾಪುರ. ಅಂದರೆ ಹಣದ ಹೊಳೆ ಹರಿಸುವ ಮೂಲಕವೇ ಗೆಲುವನ್ನು ತನ್ನದಾಗಿಸಿಕೊಳ್ಳಲು ಈತ ಪ್ರಯತ್ನಿಸುತ್ತಿದ್ದಾನೆ. ನೀತಿಸಂಹಿತೆಯನ್ನು ಗಾಳಿಗೆ ತೂರಿ ನಲವತ್ತು ವಾಹನಗಳು ಹಳ್ಳಿಹಳ್ಳಿಗೆ ಓಡಾಡಿ ದುಡ್ಡು ಸಪ್ಲೈ ಮಾಡುತ್ತಿವೆ. ಇದರಿಂದ ಅಸಲಿಗೆ ದಿಗಿಲು ಗೊಂಡವನು ಜೆಡಿಎಸ್‌ನ ಕೆ.ಶರಣಪ್ಪ, ಬಿಜೆಪಿಯ ದೊಡ್ಡನಗೌಡನಿಗೆ ದಿಗಿಲಿದ್ದರೂ ಆತನಿಗೆ ಕುರುಬರ ಬೆಂಬಲದ್ದೇ ಭರವಸೆ.

ಕುರುಬರು ಬಿಜೆಪಿಯಲ್ಲಿದ್ದಾರೆಂಬ ಕಾರಣಕ್ಕೆ ಲಿಂಗಾಯತರು ಜೆಡಿಎಸ್ ತೆಕ್ಕೆಗೆ ಬರುತ್ತಿದ್ದಾರೆ. ಸದ್ಯಕ್ಕೆ ಇಲ್ಲಿ ಜಾತಿ ಬಲದ ದೊಡ್ಡನಗೌಡ, ಹಣ ಬಲದ ಅಮರೇಗೌಡ ಹಳೆಯ ಕೆಲಸಗಳ ಆಧಾರದ ಕೆ.ಶರಣಪ್ಪ ನಡುವೆ ತ್ರಿಕೋನ ಸ್ಪರ್ಧೆ ಏರ್ಪಡುವ ಲಕ್ಷಣಗಳಿವೆ. ಬಿಜೆಪಿ ಜುಟ್ಟು ಬ್ರಾಹ್ಮಣರ ಕೈಯಲ್ಲಿದ್ದರೆ ಜೆಡಿಎಸ್ ಹಣೇಬರಹ ಮುಸ್ಲಿಮರ ಕೈಯಲ್ಲಿದೆ.

ಇಷ್ಟಕ್ಕೂ ಹಣದ ಹೊಳೆ ಹರಿಸುತ್ತಿರುವ ಬಯ್ಯಾಪುರ್‌ಗೆ ಕಾಂಗ್ರೆಸ್‌ನ ಮತ ಬ್ಯಾಂಕ್ ಕೂಡ ಸಹಾಯಕ್ಕೆ ಬರುವುದರಿಂದ ಕ್ಷೇತ್ರ ಇವನ ಪಾಲಾಗುವ ನಿರೀಕ್ಷೆಯೇ ಜಾಸ್ತಿಯಿದೆ. ಇದು ಈಗಾಗಲೇ ಬಿಜೆಪಿ ಮತ್ತು ಜೆಡಿಎಸ್ ಪಾಳೆಯದಲ್ಲಿ ನಡುಕ ಹುಟ್ಟಿಸಿರುವುದಂತೂ ಸತ್ಯ.

ಕನಕಗಿರಿ: ಮೂಡಿಬರಲಿರುವ ಮುಕುಂದ!



...ಗೀಸಲು ಕ್ಷೇತ್ರವಾದ ಕನಕಗಿರಿಯಲ್ಲಿ ಕಾಂಗ್ರೆಸ್‌ನ ಮುಕುಂದ್ ಬಗ್ಗೆ ತಂಗಾಳಿ ಬೀಸುತ್ತಿದೆ. ಇಲ್ಲಿ ಬಿಜೆಪಿ ಚೆಡ್ಡಿಗಳು ಭಯಾನಕವಾಗಿ ...ಂಡಿದ್ದು ಬಂಡಾಯ ಅಭ್ಯರ್ಥಿ ಶಿವರಾಜ್‌ನ 'ಗಾಳಿಪಟ' ಬಿಜೆಪಿಗೆ ದೊಡ್ಡ ಹಾನಿಯುಂಟುಮಾಡಲಿದೆ. ಶಿವರಾಜ್ ತಾನು ...ಜೆಪಿಗೆ ಬೆಂಬಲಿಸುತ್ತೇನೆಂದು ಹೇಳಿರುವುದರಿಂದ ಸಹಜವಾಗಿ ಮುಸ್ಲಿಮರು ಕಾಂಗ್ರೆಸ್ ಕಡೆಗೆ ವಾಲುವಂತೆ ಮಾಡಿದೆ. ...ಲ್ಲದೆ, ಮರಳಿ ಹೋಬಳಿಯಲ್ಲಿ ಹೆಚ್ಚಿರುವ ದಲಿತರು, ಆಂಧ್ರಾವಾಲಾಗಳು ಮತ್ತು 15 ಸಾವಿರದಷ್ಟಿರುವ ಈಡಿಗ ಮತಗಳು ... ರಾಮುಲು ಮುಖ ನೋಡಿ ಕಾಂಗ್ರೆಸ್‌ಗೆ ಬರಲಿವೆ. ಇವೆಲ್ಲಾ ವಾಸ್ತವದಲ್ಲಿ ಕಾಂಗ್ರೆಸ್‌ನ ಮುಕುಂದ್‌ಗೆ ನೆರವಾಗಲಿದೆ. ...ಣಾಮದಿಯಲ್ಲಿ ಧೂಳೆಬ್ಬಿಸಿರುವ ಜೆಡಿಎಸ್ ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ. ಕಳೆದ ಬಾರಿಯ ನಿಷ್ಕ್ರಿಯ ಶಾಸಕ ವೀರಪ್ಪ ಕೆಸರಟ್ಟಿ ... ನಿಂತಿರುವುದು ಆತನಿಗೆ ಮುಳುಗು ನೀರಾಗಲಿದೆ. ಬಿಜೆಪಿ ಅಭ್ಯರ್ಥಿಗೆ ಸಾಲವೇನಿಯದ್ದೇ ಅಭಯಹಸ್ತ ...ಗಸಲು ಕ್ಷೇತ್ರವಾದರೂ ಇಲ್ಲಿ ಕಾಂಗ್ರೆಸ್-ಬಿಜೆಪಿ ನಡುವಿನ ಸ್ಪರ್ಧೆಗಿಂತ ಆಳದಲ್ಲಿ ಅದು ಎಡಗೈ-ಬಲಗೈ ನಡುವಿನ ಸ್ಪರ್ಧೆಯಾಗಿಯೇ ಪ್ರಕಟಗೊಳ್ಳುತ್ತಿದೆ. ...ಸಲು ಭೋವಿ ಜನಾಂಗದ ಶಿವರಾಜನತ್ತ ವಾಲಿದರೆ ಆತನ ಗಾಳಿಪಟ ಮೇಲೇರುತ್ತದೆ. ಮುಕುಂದ ಒಂದಿಷ್ಟು ಕಸರತ್ತು ಮಾಡಿದರೆ ಆದದ್ದೆಲ್ಲಾ ಒಳಿತೇ ... ಬರಲಿದ್ದಾನೆ.

ರಾಯಚೂರು: ಕಾಂಗ್ರೆಸ್-ಜೆಡಿಎಸ್ ಜಿದ್ದಾಜಿದ್ದಿ

ರಾಯಚೂರು: ರಾಯಚೂರಿನಲ್ಲಿ ನೇರ ಹಣಾಹಣಿ ಇರುವುದು ಕಾಂಗ್ರೆಸ್‌ನ ಸೈಯದ್ ಯಾಸೀನ್ ಹಾಗೂ ಜೆಡಿಎಸ್‌ನ ಎ. [illegible] ನಡುವೆ. ಬಿಜೆಪಿಯಿಂದ ಪಾಪಾರೆಡ್ಡಿ ಸಿಂಹಿರಾಪ [illegible] ಅತ ... ಗೆಲುವಿಗೆ ದಟ್ಟವಾದ ... ಇಲ್ಲಿ ನಗರಸಭೆಯ ಅಧ್ಯಕ್ಷನಾಗಿದ್ದ ಈತನ್ನು ... ಗುಡಿಸಿ ಗುಂಡಾರ ... ಜನರು ಮರೆತಿಲ್ಲ. ಆದರೂ ಸೈಯದ್ ಯಾಸೀನ್ ಎಂಬ ಅಲ್ಪಸಂಖ್ಯಾತ ಅಭ್ಯರ್ಥಿ ಗೆಲ್ಲಬಹುದಾಗಿದ್ದರೂ ಬಿಎಸ್‌ಪಿಯಿಂದ ಸ್ಪರ್ಧಿಸಿರುವ ... ಅಂಜನೇಯ ಅಲ್ಪಸಂಖ್ಯಾತರ ಬಹುತೇಕ ಓಟುಗಳನ್ನು ಕಬಳಿಸಬಲ್ಲ. ಆಗರ್ಭ ಶ್ರೀಮಂತರಾಗಿರುವ ಅಂಜನೇಯ ಸಮಯ ಸಂದರ್ಭ ಬಂದಾಗಲೆಲ್ಲ ಹಿಂದುಳಿದ ಅಲ್ಪಸಂಖ್ಯಾತರಿಗೆ ಸಹಾಯ ಹಸ್ತ ಚಾಚುವ ವ್ಯಕ್ತಿಯಾಗಿದ್ದು ಗೆಲ್ಲುವುದು ಕಷ್ಟ.

ಸಿಂಧನೂರು: ಮೂಲ ಜನತಾ ಪರಿವಾರದವರಾದ ... ಹುರಿಯಾಳಾಗಿರುವ ಬಾದರ್ಲಿ ಹಂಪನಗೌಡ ... ಅಭ್ಯುದಯವಾಗಿದ್ದನು. ಹೀಗಾಗಿ ಈತನ ಬಗ್ಗೆ ... ಇಲ್ಲ. ಅಲ್ಲದೆ ವಿರೂಪಾಕ್ಷಪ್ಪ ಈತನ ಕೈ ಬಿಟ್ಟಿದ್ದಾನೆ. ಬಿಜೆಪಿಯಿಂದ ಸ್ಪರ್ಧಿಸಿರುವ ಮಾಜಿ ಶಾಸಕ ಆರ್. ನಾರಾಯಣಪ್ಪನ ನಡುವೆ ಸ್ಪರ್ಧೆ ಇದೆ. ಜನಸಾಮಾನ್ಯರ ಜೊತೆ ಸಂಪರ್ಕ ಇದ್ದ ನಾರಾಯಣಪ್ಪನನ್ನು ಗೆಲಿಸುವುದಕ್ಕಿಂತ ಜೆಡಿಎಸ್‌ನ ನಾಡಗೌಡನನ್ನು ಚುನಾಯಿಸುವುದೇ ಮೇಲೆಂದು ಇಲ್ಲಿನ ಜನ ಬಗೆದಿದ್ದಾರೆ. ಆದರೂ ಲಿಂಗಾಯತರು ಹಾಗೂ ಕುರುಬರು ಹೆಚ್ಚಾಗಿರುವುದರಿಂದ ಅವರು ಕೊನೆಯ ಗಳಿಗೆಯಲ್ಲಿ ಯಾವ ಪಕ್ಷದ ಕಡೆ ವಾಲುತ್ತಾರೋ ಅವರು ಗೆಲ್ಲುತ್ತಾರೆ.

ದೇವದುರ್ಗ: ರಾಯಚೂರು ಜಿಲ್ಲೆಯ ದೇವದುರ್ಗ ಈ ಬಾರಿ ಎಸ್.ಟಿ.ಗಳ ಮೀಸಲು ಕ್ಷೇತ್ರ. ಹಾಲಿ ಸಂಸದ ಕಾಂಗ್ರೆಸ್‌ನ ವೆಂಕಟೇಶ ನಾಯಕ ತನ್ನ ಮಗ ಭಗವಂತರಾಯ ನಾಯಕನಿಗೆ ದೇವದುರ್ಗದ ಟಿಕೆಟ್ ತರುವಲ್ಲಿ ... ಆದರೆ ಆತನ ಹಲವಾರು ಪುರಾಣಗಳೇ ... ತಿಳಿದಿದ್ದವು. ತನ್ನ ಮಗನಿಗೆ ಟಿಕೆಟ್ ಕೊಡದಿದ್ದರೆ ಸರಿ, ನನಗಾದರೂ ಟಿಕೆಟ್ ಕೊಡಿ ಎಂದು ಅವಲತ್ತುಕೊಂಡು ಟಿಕೆಟ್ ಪಡೆದಿದ್ದಾನೆ ... ಮುಂದೊಂದು ವೇಳೆ ವೆಂಕಟೇಶ್ ನಾಯಕ ಗೆದ್ದು ಬಂದರೆ ದೇವದುರ್ಗ ಇವರ ಮಕ್ಕಳಿಬ್ಬರ ಕೈಯಲ್ಲಿ ಗಟ್ಟಿಯಾಗಿ ದುರ್ಗವಾಗಬಹುದು ಎಂಬ ಕಾರಣದಿಂದ ಈ ಬಾರಿ ಜೆಡಿಎಸ್‌ನ ಶಿವನಗೌಡ ನಾಯಕ್ ಗೆದ್ದು ಬರಬಹುದೆನಿಸುತ್ತದೆ.

ರಾಯಚೂರು ಗ್ರಾಮೀಣ: ... ಈಗ ಉಮೇದುವಾರನಾಗಿ ನಿಂತಿರುವ ... [illegible] ... ಟಿಕೆಟ್ ನೀಡಿದ್ದಾರೆ. ಕಾಂಗ್ರೆಸ್ ಟಿಕೆಟ್ ಹಂಚಿಕೆಯ ಗೊಂದಲದಿಂದ ... ನಾಯಕ ಆದಾಗ ತೊಡಗಾಗಲು ಹಾಕುವ ಎಲ್ಲಾ ಸಾಧ್ಯತೆಗಳಿವೆ. ... ಬಿಜೆಪಿಯ ಅಭ್ಯರ್ಥಿ ಬಸನಗೌಡ ದದ್ದಲ ಕ್ಷೇತ್ರಕ್ಕೆ ಹೊಸಬ. ... ಹರಿಸಿ, ಮಾನವಿಯ ಮಾಜಿ ಶಾಸಕ ಬಸವನಗೌಡ ... ನೆಚ್ಚಿಕೊಂಡಿರುವ ಬಿಜೆಪಿ ಇಲ್ಲಿ ಮುಂಚೂಣಿಗೆ ಬರುವುದು ... ಇಲ್ಲಿ ಜೆಡಿಎಸ್ ಅಭ್ಯರ್ಥಿಯೇ ಮೇಲುಗೈಯಾಗುವ ಸಾಧ್ಯತೆಗಳಿವೆ.

ಮಸ್ಕಿ ಲಿಂಗಸೂಗೂರು, ಮಾನ್ವಿ ಹಾಗೂ ಸಿಂಧನೂರಿನ ಕೆಲವು ಹಳ್ಳಿಗಳು ಸೇರಿ ಇದೀಗ ಹೊಸದಾಗಿ ಪುನರ್‌ವಿಂಗಡಿಸಲಾದ ಕ್ಷೇತ್ರ. ಆದ್ದರಿಂದ ಇಲ್ಲಿ ಚುನಾವಣೆಗೆ ನಿಂತಿರುವ ಅಭ್ಯರ್ಥಿಗಳೂ ಹೊಸಬರೇ ಆಗಿದ್ದಾರೆ. ಕಾಂಗ್ರೆಸ್‌ನ ತಿಮ್ಮಪ್ಪ ... ಜೆಡಿಎಸ್‌ನ ಅಯ್ಯನಗೌಡನನ್ನು ಹಿಂದಿಕ್ಕಿ, ಬಿಜೆಪಿಯ ಪ್ರತಾಪಗೌಡ ಪಾಟೀಲನ ಮೇಲುಗೈ ಆಗುವ ಸಾಧ್ಯತೆಗಳಿವೆ. ಒಂದು ವೇಳೆ ಪಕ್ಷೇತರ ... ಕುರುಬರ ಓಟುಗಳನ್ನು ಕಸಿದುಕೊಳ್ಳದೆ ಹೋದರೆ ಕಾಂಗ್ರೆಸ್ ಇಲ್ಲಿ ... ಹಾರಿಸುತ್ತದೆ.

ಲಿಂಗಸಗೂರು: ಕಾಂಗ್ರೆಸ್‌ನ ಹನುಮಂತಕುಮಾರ ಅಮರೇಶನಾಯಕನ ಇತ್ತೀಚಿಗೆ ವಿರುದ್ಧವಾಗಿ ಅಭ್ಯರ್ಥಿಯಾಗಿರುವಾತ. ಹೀಗಾಗಿ ಸಹಜವಾಗಿ ಈತ ಎರಡನೆಯ ಸ್ಥಾನ ಹೊಡೆದುಕೊಳ್ಳಬಹುದು. ಆದರೆ ಬಿಜೆಪಿಯ ಮಾನಪ್ಪ ವಜ್ಜಲನ ಹಿಂದೆ ಇತ್ತೀಚಿಗೆ ಬಿಜೆಪಿಯ ಪಾಳೆಯಕ್ಕೆ ಹೋಗಿರುವ ಬಸವರಾಜ ಪಾಟೀಲ ಅನ್ವರಿ ಬೆಂಗಾವಲಾಗಿ ನಿಂತಿರುವುದರಿಂದ, ... ಸಹಜವಾಗಿ ಬಿಜೆಪಿಯ ಕಮಲ ಅರಳಬಹುದು. ಜೊತೆಗೆ ... ಬಹುಸಂಖ್ಯಾತರಾದ ಲಿಂಗಾಯತರು ಒತ್ತರ ಕೋಮಿನವರ ... ಜಾಸ್ತಿ ಇಷ್ಟಪಡುತ್ತಾರೆ. ... ನಾಯಕ ಜೆಡಿಎಸ್‌ನಿಂದ ಸ್ಪರ್ಧಿಸಿದ್ದಾನಾದರೂ ಆತನು ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬಹುದು.

ಮಾನ್ವಿ: ಕಳೆದ ಬಾರಿ ಪರಸ್ಪರ ಎದುರಾಗಿ ಸ್ಪರ್ಧಿಸಿ ಸೋಲುಕಂಡಿದ್ದ ಮೂವರೂ ಇದೀಗ ಬಿಜೆಪಿಯ ಪಾಳೆಯಕ್ಕೆ ಬಂದು ಸೇರಿಕೊಂಡಿದ್ದಾರೆ. ಬಸನಗೌಡ ಬ್ಯಾಗವಾಟ, ಶರಣಪ್ಪಗೌಡ ಹಾಗೂ ಈಗ ಬಿಜೆಪಿಯಿಂದ ಸ್ಪರ್ಧಿಸಿರುವ ಗಂಗಾಧರ್ ನಾಯಕ ಹೀಗೆ ಮೂರು ತಕ್ಕಡಿಗಳು ಒಂದು ಕಡೆ ... [illegible] ... ಈತನ ಎದುರಾಳಿಯಾಗಿರುವ ಕಾಂಗ್ರೆಸ್‌ನ ಹಂಪಯ್ಯ ನಾಯಕ ತನ್ನ ಪಕ್ಷದವರ ಕಿತ್ತೂರಿ ಹಾಗೂ ಅಸಮಾಧಾನದ ತೂಗ ಅರಿಸುವುದರಲ್ಲಿಯೇ ಹೈರಾಣಾಗಿ ಹೋಗಿದ್ದಾನೆ. ಮಾಜಿ ಶಾಸಕ ಬೋಸರಾಜನನ್ನು ನೆಚ್ಚಿಕೊಂಡು ಹಣ್ಣಾಗಬೇಕಾಗಿದೆ. ಅಲ್ಲದೆ ಖಾಸಾ ಅಳಿಯನಾಗಿರುವ ಗಂಗಾಧರ ನಾಯಕನ ತರುಣ ಶಕ್ತಿಯ ಮುಂದೆ ಸೋಲುವ ಸಾಧ್ಯತೆಗಳು ಹೆಚ್ಚಾಗಿವೆ. ಇವರಿಬ್ಬರ ಜಗಳದಲ್ಲಿ ತಾನು ಲಾಭ ಪಡೆಯಬೇಕೆಂದು ತೊಡೆತಟ್ಟುತ್ತಿರುವ ಜೆಡಿಎಸ್‌ನ ...

■ ...ರಂಗನಾಥ

ಬೀದರ: ಬಿಜೆಪಿ ಧೂಳೀಪಟವಾಗುವುದೇ?

ಮನುಕುಲಕ್ಕಷ್ಟೆ ಅಲ್ಲ ಸಕಲ ಜೀವಾತ್ಮರಿಗೂ ಲೇಸನ್ನು ಬಯಸಿದ್ದ ಬಸವಣ್ಣನವರ ಕರ್ಮಭೂಮಿಯಾದ ಬೀದರ ಜಿಲ್ಲೆಯಲ್ಲಿ ಬಿಜೆಪಿ ಎಂಬ ಕೋಮುವಾದಿ ಪಕ್ಷ ತಲೆಯೆತ್ತುವುದಿರಲಿ, ಅದು ಅಲ್ಲಿ ಜೀವತಳೆದು ಬೆಳೆಯುವುದಕ್ಕೂ ಅವಕಾಶ ನೀಡಬಾರದು. ದುರಾದೃಷ್ಟದ ಸಂಗತಿಯೆಂದರೆ ತಿಳಿದೋ ತಿಳಿಯದೆಯೋ ಇಲ್ಲಿನ ಬಹುತೇಕ ಮಠಾಧೀಶರೆ ಬಿಜೆಪಿಯನ್ನು ತಲೆಯ ಮೇಲೆ ಹೊತ್ತುಕೊಂಡು ತಿರುಗಾಡಿದರು. ಇದನ್ನು ನೋಡಿ ನಾವೇನು ಕಮ್ಮಿ ಎಂಬಂತೆ ಇಲ್ಲಿನ ಲಿಂಗಾಯತರು ಬಿಜೆಪಿಯನ್ನು ತಮ್ಮ ಉಡಿಯಲ್ಲಿ ಕಟ್ಟಿಕೊಂಡು ತಿರುಗಾಡಿದರು. ಆದರೆ ಈ ಸಲ ಅವರನ್ನು ಮತದಾರರು ತಮ್ಮ ಕಾಲ ಕೆಳಗೆ ಹಾಕಿ ತುಳಿಯಬಲ್ಲರೆನಿಸುತ್ತದೆ. ●●

ಭಾಲ್ಕಿ


ಈಶ್ವರ ಖಂಡ್ರೆ

ಭೀಮಣ್ಣ ಖಂಡ್ರೆ ಎಂಬ ಅಖಿಲ ಭಾರತ ವೀರಶೈವ ಮಹಾಸಭೆಯ ಹಾಲಿ ಅಧ್ಯಕ್ಷ ಮತ್ತು ನಿವೃತ್ತ ರಾಜಕಾರಣಿಯ ಮಗ ಈಶ್ವರ ಖಂಡ್ರೆ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾನೆ. ಭಾಲ್ಕಿಯ ಚೆನ್ನಬಸವಪಟ್ಟದ್ದೇವರು ಸಂಸ್ಥಾಪಿಸಿ ಬೆಳೆಸಿದ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯನ್ನು ಖಂಡ್ರೆ ಅಡಪ್ ಮಾಡಿಕೊಂಡದ್ದು ಇಲ್ಲಿನ ಜನಸಾಮಾನ್ಯ ಆಕ್ರೋಶಗೊಳ್ಳಲು ಕಾರಣವಾಗಿದೆ.

ಈ ಕಾರಣಕ್ಕಾಗಿಯೆ ಕಳೆದೆರಡು ಬಾರಿಯೂ ಬಿಜೆಪಿಯ ಪ್ರಕಾಶ ಖಂಡ್ರೆ ಆಯ್ಕೆಗೊಂಡು ಬಂದಿದ್ದನಲ್ಲದೆ ಈಶ್ವರ ಖಂಡ್ರೆ ಹಾಗೂ ಆವರ ಸಹೋದರ ಮಾಜಿ ಶಾಸಕ ವಿಜಯಕುಮಾರ ಖಂಡ್ರೆಯನ್ನು ಮಕಾಡೆ ಮಲಗಿಸಿಬಿಟ್ಟಿದ್ದ. ಆದರೆ ಬದಲಾದ ರಾಜಕೀಯ ಸ್ಥಿತಿ ಹಾಗೂ ಕ್ಷೇತ್ರ ವಿಂಗಡಣೆಯಿಂದಾಗಿ ಹಿಂದೆ ಹುಲಸೂರು ಮೀಸಲು ಕ್ಷೇತ್ರದಲ್ಲಿ ಬರುತ್ತಿದ್ದ 63 ಹಳ್ಳಿಗಳು ಈಗ ಭಾಲ್ಕಿ ಮತಕ್ಷೇತ್ರಕ್ಕೆ ಸೇರ್ಪಡೆಯಾಗಿವೆ.


ಅನಿಲ ಭುಸಾರೆ

ಅಲ್ಲದೆ ಮರಾಠರವನೆ ಆಗಿರುವ ಅನಿಲ ಭುಸಾರೆ ಈ ಸಲ ಜೆಡಿಎಸ್ ಅಭ್ಯರ್ಥಿಯಾಗಿ ನಿಂತಿದ್ದಾನೆ. ಈತ ಜಿಲ್ಲಾ ಪಂಚಾಯತಿಯ ಅಧ್ಯಕ್ಷನಾಗಿದ್ದರೂ ರಾಜಕೀಯಕ್ಕೆ ಹೊಸಬ. ರಾಜಕೀಯವಾಗಿ ತನ್ನ ಛಾಪು ಬೆಳೆಸಿಕೊಂಡಿರದ ವ್ಯಕ್ತಿ. ಮುಂಬೈಯಲ್ಲಿ ವ್ಯಾಪಾರ ವಹಿವಾಟನ್ನು ಹೊಂದಿರುವ ಭುಸಾರೆಗೆ ಇಲ್ಲಿನ ರಾಜಕೀಯ ಒಂದು ಹವ್ಯಾಸವೆ ಹೊರತು ಜನಪರ ಕಾಳಜಿ ಅಲ್ಲ. ಆದರೂ ಮರಾಠರ ಓಟುಗಳನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳದೆ ಇರಲಾರ.

ಇದರಿಂದ ಚಳಿ ಬರಿಸಿಕೊಂಡಿರುವ ಪ್ರಕಾಶ ಖಂಡ್ರೆ ಸಾರ್ವಜನಿಕವಾಗಿ ಅದನ್ನು ತೋರಗೊಡದೆ ತನ್ನ ಹಿಂದೆ ಮುಂದೆ ಮರಾಠ ಜನರನ್ನು ಕರಕೊಂಡು ತಿರುಗಾಡುತ್ತಿದ್ದಾನೆ. ವ್ಯಕ್ತಿಗತವಾಗಿ ಹಾಗೂ ಕ್ಷೇತ್ರದ ದೃಷ್ಟಿಯಿಂದ ನೋಡುವುದಕ್ಕಿಂತ ಸಾರ್ವತ್ರಿಕವಾಗಿ ಬಿಜೆಪಿ ಎಂಬ ಚಿಡ್ಡಿಗಳ ಪಕ್ಷ ಹೇಗಿದೆ? ಎಂದು ತಿಳಿದು ಮತಹಾಕಿ ಇಲ್ಲಿನ ಮತದಾರ ಜಾಣತನ ಪ್ರದರ್ಶಿಸಬೇಕಿದೆ. ಅಂದಾಗ ಮಾತ್ರ ಪ್ರಕಾಶ ಖಂಡ್ರೆಯ ಲಾಡಿ ಡೀಲವಾಗುತ್ತದೆ. ಭಾಲ್ಕಿಯ ಪ್ರಜ್ಞಾವಂತ ಲಿಂಗಾಯತರು ಹಾಗೂ ಮರಾಠರು ಈ ಧೀಮಂತಿಕೆ ಮೆರೆಯುವರೆ?

ಹುಮ್ನಾಬಾದ

ಮೂರು ಸಲ ಹುಮ್ನಾಬಾದ ಕ್ಷೇತ್ರದಿಂದ ಗೆಲುವು ಸಾಧಿಸಿ ಹ್ಯಾಟ್ರಿಕ್ ಬಾರಿಸಿದ್ದ ಬಸವರಾಜ ಪಾಟೀ
ಹುಮ್ನಾಬಾದನ ಮಗ ರಾಜಶೇಖರ ಪಾಟೀಲ ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ. ಈತನ ತಂದೆಯ ದ್ವಿಮುಖ ಧೋರಣೆಗ
ಈತನಿಗೆ ಮುಳುವಾಗುವ ಸಾಧ್ಯತೆಗಳೇ ಹೆಚ್ಚು. ಬಸವರಾಜ ಪಾಟೀಲ ಹುಮ್ನಾಬಾದ ಲಿಂಗಾಯತನಾಗಿದ್ದರೂ ಪ
ಲಿಂಗಾಯತನಾಗಿ ವರ್ತಿಸಲಾರ. ಒಂದು ಸಲ ಬಸವಣ್ಣನವರನ್ನು ಕೇಂದ್ರೀಕರಿಸಿದ ಬಸವಕೇಂದ್ರದ ಜೊತೆ ಗುರುತಿಸಿಕೊಂ
ಕೆಲಸ ಮಾಡುವವನಂತೆ ಕಾಣಿಸಿಕೊಂಡರೆ ಮಗದೊಂದು ಬಾರಿ ಪಂಚಾಚಾರ್ಯರ ತಲೆಹಿಡಿಯುವ ವ್ಯಕ್ತಿಯ
ಗೋಚರಗೊಳ್ಳುತ್ತಾನೆ. ಈ ಇಬ್ಬಗೆಯ ನೀತಿಯೆ ಈತನ ಮಗನಿಗೆ ಮುಳುವಾಗುವ ಸಾಧ್ಯತೆಗಳು ಹೆಚ್ಚಾಗಿವೆ.

ಜೆಡಿಎಸ್ ಪಕ್ಷದ ರಾಜ್ಯಾಧ್ಯಕ್ಷ ಮಿರಾಜುದ್ದೀನ್ ಪಟೇಲ್ ಇಲ್ಲಿ ದೊಡ್ಡ ನಾಯಕನಾಗಿ ಬೆಳೆದಿಲ್ಲವೆನಿಸುತ್ತ
ಏಕೆಂದರೆ ಈತನ ಮಾತನ್ನು ಸ್ವತಃ ಈತನ ಸಹೋದರನೆ ಕೇಳದ ಸ್ಥಿತಿ ಇಲ್ಲಿ ನಿರ್ಮಾಣವಾಗಿದೆ. ಈಗಾಗ
ಜೆಡಿಎಸ್‌ದಿಂದ ಜಿಲ್ಲಾ ಪಂಚಾಯತಿಯ ಸದಸ್ಯನಾಗಿರುವ ನಸೀಮೋದ್ದೀನ ಪಟೇಲ್ ಬೀದರ ಸೌಥ ಕ್ಷೇತ್ರದ ಬಿಎಸ್
ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾನೆ. ಇದು ಹುಮ್ನಾಬಾದ ಮತಕ್ಷೇತ್ರದ ಮತದಾರನ ಮೇಲೆ ವಿಪರೀತ ಪರಿಣಾ
ಉಂಟುಮಾಡಿದೆ. ಹೀಗಾಗಿ ಅವರೆಲ್ಲ ಮಿರಾಜುದ್ದೀನ ಕಡೆ ವಾಲುವುದು ತುಸು ಕಷ್ಟವಾಗುತ್ತದೆ.

ಇಬ್ಬರ ಮೇಲಿನ ಸಿಟ್ಟು ಮೂರನೆಯವನಿಗೆ ಆಯ ಎಂಬಂತೆ ಬಿಜೆಪಿಯ ಸುಭಾಸ ಕಲ್ಲೂರಗೆ ಇವೆಲ್ಲ ಪ್ಲ
ಪಾಯಿಂಟ್ ಆಗುವ ಸಾಧ್ಯತೆಗಳಿವೆ. ಆದರೆ ಬಸವಣ್ಣನವರನ್ನು ಕೇಂದ್ರವಾಗಿಟ್ಟುಕೊಂಡು ಜನರಲ್ಲಿ ಜಾಗೃತಿ ಉಂಟುಮಾಡು
ಬಸವಕೇಂದ್ರದ ಪದಾಧಿಕಾರಿಗಳು ಮತ್ತು ಸದಸ್ಯರು ಬಿಜೆಪಿಯನ್ನು ಅಪ್ಪಿಕೊಳ್ಳುವಷ್ಟು ದಡ್ಡರಂತೂ ಅಲ್ಲವಲ್ಲ
ಎಂಬುದೆ ಸಮಾಧಾನದ ಸಂಗತಿಯಾಗಿದೆ.

ಬಸವಕಲ್ಯಾಣ


ಖೂಬಾ


ಕಳೆದ ಚುನಾವಣೆಯಲ್ಲಿ ಜೆಡಿಎಸ್ ಅಲೆಯ ಮೇಲೆ ತೇಲಿಬಂದ ಮಲ್ಲಿಕಾರ್ಜುನ ಖೂಬಾ ಎಂಬ ಶಾಸಕನನ್ನು ನಾವು ಯಾಕಾದರೂ ಆಯ್ಕೆ ಮಾಡಿಕೊಂಡೆವೋ ಎಂದು ಬಸವಕಲ್ಯಾಣದ ಜನರೆಲ್ಲ ಪಶ್ಚಾತ್ತಾಪ ಪಟ್ಟಿದ್ದಾರೆ. ಸರಕಾರಿ ನೌಕರರಂತೂ ಈತ ಕೊಟ್ಟ ಕಿರುಕುಳಕ್ಕೆ ಹಾಗೂ ಹಫ್ತಾ ವಸೂಲಿಗೆ ಹಿಡಿಶಾಪ ಹಾಕಿದ್ದಾರೆ. ಜಿಲ್ಲಾಧಿಕಾರಿ ಹರ್ಷ ಗುಪ್ತರ ಜನಪರ ನಿಲುವುಗಳನ್ನೂ ತನ್ನ ಮೂಗಿನ ನೇರಕ್ಕೆ ವಿಶ್ಲೇಷಿಸುತ್ತ ಜಾಣತನದ ಪೋಸು ನೀಡಲು ಹೋಗಿ ಖೂಬಾ ಫ್ಲಾಪ್ ಆದ ಸಂಗತಿಯನ್ನು ಯಾರೂ ಮರೆತಿಲ್ಲ. ಹೀಗಾಗಿ ಈ ಸಲದ ಚುನಾವಣೆಯಲ್ಲಿ ಈತನಿಗೆ ಬೀಳುವ ಮತಗಳು ಖೂಬಾನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗುತ್ತದೆ.

ಬಸವರಾಜ ಪಾಟೀಲ ಅಟ್ಟೂರ ಹಿಂದೆ ಇದೇ ಕ್ಷೇತ್ರದಲ್ಲಿ ಮೂರು ಬಾರಿ ಆಯ್ಕೆಯಾಗಿ ಹ್ಯಾಟ್ರಿ
ಸಾಧಿಸಿದವರು. ಆದರೆ ಈ ಬಾರಿ ಅವರು ಅಪ್ಪಿಕೊಂಡಿರುವ ಪಾರ್ಟಿಯವರ ವಿಚಾರ, ಲಿಂಗಾಯತ ತತ್ವಗಳ
ನಾಶ ಮಾಡುವಂಥದ್ದು. ಅಟ್ಟೂರರ ಬಗೆಗೆ ಜನಸಾಮಾನ್ಯರಿಗೆ ಎಷ್ಟೇ ಸಿಂಪತಿ ಇದ್ದರೂ ಅವರ
ಒಮ್ಮೆಂದೊಮ್ಮೆ ಚಿಡ್ಡಿ ಏರಿಸಿಕೊಂಡು ನಿಂತದ್ದು ನುಂಗಲಾಗದ ತುತ್ತಾಗಿದೆ. ಓಬಿಸಿ, ಕುರುಬರ
ಮರಾಠರು ಹಾಗೂ ಬಸವ ವಿಚಾರಧಾರೆಯ ಕೆಲವರು ಅಟ್ಟೂರಗೆ ಕೈ ಕೊಟ್ಟರೆ ಕಮಲ ಬಾ
ಕಮರಿಹೋಗುತ್ತದೆ. ಹೀಗಾಗಿ ಇಲ್ಲಿ ಮತ್ತೆ ಬಿಜೆಪಿಯ ಮಾರುತಿ ಮೂಳೆ ತಮ್ಮ
ಬಲಪಡಿಸಿಕೊಳ್ಳುತ್ತಾರೆನಿಸುತ್ತದೆ.


ಚುನಾವಣೆ 2008

ಕಲಬುರ್ಗಿ: ಕಾಂಗ್ರೆಸ್‌ಗೆ ಕವಿದಿರುವ ಮಂಕು

ಆಳಂದ


ಸುಭಾಷ ಗುತ್ತೇದಾರ


ಆಳಂದ ಮತಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಬಿ.ಆರ್. ಪಾಟೀಲ ಹೆಸರಿಗೆ ಕಾಂಗ್ರೆಸ್‌ನಲ್ಲಿದ್ದಾರಾದರೂ ಅವರ ಮನಸ್ಸು ಸಮಾಜವಾದಿ ತತ್ವಗಳ ಹಿನ್ನೆಲೆಯಲ್ಲಿ ರೂಪಿತವಾಗಿರುವಂಥದ್ದು. ಹೋರಾಟ, ಪ್ರತಿಭಟನೆ ಎಂಬ ಪದಗಳಿಗೆ ಹೆಚ್ಚಿನ ಅರ್ಥವ್ಯಾಪ್ತಿಯನ್ನು ಒದಗಿಸಿದವರು. ಜಾತ್ಯತೀತ ತತ್ವಗಳನ್ನು ಬಲಿಗೊಟ್ಟು ಕೋಮುವಾದಿ ನಿಲುವುಗಳನ್ನು ನಖಶಿಖಾಂತವಾಗಿ ವಿರೋಧಿಸುವವರು. ದೇವರು-ಧರ್ಮದ ಹೆಸರನ್ನು ಹೇಳುತ್ತ ಹುಸಿ ಧಾರ್ಮಿಕ ಕಾಳಜಿಯನ್ನು ವ್ಯಕ್ತಪಡಿಸುವ ಚಿಡ್ಡಿಗಳನ್ನು ಕಂಡರೆ ಅವರ ಲಾಡಿಯನ್ನೆ ಹಿಡಿದು ಎಳೆಯುವ ತಾಕತ್ತು ಉಳ್ಳವರು.


ಬಿ.ಆರ್.ಪಾಟೀಲ

ಹಾಗಂತಲೆ ಸುಭಾಸ ಗುತ್ತೇದಾರ ಎಂಬ ಸುಪಾರಿ ಕೊಲೆಗಾರನೆದುರು ಕಳೆದ ಚುನಾವಣೆಯಲ್ಲಿ ಗೆದ್ದು ಬಂದರು. ಈಗಲೂ ಮತ್ತದೆ ದುಷ್ಟ ಶಕ್ತಿಯು ವಿರುದ್ಧ ಬಿ.ಆರ್.ಪಾಟೀಲ ಹೋರಾಟ ನಡೆಸುತ್ತಿದ್ದಾರೆ. ರಾಜ್ಯ ಕಿಸಾನ ಮಜದೂರ ಸಂಚಾಲಕ ಚಂದ್ರಶೇಖರ ಹಿರೇಮಠ ಈ ಬಾರಿ ಕಾಂಗ್ರೆಸ್ ಟಿಕೆಟ್‌ಗಾಗಿ ಪೈಪೋಟಿ ಶುರುಮಾಡಿದ್ದರು. ತಮಗೇ ಟಿಕೆಟ್ ಗ್ಯಾರಂಟಿ ಎಂದು ನಂಬಿದ್ದರು. ಆದರೆ ಬದಲಾದ ರಾಜಕೀಯ ವಿದ್ಯಮಾನಗಳಿಂದಾಗಿ ಬಿ.ಆರ್.ಪಾಟೀಲ್ ದೇವೇಗೌಡರನ್ನು ತೊರೆದು ಸಿದ್ಧರಾಮಯ್ಯನ ಜೊತೆ ಗುರುತಿಸಿಕೊಂಡದ್ದರಿಂದ ಅನಿವಾರ್ಯವಾಗಿ 'ಕೈ'ಯನ್ನು ಹಿಡಿಯಬೇಕಾಯ್ತು. ಹೀಗೆ ಅಚಾನಕ್ ಕೈ ಹಿಡಕೊಂಡದ್ದು ಚಂದ್ರಶೇಖರ ಹಿರೇಮಠಗೆ ನುಂಗಲಾಗದ ತುತ್ತಾಗಿ ಪರಿಣಮಿಸಿದೆ.

ಬಿಎಸ್ಪಿಯಿಂದ ನಿಂತಿರುವ ವೀರಣ್ಣ ಮಂಗಾಣೆ ಎಂಬ ಮತ್ತೋರ್ವ ಅಭ್ಯರ್ಥಿ ಗೆಲ್ಲಬಲ್ಲ ಯಾವ ಸಾಧ್ಯತೆಗಳೂ ಇಲ್ಲ. ಆದರೆ ಬಿ.ಆರ್.ಗೆ ತೊಡರುಗಾಲು ಹಾಕುವ ಸಾಧ್ಯತೆ ಇದ್ದೇ ಇದೆ. ಜನಸಾಮಾನ್ಯರ ಏಳ್ಗೆ, ತೊಂದರೆ ಇಲ್ಲದ ಬದುಕು ಬೇಕಾದವರು ಬಿ.ಆರ್.ರನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತವೆನಿಸುತ್ತದೆ. ಒಂದು ವೇಳೆ ಮೂಲತಃ ಕಾಂಗ್ರೆಸ್ಸಿಯಾಗಿದ್ದು ಟಿಕೆಟ್ ವಂಚಿತನಾಗಿ ಜೆಡಿಎಸ್‌ಗೆ ಜಿಗಿದಿರುವ ಗುತ್ತೇದಾರ ಆಯ್ಕೆಯಾದರೆ ಜನರ ದುರಾದೃಷ್ಟವೆನ್ನಬೇಕಾಗುತ್ತದೆ.

ಗುರುಮಿಠಕಲ್


ಚಿಂಚನಸೂರ್

ಕೆಪಿಸಿಸಿ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ಪ್ರತಿನಿಧಿಸುತ್ತಿದ್ದ ಕ್ಷೇತ್ರ ಎಂಬ ಕಾರಣಕ್ಕೆ ಸುದ್ದಿಯಲ್ಲಿದ್ದ ಗುರುಮಿಠಕಲ್ ಈಗ ಸಾಮಾನ್ಯ ಕ್ಷೇತ್ರವಾಗಿದ್ದರೂ ಸುದ್ದಿಯಲ್ಲಿದೆ. ಕದಲಬದಲ ಕವಡೇಕಾಯಿ ಎಂಬಂತೆ ತನ್ನ ಮತಕ್ಷೇತ್ರವನ್ನು ಬಾಬುರಾವ್ ಚಿಂಚನಸೂರಗೆ ಬಿಟ್ಟುಕೊಟ್ಟು ಚಿಂಚನಸೂರನ ಮತಕ್ಷೇತ್ರವಾದ ಚಿತ್ತಾಪುರವನ್ನು ಖರ್ಗೆ ಆಯ್ಕೆ ಮಾಡಿಕೊಂಡಿದ್ದಾರೆ. ಮೇಲ್ನೋಟಕ್ಕೆ ಗುರುಮಿಠಕಲ್ ಖರ್ಗೆಯ ಛಾಯೆಯಿಂದ ದೂರ ಸರಿದಿದೆ ಎಂಬಂತೆ ಕಾಣಿಸುತ್ತದೆಯಾದರೂ ಅವರ ಬೇರುಗಳು ಇನ್ನೂ ಆಳದಲ್ಲಿವೆ. ಹಾಗಾಗಿ ಖರ್ಗೆ ನಿಲ್ಲಿಸಿದ ಕ್ಯಾಂಡಿಡೇಟ್ ಬಾಬುರಾವ್ ಚಿಂಚನಸೂರ ಎಂಬ ಕಾರಣಕ್ಕೆ ಪರವೂರಿನವನಾದರೂ ಸದರ ಕೊಡುತ್ತಿದ್ದಾರೆ.

ಆದರೆ ಖರ್ಗೆಯನ್ನು ಮೊದಲಿನಿಂದಲೂ ವಿರೋಧಿಸುತ್ತ ಬಂದಿರುವ ಫ್ಯೂಡಲ್ ಗುಣಗಳ ರಾಜಕಾರಣಿ ನಾಗಣ್ಣಗೌಡ ಕಂದಕೂರ ಜೆಡಿಎಸ್‌ನಿಂದ ಚುನಾಯಿತನಾಗಬಯಸಿದ್ದಾನೆ.


ನಾಗಣ್ಣಗೌಡ

ಇದು ತನ್ನ ಕೊನೆಯ ಚುನಾವಣಾ ರಾಜಕೀಯ ಎಂದು ಸಾರಿಬಿಟ್ಟದ್ದಾನೆ. ಕಬ್ಬಲಿಗರೆ ನಿರ್ಣಾಯಕರಾಗಿರುವ ಈ ಕ್ಷೇತ್ರದಲ್ಲಿ ಬಿಜೆಪಿಯಿಂದ ನಿಂತಿರುವ ಅದೇ ಜನಾಂಗದ ವಿಠ್ಠಲ್ ಹೇರೂರು ಹಾಗೂ ಕಾಂಗ್ರೆಸ್‌ನ ಬಾಬುರಾವ್ ಚಿಂಚನಸೂರ ನಡುವೆ ಓಟಗಳು ಹರಿದು ಹಂಚಿಹೋದರೆ ಜೆಡಿಎಸ್‌ನ ನಾಗಣ್ಣಗೌಡ ಕಂದಕೂರ ಆಯ್ಕೆ ಸುಲಭವಾಗುತ್ತದೆ.

ಗುಲಬರ್ಗಾ ದಕ್ಷಿಣ

ರಾಜಕಾರಣಿಯಾಗಿದ್ದೂ ತನ್ನನ್ನು ತಾನು ಯಾರಿಗೂ ಮಾರಾಟಮಾಡಿಕೊಳ್ಳದ ವ್ಯಕ್ತಿಗಳು ಇರುವುದು ಅಪರೂಪ. ಈ ಅಪರೂಪದವರ ಸಾಲಿನಲ್ಲಿ ಕಲಬುರ್ಗಿಯ ದಕ್ಷಿಣ ಕ್ಷೇತ್ರಕ್ಕೆ ನಿಂತಿರುವ ಜೆಡಿಎಸ್‌ನ ಎಸ್.ಕೆ.ಕಾಂತಾ ಒಬ್ಬರು. ಜನ ಪರವಾದ ಹೋರಾಟಗಳೆ ತನ್ನ ಕರ್ತವ್ಯ ಎಂದು ಬಗೆದಿರುವ ಕಾಂತಾ ಜನಾನುರಾಗಿ ಹೋರಾಟಗಾರ. ಸತ್ಯದ ಕೊರಲಗನೆ ಹಿಡಿದು ಸದ್ಭಕ್ತರು ಗೆದ್ದರು ಎಂಬಂತೆ ಸತ್ಯವನ್ನೆ ತನ್ನ ಬದುಕನ್ನಾಗಿಸಿಕೊಂಡ ಕಾಂತಾ ನಿಜಕ್ಕೂ ಒಬ್ಬ ಅಪರೂಪದ ರಾಜಕಾರಣಿ. ತಮ್ಮದೇ ಪಕ್ಷದವರ ಪಿತೂರಿ, ರಾಜಕೀಯ ಹಲ್ಲಾ ನಡೆಗಳಿಂದ ಮೂಲೆಗುಂಪಾಗಿದ್ದ ಕಾಂತಾ ಇದೀಗ ಮುಖ್ಯವಾಹಿನಿಗೆ ಬಂದು ಜೆಡಿಎಸ್‌ನಿಂದ ಚುನಾವಣೆಗೆ ನಿಂತಿದ್ದಾರೆ. ಗುಲಬರ್ಗಾ ದಕ್ಷಿಣ ಮತಕ್ಷೇತ್ರದ ಜನರೂ ಅವರನ್ನು ಗೌರವದಿಂದ ಕಂಡು ಮತನೀಡುವ ಭರವಸೆ ನೀಡುತ್ತಿದ್ದಾರೆ.


ಎಸ್.ಕೆ.ಕಾಂತಾ

ಅಲ್ಲದೆ ಇವರ ಎದುರುಗಡೆ ನಿಂತಿರುವ ಕಾಂಗ್ರೆಸ್ ಅಭ್ಯರ್ಥಿ ಬಸವರಾಜ ಭೀಮಳ್ಳಿ ಎಂಬ ಎಚ್‌ಕೆಇ ಸೊಸೈಟಿಯ ಅಧ್ಯಕ್ಷ ಫ್ಯೂಡಲ್ ಗುಣಗಳನ್ನು ಮೈಗೂಡಿಸಿಕೊಂಡವ. ಜನಸಾಮಾನ್ಯರ ಮಿಡಿತ-ಬಡಿತಗಳ ವಾಸನೆಯೂ ಇರದ ಸೋಂಬೇರಿ ಇಂಥ ಕ್ರಿಯಾಶೀಲನಲ್ಲದ, ಜನಪರನಲ್ಲದ ವ್ಯಕ್ತಿಯನ್ನು ಚುನಾಯಿಸಿಕೊಳ್ಳುವುದೆಂದರೆ ಮತದಾರ ತನ್ನ ಕಾಲ ಮೇಲೆ ತಾನೇ ಕಲ್ಲು ಹಾಕಿಕೊಂಡಂತಾಗುತ್ತದೆ.


ಭೀಮಳ್ಳಿ


ಕಳೆದ ಸಲ ಆಯ್ಕೆಯಾಗಿದ್ದ ಬಿಜೆಪಿಯ ಚಂದ್ರಶೇಖ
ಪಾಟೀಲ ರೇವೂರ ಎಂಬ ವತನದಾರಿ ಮನೆತನದ
ಗೌಡ್ಕಿಯ ಗತ್ತನ್ನು ಬೆಳೆಸಿಕೊಂಡಿರುವ, ಕ್ಷೇತ್ರದ ಕಾಳ
ಎಂದರೆ ಏನೆಂದೂ ಗೊತ್ತಿಲ್ಲದ ಪಾಟೀಲನ ಚಿಡ್ಡಿ ಇದೀ
ಡೀಲವಾಗಿದೆ. ಅವರದೆ ಪಕ್ಷದವರಾದ ಶಶಿಲನಮೋ
ಮುಂತಾದವರು ಇಲ್ಲಿ ಸಾಕಷ್ಟು ಕೆಲಸ ಮಾಡುವುದರಿಂ
ಪಾಟೀಲ ಸೊಂಟದಿಂದ ಚಿಡ್ಡಿ ಕಳಚಿಬೀಳುವುದರ
ಯಾವುದೇ ಅನುಮಾನವಿಲ್ಲ.

ಸುರಪುರ




ಬಹುಶಃ ಇಡೀ ಕರ್ನಾಟಕದಲ್ಲಿಯೆ ಸುರಪುರದಂಥ ಜಿದ್ದಾಜಿದ್ದಿಯ ರಾಜಕೀಯ ಇರಲಿಕ್ಕಿಲ್ಲವೆನಿಸುತ್ತದೆ. ಕಳೆದ ಬಾರಿ ಕರ್ನಾಟಕದ ಎಲ್ಲಾ ಕಡೆ ತನ್ನ ಇಡಗಂಟನ್ನು ಕಳಕೊಂಡು ಎಲ್ಲರ ನಗೆಪಾಟಲಿಗೆ ಗುರಿಯಾಗಿದ್ದ ಕನ್ನಡ ನಾಡು ಪಕ್ಷ ಸುರಪುರ ಮತಕ್ಷೇತ್ರದಲ್ಲಿ ಜಯಭೇರಿ ಬಾರಿಸಿತ್ತು. ಇದಕ್ಕೆ ಪಕ್ಷದ ವರ್ಚಸ್ಸು ಕಾರಣ ಅನ್ನುವುದಕ್ಕಿಂತಲೂ ಹಿಂದಿನ ಶಾಸಕ ವೆಂಕಟಪ್ಪನಾಯಕ ಮತ್ತವರ ಸಹೋದರರ ಹಿಟ್ಲರ್ ಆಡಳಿತ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಕನ್ನಡ ನಾಡುವಿನಿಂದ ಗೆದ್ದ ರಾಜುಗೌಡ ಗೆಲ್ಲುತ್ತಲೇ

...ರಾವ


ನರಸಿಂಗರಾವ್


...ಗುರುಪಾದಪ್ಪ ನಾಗಮಾರಪಳ್ಳಿಯ ಕುಸ್ತಿಯ ಕಣವಾಗಿಯೆ ಇಷ್ಟು ದಿನ ಗುರುತಿಸಿಕೊಂಡಿದ್ದ ...ನ ಮತಕ್ಷೇತ್ರ ಇದೀಗ ಮೀಸಲು ಕ್ಷೇತ್ರವಾಗಿದೆ. ಆದ್ದರಿಂದಲೆ ಮೂರು ಬಾರಿ ...ಸನಾಗಿ ಆಯ್ಕೆಯಾಗಿರುವ ನರಸಿಂಗರಾವ್ ಸೂರ್ಯವಂಶಿ ಇಲ್ಲಿ ಕಾಂಗ್ರೆ ಅಭ್ಯರ್ಥಿಯಾಗಿ ...ದ್ದಾನೆ. ಈತನ ಎದುರುಗಡೆ ಸೆಡ್ಡು ಹೊಡೆದು ನಿಂತಿರುವ ಬಜೆಪಿಯ ಪ್ರಭು ಚವ್ಹಾಣ ...ಹಣಾಹಣಿ ನೀಡಲಾರ. ಬದಲಾಗಿ ಬಿಎಸ್ಪಿಯ ಅಭ್ಯರ್ಥಿ ವೈಜನಾಥ ಸೂರ್ಯವಂಶಿ ಇಲ್ಲಿ ...ಎದುರಾಳಿಯಾಗಲಿದ್ದಾನೆ. ಜೆಡಿಎಸ್ ಅಭ್ಯರ್ಥಿ ಬಾಬುರಾವ್ ಕದಮ್ ಇಲ್ಲಿ ಆಟಕ್ಕುಂಟು ...ಕ್ಕಿಲ್ಲ ಎಂಬಂತಿದ್ದಾನೆ. ನಾಗಮಾರಪಳ್ಳಿಯವರ ಕೃಪೆ ನರಸಿಂಗರಾವ್ ಸೂರ್ಯವಂಶಿಗೆ ದೊರೆಯದೆ ಹೋದರೆ ಆನೆ ...ಯ ವೈಜನಾಥ ಸೂರ್ಯವಂಶಿ ಎಲ್ಲರನ್ನು ತೊತ್ತಲ ತುಳಿಯುತ್ತ ಬರಬಹುದಾದ ಸಾಧ್ಯತೆಗಳೆ ಈಗ ಗೋಚರವಾಗುತ್ತಿವೆ.


...ದೆಪ್ಪ ಖಾಶೆಂಪುರ

ಬೀದರ ಸೌತ್

ಬೀದರ ಸೌತ್‌ಗೆ ಬಂಡೆಪ್ಪ ಖಾಶಂಪುರ ಜೆಡಿಎಸ್ ಅಭ್ಯರ್ಥಿಯಾಗಿದ್ದಾನಾದರೂ ಅದೇಕೋ ತನ್ನ ಹಿಂದಿನ ಚಾರ್ಮನ್ನು ಕಳಕೊಂಡು ಬಿಟ್ಟಿದ್ದಾನೆ. ಮಂತ್ರಿಯಾಗಿದ್ದಾಗ ಈತನ ಸಹೋದರರು ಕಬಳಿಸಿದ ಅಪಾರ ಪ್ರಮಾಣದ ಆಸ್ತಿಯೆ ಈತನಿಗೆ ಮೈನಸ್ ಪಾಯಿಂಟ್ ಆಗುವ ಸಾಧ್ಯತೆಗಳಿವೆ. ಜೊತೆಗೆ ಜೆಡಿಎಸ್ ಅಲೆ ಜಿಲ್ಲೆಯ ತುಂಬೆಲ್ಲ ಕ್ಷೀಣವಾಗುತ್ತ ಸಾಗಿದೆ. ಸಂಜಯ ಖೇಣಿ ಎಂಬ ನೈಸ್ ಕಂಪನಿಯ ಹರಿಕಾರ ಅಶೋಕ ಖೇಣಿಯ ಸಹೋದರ ಬಜೆಪಿಯ ಅಭ್ಯರ್ಥಿಯಾಗಿದ್ದು ತನ್ನ ಶ್ರೀಮಂತಿಕೆಯ ವರ್ಚಸ್ಸನ್ನು ತೋರಲು ಪ್ರಯತ್ನಿಸುತ್ತಿದ್ದಾನೆ. ಆದರೂ ಜನ ಯಾಕೋ ಈ ಕಡೆ ಕಿವಿಕೊಡುತ್ತಿಲ್ಲವೆನಿಸುತ್ತದೆ. ಕಾಂಗ್ರೆಯಂತೂ ಅದೇಕೋ ...ನ್ನ ಸಿದ್ದೀಕಿ ಎಂಬ ಡಮ್ಮಿ ಕ್ಯಾಂಡಿಡೇಟ್ ಹಾಕಿ ಕೈ ಚೆಲ್ಲಿ ಕುಳಿತಿದೆ. ಆದರೆ ಬಿಎಸ್‌ಪಿಯ ನಸಿಮೋದ್ದೀನ್ ಎಂಬ ...ಜುದ್ದೀನ್ ಪಟೇಲನ ಸಹೋದರ ಇಲ್ಲಿ ಖಾಶಂಪುರಗೆ ನೇರ ಹಣಾಹಣಿಯನ್ನು ನೀಡಲಿದ್ದಾನೆ. ಇಲ್ಲಿನ ...ಸಂಖ್ಯಾತರ ಮತಗಳನ್ನು ನಸಿಮೋದ್ದೀನ ಸಂಪೂರ್ಣವಾಗಿ ಸೆಳೆದುಕೊಳ್ಳಬಲ್ಲನಾದರೆ ಆನೆ ಹೆದ್ದಾರಿಗೆ ಬರುವುದು ...ಟ.

...ದರ


ಗುರುಪಾದಪ್ಪ

...ತನ್ನೆಲ್ಲ ಶಕ್ತಿಯನ್ನು ಪಣಕ್ಕಿಟ್ಟು ಕಾಡಿಬೇಡಿ ಟಿಕೆಟ್ ಪಡೆದ ಗುರುಪಾದಪ್ಪ ನಾಗಮಾರಪಳ್ಳಿ ...ಕಾಂಗ್ರೆ ಅಭ್ಯರ್ಥಿ. ಹಾಗೆ ನೋಡಿದರೆ ಇಲ್ಲಿ ಅಲ್ಪಸಂಖ್ಯಾತರೆ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ... ಮಾತೇ ಇಲ್ಲಿ ಬಹುತೇಕವಾಗಿ ನಿರ್ಣಾಯಕವಾಗುತ್ತದೆ. ಅವರೆಲ್ಲ ಒಕ್ಕೊರಲಿನಲ್ಲಿ ...ಮಾರಪಳ್ಳಿ ತಮಗೆ ಬೇಡವೇ ಬೇಡ ಎಂದರೂ ಗುರುಪಾದಪ್ಪ ಇಲ್ಲಿ ತೂರಿ ಬಂದಿದ್ದಾನೆ. ... ಫಲ ಆತ ಉಣ್ಣಲಿದ್ದಾನೆ ಎಂಬುದು ಬಹುತೇಕರ ವಾದ.

...ಅಂದಂತೆ ಬಿಎಸ್ಪಿಯಿಂದ ರಹೀಮ ಖಾನ್ ಸ್ಪರ್ಧೆ ಈ ವಾದಕ್ಕೆ ಪುಷ್ಟಿ ನೀಡಿದೆ. ...ಸ್ ಕೊನೆಯ ಘಳಿಗೆಯಲ್ಲಿ ರಾಜಶ್ರೀಸ್ವಾಮಿ ಎಂಬ ನಿಷ್ಠಾವಂತ ವ್ಯಕ್ತಿಯನ್ನು ಕಣಕ್ಕೆ ...ದೆ. ಆದರೆ ಈಕೆ ಇಲ್ಲಿ ಕ್ಲಿಕ್ ಆಗುವುದು ಒತ್ತಟ್ಟಿಗೆ ಇರಲಿ, ಚುನಾವಣೆಯ ಮುಖ್ಯ ...ಡಕ್ಕೂ ಬರಲಾರಳೆನಿಸುತ್ತದೆ.

...ಇಲ್ಲಿ ಕುಸ್ತಿ ಇರುವುದು ಆನೆಯ ಗುರುತಿನ ರಹೀಮ ಖಾನ ಹಾಗೂ ನಾಗಮಾರಪಳ್ಳಿಯ ನಡುವೆ ಮಾತ್ರ.

■ ವಿಶ್ವಾರಾಧ್ಯ ಸತ್ಯಂಪೇಟೆ

...ದಳವನ್ನು ಸೇರಿಕೊಂಡ. ಆಮೇಲೆ ಎಂ.ಪಿ.ಪ್ರಕಾಶರ ಚುಂಗು ಹಿಡಿದು ಕಾಂಗ್ರೆ ಸೇರಿಕೊಂಡ. ಅಲ್ಲಿ ಟಿಕೆಟ್ ...ಯುದೆ ಹೋದಾಗ ಈಗ ಅನಿವಾರ್ಯವಾಗಿ ಬಿಜೆಪಿಯನ್ನು ಸೇರಿಕೊಂಡಿದ್ದಾನೆ.

...ಗಲೂ ಮತಕ್ಷೇತ್ರದಲ್ಲಿ ಹಿಂದಿನ ಭೀತಿಯ ರಾಜಕೀಯವೆ ಮನೆಮಾಡಿದೆ. ಇಲ್ಲಿಯ ಜನ ತಮ್ಮ ಕ್ಷೇತ್ರದ ...ವೃದ್ಧಿಗಿಂತ ನೆಮ್ಮದಿಯ ಬದುಕು ಮುಖ್ಯವೆಂದುಕೊಂಡಿದ್ದಾರೆ. ಹಾಗಾಗಿ ರಾಷ್ಟ್ರೀಯ ರಾಜಕೀಯ ಲೆಕ್ಕಾಚಾರಗಳಿಗಿಂತಲೂ ...ವ್ಯಕ್ತಿಯ ಲೆಕ್ಕಾಚಾರಗಳೆ ಮುಖ್ಯವಾಗಿವೆ. ಪಕ್ಷದ ಬಲದ ಮೇಲೆ ಇಲ್ಲಿನ ಜನಗಳು ಓಟು ಕೊಡುವುದಕ್ಕಿಂತ ... ಹಾಗೂ ಅನಿವಾರ್ಯ ಕಾರಣಗಳಿಂದ ಬಿಜೆಪಿಯ ರಾಜುಗೌಡನನ್ನು ಬೆಂಬಲಿಸುತ್ತಿದ್ದಾರೆ. ಜೆಡಿಎಸ್‌ನ ...ಮ್ಮ ಇಲ್ಲಿ ನಾಮಕಾವಸ್ಥೆ ಕ್ಯಾಂಡಿಡೇಟ್ ಮಾತ್ರ.



ಚಿತ್ತಾಪುರ


ಮೇಲುನೋಟಕ್ಕೆ ಚಿತ್ತಾಪೂರ ಕ್ಷೇತ್ರದಲ್ಲಿ ಕಾಂಗ್ರೆಸ ಮಲ್ಲಿಕಾರ್ಜುನ ಖರ್ಗೆ ಗೆಲ್ಲಬಹುದೆನಿಸಿದರೂ ಅದು ಆಂತರ್ಯದಲ್ಲಿ ಎಷ್ಟು ಕಷ್ಟ ಎಂಬುದು ಅರಿಯಬೇಕಾದವರು, ಚಿತ್ತಾಪೂರದಲ್ಲೊಂದು ಸುತ್ತು ಹಾಕಬೇಕು. ಇದಕ್ಕೆ ಮುಖ್ಯ ಕಾರಣ ಇಲ್ಲಿನ ಲಂಬಾಣಿ ಜನಾಂಗದ ಬಿಜೆಪಿ ಹುರಿಯಾಳಾದ ವಾಲ್ಮೀಕಿ ಕಮಲು ನಾಯಕ.


ವಾಲ್ಮೀಕಿ ಕಮಲು ನಾಯಕ

ಈ ಕಮಲು ನಾಯಕ ಬರೀ ಲಂಬಾಣಿ ಜನಾಂಗದವರಷ್ಟೆ ಅಲ್ಲ ಎಲ್ಲ ಜಾತಿ ಬಂಧುಗಳೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದಾರೆ. ಇಡೀ ಕ್ಷೇತ್ರದ ಉದ್ದಕ್ಕೂ ಈತನದು ಹೊಕ್ಕುಳಬಳ್ಳಿಯ ...ಧ.

...ದಲ್ಲದೆ ಚಿತ್ತಾಪುರ ತಾಲೂಕಿನ ಕಾಂಗ್ರೆ ಅಕ್ಷರಶಃ ಒಡೆದ ಮಡಿಕೆಯಾಗಿದೆ. ಒಬ್ಬರ ... ಒಬ್ಬರು ಎದ್ದು ನಿಲ್ಲುವ, ಒಬ್ಬರ ವಿರುದ್ಧ ಮತ್ತೊಬ್ಬರನ್ನು ಎತ್ತಿಕಟ್ಟುವ, ಟೀಕಿಸುವ ...ಯಾವ ಎಗ್ಗಿಲ್ಲದೆ ನಡೆದಿದೆ. ಇದು ಹೀಗೆ ಮುಂದುವರೆದು ಇಲ್ಲಿನ ಕಬ್ಬಲಿಗ ಹಾಗೂ ...ಮತರು ಖರ್ಗೆಗೆ ಸಪೋರ್ಟ ನೀಡದಿದ್ದರೆ ಸೋಲರಿಯದ ಸರದಾರ ಇಲ್ಲಿ ...ಗಬೇಕಾಗುತ್ತದೆ.

...ಜಲಪುರ


ಮಾಲೀಕಯ್ಯ

...ಹಾರಿಕೊಸೆಗಳ ಸರದಾರ, ಹೆಂಡದ ದೊರೆ ಮುಂತಾದ ಬಿರುದುಗಳಿಂದ ಕರೆಯಲ್ಪಡುವ ...ಕಯ್ಯ ಗುತ್ತೇದಾರ ಅಧಿಕಾರ ಕಳೆದುಕೊಂಡ ನಂತರ ಕಾಡು ಬಿಟ್ಟುಬಂದ ಮೃಗಗಳಂತೆ




ಒಂದೇ ಸಮ ಅರ್ಭಟಿಸುತ್ತಿದ್ದಾನೆ. ಈತನ ಚೀರಾಟಕ್ಕೆ ತಣ್ಣಗಾದ ಕಾಂಗ್ರೆ ಹೈಕಮಾಂಡ ತನ್ನ ಟಿಕೆಟ್ ನೀಡಿದೆ. ಜೆಡಿಎಸ್‌ನಲ್ಲಿದ್ದು ಇತ್ತೀಚಿಗೆ ಬಿಜೆಪಿಯನ್ನು ಅಪ್ಪಿಕೊಂಡಿರುವ ಎಂ.ವೈ.ಪಾಟೀಲ ಎಂಬ ಮಾಜಿ ಶಾಸಕನಿಗೆ ಕಳೆದ ಸಲ ಕ್ಷೇತ್ರದಲ್ಲಿ ಮಾಡಿದ ಕಳಪೆ ಕಾಮಗಾರಿಗಳು, ಅಕ್ರಮವಾಗಿ ಗಳಿಸಿದ ದುಡ್ಡು ಇದೀಗ ಮೈನಸ್ ಪಾಯಿಂಟ್‌ಗಳಾಗಿ ಪರಿವರ್ತಿತವಾಗುತ್ತಿವೆ.

ಜೊತೆಗೆ ಬಿಜೆಪಿ ಎಂಬ ತೀರಾ ವಲ್ಗರ್ ಆಗಿರುವ ಪಕ್ಷವನ್ನು ಅಪ್ಪಿಕೊಂಡು, ಒಪ್ಪಿಕೊಂಡು ಇನ್ನೊಂದು ಕಡೆ ಬಸವಾದಿ ಶರಣರ ವಿಚಾರಗಳನ್ನು ಹೇಳುವ ಇವರ ಇಬ್ಬಗೆಯ ನೀತಿಯೆ ಇವರಿಗೆ ಮುಳುವಾಗಲಿದೆ. ಅಲ್ಲದೆ ತುಕಾರಾಮಗೌಡ ಪಾಟೀಲ ಎಂಬ ಜೆಡಿಎಸ್ ಧುರೀಣ ...ತಗಳನ್ನು ಬಿಜೆಪಿಯಿಂದ ಕಿತ್ತುಕೊಂಡರೆ ಅಟೋಮ್ಯಾಟಿಕ್ ಆಗಿ ಮಾಲೀಕಯ್ಯ ಗುತ್ತೇದಾರ ವಿಜೃಂಭಿಸಬಲ್ಲನೆನಿಸುತ್ತದೆ.


ಉತ್ತರ ಕನ್ನಡ : ಕಾಂಗ್ರೆಸ್‌ಗೆ ಉತ್ತಮ ಮುನ್ನಡೆ!

ಕಳೆದ ವಾರದ ಸಂಚಿಕೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಮೂರು ಕ್ಷೇತ್ರಗಳ ಸಮೀಕ್ಷೆಯಲ್ಲಿ ಕಾರವಾರ-ಅಂಕೋಲ ಕ್ಷೇತ್ರದಿಂದ ಕಾಂಗ್ರೆಸ್‌ನ ಆನಂದ ಅಸ್ನೋಟಿಕರ್, ಯಲ್ಲಾಪುರ ಮುಂಡಗೋಡ ಕ್ಷೇತ್ರದಿಂದ ಕಾಂಗ್ರೆಸ್‌ನ ಶಿವರಾಮ ಹೆಬ್ಬಾರ್ ಮತ್ತು ಸಿರಸಿ ಸಿದ್ದಾಪುರ ಕ್ಷೇತ್ರದಿಂದ ಕಾಂಗ್ರೆಸ್‌ನ ರವೀಂದ್ರ ನಾಯ್ಕ ಗೆಲ್ಲಲಿದ್ದಾರೆಂದು ಹೇಳಿದ್ದೆವು. ಈಗ ಇಲ್ಲಿ ಉಳಿದ ಮೂರು ಕ್ಷೇತ್ರಗಳ ಸಮೀಕ್ಷೆಯನ್ನು ನೀಡಿದ್ದೇವೆ.

ಕುಮಟಾ-ಹೊನ್ನಾವರ: ದಾಯಾದಿಗಳ ಸ್ಪರ್ಧೆ



ಮೋಹನ ಶೆಟ್ಟಿ

ಈ ಕ್ಷೇತ್ರದಲ್ಲಿ ಎರಡು ಬಾರಿ ಕಾಂಗ್ರೆಸ್ ಪಕ್ಷದಿಂದ ಶಾಸಕನಾಗಿ ಆಯ್ಕೆಯಾದ ಮೋಹನ ಶೆಟ್ಟಿ ಈ ಬಾರಿಯೂ ಕಾಂಗ್ರೆಸ್ ಪಕ್ಷದಿಂದ ಅಭ್ಯರ್ಥಿಯಾಗಿದ್ದಾರೆ. ಇವರಿಗೆ ಜೆಡಿಎಸ್‌ನಿಂದ ಸ್ಪರ್ಧಿಸಿರುವ ದಾಯಾದಿ ಸಹೋದರ ದಿನಕರ ಶೆಟ್ಟಿ ನೇರ ಸ್ಪರ್ಧಿಯಾಗಿದ್ದಾರೆ. ದಿನಕರ ಶೆಟ್ಟಿ ಈ ಹಿಂದೆ ಅಣ್ಣನ ವಿರುದ್ಧ ಸ್ಪರ್ಧಿಸಿ ಸೋಲು ಕಂಡವರು. ಮೋಹನ ಶೆಟ್ಟಿ ಹಿಂದಿನಂತೆ ಚುರುಕಾಗಿ ಓಡಾಡಲು ಅವರ ಆರೋಗ್ಯ ಕೈಕೊಟ್ಟಿದೆ. ಇದು ದಿನಕರ ಶೆಟ್ಟಿಗೆ ಪ್ಲಸ್ ಪಾಯಿಂಟ್ ಆಗಿದೆ.


ದಿನಕರ ಶೆಟ್ಟಿ

ಬಿಜೆಪಿಯಿಂದ ಸ್ಪರ್ಧಿಸಿರುವ ಶಶಿಭೂಷಣ ಹೆಗಡೆ ಮೂಲತಃ ಸಿದ್ದಾಪುರದವರಾಗಿದ್ದು ಕುಮಟಾಕ್ಕೆ ವಲಸೆ ಬಂದಿದ್ದಾರೆ. ಕಳೆದ ಬಾರಿ ಕೂಡ ಇವರು ಬಿಜೆಪಿಯಿಂದ ಸ್ಪರ್ಧಿಸಿ ಸೋತಿದ್ದರು. ಹಿಂದಿನ ಚುನಾವಣೆ ಸಂದರ್ಭದಲ್ಲಿ ಬಂಗಾರಪ್ಪ ಬಿಜೆಪಿಯಲ್ಲಿದ್ದುದರಿಂದ ಶಶಿಭೂಷಣ ಹೆಗಡೆ ಕೆಲವೇ ಮತಗಳ ಅಂತರದಲ್ಲಿ ಸೋಲು ಕಂಡಿದ್ದರು. ಈ ಸಲ ಬಂಗಾರಪ್ಪನವರ ಪ್ರಭಾವ ಇಲ್ಲ ಹಾಗೂ ಬಿಜೆಪಿಯ ಜಿಲ್ಲಾ ಅಧ್ಯಕ್ಷ ವಿನೋದ ಪ್ರಭು ಕುಮಟಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಅವರಿಗೆ ಟಿಕೆಟ್ ವಂಚನೆಯಾದ್ದರಿಂದ ವಿನೋದ ಪ್ರಭುರವರ ಕಾರ್ಯಕರ್ತರ ಮತ್ತು ಮುಖಂಡರ ಬಳಗ ಅಸಮಾಧಾನಗೊಂಡಿದೆ. ಆದ್ದರಿಂದ ಶಶಿಭೂಷಣ ಹೆಗಡೆ ಸೋಲುವುದು ಖಚಿತ.

ಸಮಾಜವಾದಿ ಪಕ್ಷದ ಡಾ.ಜಿ.ಜಿ.ಹೆಗಡೆ ಕೂಡ ಸ್ಪರ್ಧೆಯೊಡ್ಡಿದ್ದಾರೆ. ಇವರು ತಮ್ಮದೇ ಆದ ಕೆಲವು ಮತಗಳನ್ನು ಪಡೆಯಲಿದ್ದು ಗೆಲುವಿನ ಹಾದಿಯಲ್ಲಿರುವ ಮೋಹನ್ ಶೆಟ್ಟಿಗೆ ಸ್ವಲ್ಪ ತೊಡಕಾಗುತ್ತಾರೆ.


ಜೆ.ಡಿ. ನಾಯ್ಕ್

ಭಟ್ಕಳ: ಜೆ.ಡಿ.ನಾಯ್ಕ್ V/s ಶಿವಾನಂದ ನಾಯ್ಕ್


ಶಿವಾನಂದ ನಾಯ್ಕ್

ಕಾಂಗ್ರೆಸ್‌ನಿಂದ ಒಮ್ಮೆ ಶಾಸಕರಾದ ಜೆ.ಡಿ.ನಾಯ್ಕ ಕಳೆದ ಬಾರಿ ಸೋಲು ಕಂಡರೂ ಈ ಸಲ ಗೆಲ್ಲುವುದು ನಿಶ್ಚಿತವಾಗಿದೆ. ಸದಾ ಕೋಮುಗಲಭೆಯ ಕುಖ್ಯಾತಿಗೆ ಕಾರಣವಾದ ಭಟ್ಕಳ ಶಾಂತಿಯುತವಾಗಿ ಸೌಹಾರ್ದ ಬಾಳುವೆ ನಡೆಸಲು ಹಿಂದೂ ಮುಸ್ಲಿಮ್ ಸಮುದಾಯದವರು ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಲಿದ್ದಾರೆ. ಇತ್ತೀಚಿನವರೆಗೂ ಸಚಿವರಾಗಿದ್ದ ಶಿವಾನಂದ ನಾಯ್ಕ ಈ ಭಾಗದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಿಸುವಲ್ಲಿ ವಿಫಲರಾಗಿದ್ದಾರೆ ಮತ್ತು ಇವರ ಅವಧಿಯಲ್ಲಿ ಕೋಮುಗಲಭೆ ಸಾಕಷ್ಟು ಸಂಭವಿಸಿ ಜನತೆಯಲ್ಲಿ ಅಸಹನೀಯವನ್ನು ಮೂಡಿಸಿದೆ. ಬಿಜೆಪಿಗೆ ಈ ಸಲ ಅವಕಾಶ ನೀಡಲೇಬಾರದು ಎಂದು ಜನತೆ ತೀರ್ಮಾನಿಸಿದಂತಿದೆ. ಜೆ.ಡಿ. ನಾಯ್ಕ ಎಲ್ಲಾ ಸಮುದಾಯದವರ ಜೊತೆ ಸೌಹಾರ್ದತೆಯಿಂದ ಇದ್ದು ಎಲ್ಲರ ಕಷ್ಟ ಸುಖಗಳಲ್ಲಿ ಭಾಗಿಯಾಗಿ ಸಾಮಾನ್ಯರಲ್ಲಿ ಸಾಮಾನ್ಯರಾಗಿ ಬೆರೆಯುವ ವಿಶಿಷ್ಟ ಗುಣ ಹೊಂದಿರುವುದರಿಂದ ಮತದಾರ ಅವರ ಕಡೆ ವಾಲುವ ಸಂಭವವೇ ಜಾಸ್ತಿಯಿದೆ.

ನೇರ ಹಣಾಹಣಿ ನಡೆಯುವುದು ಕಾಂಗ್ರೆಸ್‌ನ ಜೆ.ಡಿ.ನಾಯ್ಕ ಹಾಗೂ ಬಿಜೆಪಿಯ ಶಿವಾನಂದ ನಾಯ್ಕ್ ನಡುವೆ. ಇವರಿಬ್ಬರಲ್ಲಿ ಹವಾ ಇರೋದು ಜೆ.ಡಿ.ನಾಯ್ಕ್ ಕಡೆಗೇನೆ.

ಇನ್ನು ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿರುವ ಉದ್ಯಮಿ ಯಶೋಧರ ನಾಯ್ಕ ತನ್ನಲ್ಲಿರುವ ಕೋಟ್ಯಂತರ ಹಣವನ್ನು ಮತ ಪಡೆಯುವುದಕ್ಕಾಗಿ ಹಿಂದಿನ ಚುನಾವಣೆಯಲ್ಲಿಯೂ ನೀರಿನಂತೆ ಚೆಲ್ಲಿದ್ದರೂ ಗೆಲ್ಲಲು ಸಾಧ್ಯವಾಗಿರಲಿಲ್ಲ. ಈ ಸಲ ಕೂಡ ಕೋಟ್ಯಂತರ ರೂಪಾಯಿ ಹಣ ಸುರಿಯುತ್ತಿದ್ದಾರೆ. ಒಂದಿಷ್ಟು ಮತಗಳನ್ನು ಖರೀದಿಸಬಹುದು ಬಿಟ್ಟರೆ ಗೆಲುವು ತುಸು ಕಷ್ಟವೆ.

ಹಳಿಯಾಳ: ಕಾಲೆಳೆದರೂ ಎದ್ದುನಿಲ್ಲುವ ದೇಶಪಾಂಡೆ!


[illegible]

ಇಪ್ಪತ್ತೈದು ವರ್ಷಗಳಿಂದ ಸಚಿವ ಮತ್ತು ಶಾಸಕನಾಗಿ ಅಧಿಕಾರವನ್ನು ಅನುಭವಿಸುತ್ತಲೇ ಬಂದಿರುವ ಅವಕಾಶವಾದಿ ರಾಜಕಾರಣಿ ಆರ್.ವಿ.ದೇಶಪಾಂಡೆ ಈ ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದಾರೆ. ಆದರೆ ಈಗ ಅವರ ಶಿಷ್ಯಂದಿರಾದ್ದ ಸುನೀಲ ಹೆಗಡೆ ಜೆಡಿಎಸ್‌ನಿಂದ ಮತ್ತು ಅಜಿತ್ ನಾಯಕ ಸಮಾಜವಾದಿ ಪಕ್ಷದಿಂದ ಅವರ ವಿರುದ್ಧವೇ ಪ್ರಬಲ ಸ್ಪರ್ಧೆ ನೀಡುತ್ತಿದ್ದಾರೆ. ಕಳೆದ ಚುನಾವಣೆಯಲ್ಲೂ ಸುನೀಲ ಹೆಗಡೆ ಜೆಡಿಎಸ್‌ನಿಂದ ಸ್ಪರ್ಧಿಸಿ ಬಹಳಷ್ಟು ಮತಗಳನ್ನು ಪಡೆಯುವ ಮೂಲಕ ದೇಶಪಾಂಡೆಗೆ ನಡುಕ ಹುಟ್ಟಿಸಿದ್ದರು. ಆದರೆ ಅಂದು ಕೆಲವೇ [illegible] ಸುನೀಲ್ ಹೆಗಡೆ ಸೋತಿದ್ದರು. ಈ ಬಾರಿ ಅವರೊಬ್ಬರಲ್ಲದೆ, ಅಜಿತ್ ನಾಯಕ ಎಂಬಾತ ಕೂಡ ಚುನಾವಣಾ ಕಣಕ್ಕೆ ಇಳಿದು ದೇಶಪಾಂಡೆಯನ್ನು ಸೋಲಿಸಲು ಸಜ್ಜಾಗಿದ್ದಾರೆ.

ತನ್ನ ರಾಜಕೀಯ ಬದುಕಿನುದ್ದಕ್ಕೂ ಗಾಳಿ ಬೀಸುವ ಕಡೆ ತೂರಿಕೊಂಡು, [illegible] ಅಧಿಕಾರವನ್ನು ಅನುಭವಿಸುತ್ತಲೇ ಬಂದಿರುವ ದೇಶಪಾಂಡೆ ಕೊನೆಗೆ ತನ್ನವೇ ಆದ [illegible] ಗೆದ್ದರೆ ಅಚ್ಚರಿ ಇಲ್ಲ.

ಈ ಮಧ್ಯೆ ಬಿಜೆಪಿ ಅಭ್ಯರ್ಥಿ ಕೂಡ ಯಾವುದೇ ರೀತಿಯ ಸ್ಪರ್ಧೆಯೊಡ್ಡ [illegible] ಗೆಲುವಿಗೆ ನೆರವಾಗಬಹುದು. ■

ಪೂಜಾರಿ ಗಂಟೆ ಸುಮ್ಮನಿರಸಕ್ಕಾದತೆ

ಉಗ್ರಿಯಿಂದ ಚುನಾವಣಾ ವರದಿ ಕೇಳಿದ ಕಾಳಮಾವ.

"ಯಲ್ಲಾ ಪಾರ್ಟಿಯೋರು ಒಂದೇ ತರ ಮಾತಾಡ್ತ ಅವುರಲ್ಲಾ, ಇದಕೇನೇಳನಾ?" ಎಂದ.

"ಮಾತಾಡದಷ್ಟೇ ಅಲ್ಲ ಕಣ ಮಾವ", ಅವುರ ಪ್ರಣಾಳಿಕೆನು ಒಂದೇ ತರ ಅವೆ. ಅವುನು ಟಿ.ವಿ. ಕೊಡ್ತಿನಿ ಅಂದ್ರೆ, ಇವುನೂ ಕೊಡ್ತಿನಿ ಅಂತನೆ. ಇವುನು ಸಾಲಮನ್ನ ಅಂದ್ರೆ ಅವುನೂ ಮನ್ನ ಅಂತನೆ. ಇವುನು ಬ್ರಾಂದಿ ಕೊಡ್ತಿನಿ ಅಂದ್ರೆ ಅವುನೂ ಸರಾಪು ಕೊಡ್ತಿನಿ ಅಂತನೆ."

ಬಂಗಾಲು ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಸರಾಪ್ ಕೊಡೋನ್ಯಾರ್ಲ?" ಎಂದಳು ಜುಮ್ಮಿ.

"ಇನ್ನಾರು? ಪೂಜಾರಿ!"

"ಅವುನ ಬಾಯಿಗೆ ಮಣ್ಣಾಕ. ಅವುನಿಗೇನಾಗ್ಯದ್ಲ?"

"ಅದ್ಯಾಕೆ ಅಂಗೆ ಬೈತೀ?"

"ಇನ್ನೇನು ಮತ್ತೆ? ಸರಾಪು ನಿಂತಾಗ್ಲಿಂದ ಆ ನಾರಾಯ್ಣ ಮನೆ, ಚಿಕ್ಕಣ್ಣನ ಮನೆ, ಪುಟ್ಟರಾಜನ ಮನೆ, ಯಲ್ಲ ತಣ್ಣಗವೆ."

"ಎಲ್ಲಿ ತಣ್ಣಗಿದ್ದವೇ? ವಾರಕ್ಕೆರಡು ದಿನ ದೆವ್ವದಾಗ್ನಿ ನ್ಯದಿತಾ ಅದೆ. ಆಗ ಸಿಕ್ಕಿದ ಅರ್ದ ದುಡ್ನಲ್ಲ ಸರಾಪು ಕುಡುದು ಬರವು. ಈಗ ಇರಬರೊ ದುಡ್ಡನ್ಯಲ್ಲಿ ಬ್ರಾಂದಿ, ರಮ್ಮು, ರಾಜವಿಸ್ಕಿ ಅಂತ ಕುಡುದು ಬರಿಕ್ಯಲಿ ಮನಿಗೆ ಬತ್ತವೆ. ಪೂಜಾರಿ ಸರಾಪು ನಿಂತಿದ್ರೂ, ಎಡೂರಪ್ಪನ ಬ್ರಾಂದಿ ಚಾಲ್ತಿಲದೆ."

"ಅದಿದ್ಮಳ್ಳಿ ಸರಾಪು ಮಾತ್ರ ತಿರಗ ತರದುಬ್ಯಾಡ."

"ಅಂಗಂತ ನೀನೆ ಪೂಜಾರಿಗೆ ಪೋನು ಮಾಡೇಳೆ."

"ಎಲ್ಲಿದ್ದನವುನೂ?"

"ಇನ್ನೆಲ್ಲಿದ್ದನೇ? ಕಾಂಗ್ರೆಸ್ ಗುಡಿವಳಗಿರತನೆ ಗಂಟೆ ಅಳ್ಳಾಡಿಸಿಗಂಡು. ಅವುನಿಗೆ ಪೋನು ಮಾಡಿ ನಿನ್ನ ಮನಿಮಾರತ್ತ ಯಲಕ್ಸನ್ ಮುಗಿಯವರಿಗೂ ನಿನ್ನ ಗಂಟೆ ಅಳ್ಳಾಡುಸುಬ್ಯಾಡ ಅಂತ ಹೇಳೆ" ಎಂದು ಉಗ್ರಿ ನಕ್ಕ.

"ಪೂಜಾರಿ ಬಾಯಿ ಮುಚ್ಚಸದು ಕಷ್ಟ" ಎಂದ ಸೀರ.

"ಊ, ಅವುನು ಒಂಥರಾ ಶರಾಪು ಕುಡದೋರಂಗೆ ಮಾತಾಡ್ತನೇ ಇರತನೆ."

"ಸರಾಪು ಮಾರೋರು ಬಂಗಾರಪ್ಪನಿಗೆ ಸಪೋಟು ಮಾಡ್ತಯಿದ್ದರಂತೆ, ನಿಜವೇನ್ಲ?" ಎಂದ ಸೀರ.

"ಸಪೋಟು ಮಾಡದೇನು? ಮದ್ಲಿಂದ ಬ್ರಾಂದಿ, ಬೀರು, ಹ್ಯಂಡ, ಸರಾಪು ಮಾರೋರಿಗೆ ಬಂಗಾರಿ ಕಂಡ್ರೆ ತುಂಬಾ ಇಷ್ಟ ಕಣೊ. ಅದ್ಕೆ ಈಗ ಯಲ್ಲೂ ಅವುನಿಗೆ ಸಪೋಟು ಮಾಡ್ತಯಿದ್ದರಂತೆ."

"ಅಂಗರೆ ಗೆದ್ದನೇ?"

"ಗೆದ್ದನೊ ಸೋತನೊ ಗೊತ್ತಾಯ್ತದಿರು. ಅವುನೆದ್ರುಗೆ ನಿಂತಿರೊ ಎಡೂರಪ್ಪನೂ ಅಷ್ಟು ಸುಲಬಲ್ಲ ಕಣೊ. ಸಾಮಾನ್ಯವಾದ ಜನ ಏನಂತಾ ಅವುರೆ ಗೊತ್ತೇ?"

"ಏನಂದರ್ಲಾ?"

"ಸಾಲಮನ್ನಾ ಮಾಡ್ಯವುನೆ, ಸರಾಪು ನಿಲ್ಲಿಸ್ಯವುನೆ, ಸೈಕಲ್ ಕೊಟ್ಟವುನೆ, ಈ ಅಪ್ಪ ಮಕ್ಕಳು ಅವುಕಾಸ ಕೊಟದ್ರೆ ಇನ್ನು ಏನೇನೊ ಕೊಡತಿದ್ದ ಅಂತ ಮಾತಾಡ್ತ ಅವುರೆ."


"ಅವು ಯಾವೂ ಬಜೆಪಿಗಳು ಅಂಗೆ ಮಾತಾಡ್ತವೆ ಕಂಡ್ಯ. ಆದಿರ್ಲಿ ಈ ಅಪ್ಪ ಮಕ್ಕಳ ಸುದ್ದಿ ಎಲ್ಲಿಗೆ ಬತ್ತೂ?"

"ವಳೆನರಸೀಪುರದಲ್ಲಿ ರೇವಣ್ಣ ಪುಡಸಾಮಿ ಸ್ಟ ಎದ್ರಿಗೆ ಏದಿಕಂಡಡೋಯ್ತಾ ಅವುನ ಇನ್ನ ರಾಮನಗರದಲ್ಲಿ ಯಗಡೆ ಮಗಳು ಬಂದು ನಿಂತಿರದ್ರಿಂದ ಕುಮಾರಸ್ವಾಮಿ ನಿಶ್ಚಿಂತ್ಯಾಗ್ಯವುನೆ."

"ಯಗಡೆ ಮಗಳ್ಯಾಕೆ ತಂದು ನಿಲ್ಲುಸಬೇಕಿತ್ತಲ್ಲಿ? ಸಿ.ಎಂ. ಲಿಂಗಪ್ಪಿರಲಿಲ್ವೆ? ಅವುನೊಂದು ಸತಿಯಾ ಅಂಬುರೀಸನ್ನೆ ಸೋಲಿಸಿದ್ದ."

"ಸೋಲಿಸಿದ್ದ ಸರಿ ಕಣೊ. ಈ ಕಾಂಗ್ರೆಸ್ ಬಡ್ಡೆತ್ತವುಕೆ ಯಾರೇಳ್ತರದಾ? ತಮ್ಮ ಪಾರ್ಟಿ ಅಂದ್ರೆ ಯಲ್ಲಾ ಕಡೆಲೂ ನೀರ ನಿಂತಂಗೆ ನಿಂತಿರತದೆ ಹೋಗಿ ಈಜಾಡದಷ್ಟೇ ಬಾಕಿ ಅನ್ನಕಂಡಿರತವೆ."

"ಎಜ್ಜಾಟ್ಟ ಕರಟ್ ಕಣೊ ಉಗ್ರಿ ಅವು ಈ ಶತಮಾನದಲ್ಲಿ ಬುದ್ಧಿ ಕಲಿಯದಿಲ್ಲ ಬುಡು. ಜನ ಈ ಬಜೆಪಿ-ದಳ ಕಂಡ್ರೆ ಕ್ಯಾಕರಿಸಿ



ಅಪ್ಪನನ್ನೇ ಅಪ್ಪ ಅನ್ನದೋನು ಚಿಕ್ಕಪ್ಪನ್ನ ಅಪ್ಪ ಅಂದಾನಾ?

'ಅವರ ಸಗಟು ಮತಗಳೊ?

ನಮ್ಮ ಅಮೂಲ್ಯ ಜೀವಗಳೊ?'

ಅದ್ಭುತವಾದ ಪ್ರಶ್ನೆ. ಅಧಿಕಾರದ ಆಮಿಷಕ್ಕಾಗಿ ಜೀವವನ್ನು ಬಲಿ ಕೊಡುವುದು ಎಂದರೇನು ಅರ್ಥ. ಅಧಿಕಾರ ಬರುತ್ತೆ ಹೋಗುತ್ತೆ, ಆದರೆ ಈ ಜೀವ ಅನ್ನುವುದು? ಒಮ್ಮೆ ಹೋದರೆ ಮತ್ತೆ ಬರದು. ಆದರಿಂದಲೇ ಅದು ಅಮೂಲ್ಯ.

ದಾರ್ಶನಿಕರ ಮಾತಿನಂತಿದೆ ಅಲ್ಲವೆ? ಯಾರು ಇದನ್ನು ಹೇಳಿದ್ದು? ಭಾರತೀಯರ ಜೀವ ಕುರಿತು ಕಳಕಳಿ ಇರುವ ಭಾರತೀಯ ಜನತಾಪಕ್ಷ!

ಹೌದು, 'ಅವರು' ಎಂದರೆ ಯಾರು?

ಗುಜರಾತಿನಲ್ಲಿ ನರಮೇಧ ಮಾಡಿದವರೆ?

ಅಲ್ಲ, ಅಲ್ಲ, ದೇಶದ ರಕ್ಷಕರು ಅವರು!

ಎನ್‌ಕೌಂಟರ್ ಹೆಸರಿನಲ್ಲಿ ಅಮಾಯಕರನ್ನು ಬಲಿ ತೆಗೆದುಕೊಂಡವರೆ?

ಅಲ್ಲ, ಅಲ್ಲ, ಅಲ್ಲ, ದೇಶದ ಸೇವಕರು ಅವರು!

ಅಭಿವೃದ್ಧಿಯ ಹೆಸರಿನಲ್ಲಿ ಬಡವರ ಬದುಕ ಕಿತ್ತುಕೊಂಡವರೆ?

ಅಲ್ಲ, ಅಲ್ಲ, ಅದು ರಾಷ್ಟ್ರಕ್ಕೇ ಮಾದರಿ!

ಹಾಗಾದರೆ ಯಾರು ಆ 'ಅವರು'?

ಇನ್ನಾರು, ನೀಚ ಮುಸಲ್ಮಾನರು!

ಚುನಾವಣಾ ಅಭ್ಯರ್ಥಿಗಳ ಪಟ್ಟಿ ನೋಡಿ. ಒಬ್ಬನೇ ಒಬ್ಬ ಮುಸಲ್ಮಾನನಿಗೂ ಸ್ಪರ್ಧಿಸಲು ಅವಕಾಶ ನೀಡಿದ ಕಳಂಕ ಭಾರತೀಯ ಜನತಾ ಪಕ್ಷಕ್ಕೆ ಇಲ್ಲ! 'ಅವರು' ಅಂದರೆ 'ಅವರು', ಈ ದೇಶದ ಪ್ರಜೆಗಳಲ್ಲ ಅವರು! 'ಅವರ' ಮತ ಭಾಜಪಕ್ಕೆ ಬೇಕಿಲ್ಲ 'ಅವರ' ಬೆಂಬಲ ಇಲ್ಲದೆ ಅಧಿಕಾರಕ್ಕೆ ಬರುವ ದಾರ್ಷ್ಟ್ಯ ಇದೆ ಆ ಪಕ್ಷಕ್ಕೆ!

ಇನ್ನು 'ನಮ್ಮ' ಎಂದರೆ ಯಾರ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ, ಹಿಂದೂಗಳ ಎಂಬುದೇ ಅದರ ದಿಟ್ಟ ಉತ್ತರ!

ಹೌದು, ಹಿಂದೂಗಳು ಎಂದರೆ ಯಾರು?

ಭಾಜಪ ಬೆಂಬಲಿಗರು!

'ಅವರ'ನ್ನು ಕೊಂದರೆ ದೇಶಭಕ್ತ! 'ನಮ್ಮ'ನ್ನು ಕೊಂದರೆ ರಾಷ್ಟ್ರದ್ರೋಹಿ!

ಭಾಜಪ ಅಧಿಕಾರಕ್ಕೆ ಬಂದರೆ ಅಲ್ಪಸಂಖ್ಯಾತರೊಬ್ಬರಿಗೆ ಪ್ರಮುಖ ಸ್ಥಾನ ಎಂದು ಮುಖ್ಯಮಂತ್ರಿ ಕನಸಿನ ಯಡಿಯೂರಪ್ಪ ಹೇಳಿದ್ದಾರೆ ನಿಜ. ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಿಲ್ಲ; ಇನ್ನು ಎಂಎಲ್‌ಸಿ ಮಾಡಿ ಮಂತ್ರಿ ಮಾಡುವುದು ಆಗುವ ಹೋಗುವ ಮಾತಲ್ಲ, ಅಪ್ಪನನ್ನೇ ಅಪ್ಪ ಅನ್ನದೋನು ಇನ್ನು ಚಿಕ್ಕಪ್ಪನನ್ನು ಅಪ್ಪ ಅಂದಾನಾ. 'ಅವರ', 'ನಮ್ಮ' ಹೆಸರಿನಲ್ಲಿ ಮತ್ತೊಂದು ದೇಶ ವಿಭಜನೆಗೆ ಹೆಮ್ಮೆಯ ಹೆಜ್ಜೆ ಇಟ್ಟಿದೆ ಭಾಜಪ!

* * * * * * *

ಭಾರತೀಯ ಜನತಾಪಕ್ಷದ ಜಾಹೀರಾತು.

ರೂಪದರ್ಶಿ? ಇನ್ನಾರು ಸುಳ್ಳುಗಾರ್ತಿ ಸುಷ್ಮಾ!

ಬೆಲೆ ಏರಿಕೆ ಬಗ್ಗೆ ಆತಂಕ; ದೀನದಲಿತರ ದಿನನಿತ್ಯದ ನೋವಿನ ಬಗ್ಗೆ ಕಳಕಳಿ; ತಲೆಗೊಂದು ಸೂರು ಕಾಣುವ ಆತುರದಲ್ಲಿರುವವರಿಗೆ ಅನುಕಂಪ; ಭಯೋತ್ಪಾದಕ ನಿಗ್ರಹದ ಬಗ್ಗೆ ಆಗ್ರಹ; ಅಫ್ಜಲ್ ಗುರುವಿಗೆ ಕೂಡಲೇ ಗಲ್ಲಿಗೇರಿಸುವ ನಿರ್ಧಾರ ಹೀಗೆ ಹತ್ತು ಹಲವು....

ಇದೆಲ್ಲ ಸುರಿದದ್ದು ಎಲ್ಲಿ ಅಂತೀರಿ, ಉದಯ ಟಿವಿಯಲ್ಲಿ; 'ಕಾಮಿಡಿ ಟೈಮ್'ನಲ್ಲಿ!

ಸುಷ್ಮಾ ಸೋಗಲಾಡಿತನದ ಆಶ್ವಾಸನೆಯೂ 'ಕಾಲುಕ್ ರಿಲೀಫ್'ಗಾ ಅಂತ....

* * * * * * *

ಯಡಿಯೂರಪ್ಪ ಬಹಿರಂಗ ಪತ್ರ ಬರೆದಿರುವುದು ಪತ್ರಿಕೆಗಳಲ್ಲಿ ಜಾಹೀರಾತಾಗಿ ಬಂದಿದೆ. ಅದನ್ನು ಓದಿದಾಗ ಅವರ ಅಂತರಂಗದಲ್ಲಿ ಏನಿದೆ ಎಂಬುದನ್ನು ತಿಳಿಯುವ ಕುತೂಹಲ ಆಯಿತು. ಬಿಡುವಿಲ್ಲದ ಅವರ ಓಡಾಟದ ನಡುವೆ ಕಾಣಲು ಆಗಲಿಲ್ಲ, ಇತ್ತೀಚಿನವರೆಗಿನ ಅವರ ನಡವಳಿಕೆಯನ್ನು ನೋಡಿ ಅವರ ಅಂತರಂಗದಲ್ಲಿರುವುದನ್ನು ಊಹಿಸಿದೆ. ಅದರ ವಿವರ ಇಲ್ಲಿದೆ:

ಯಡಿಯೂರಪ್ಪನವರ ಅಂತರಂಗ ಪತ್ರ

ಮತ ನೀಡುವ ಮುತ್ಸಾಳರೆ,

ಇಪ್ಪತ್ತು ತಿಂಗಳ ನಮ್ಮ ಅಧಿಕಾರವನ್ನು ಕಂಡಿದ್ದೀರಿ. ಅಧಿಕಾರ ಕೊಡಲಿಲ್ಲ ಎಂಬುದಾಗಿ ಜಾತ್ಯತೀತ ಜನತಾದಳದ ವಿರುದ್ಧ ಕೆಂಡಕಾರಿದ್ದು ಹೀಗೆ ಬಿಸಿತುಪ್ಪವಾಗುತ್ತದೆ ಎಂದು ಎಣಿಸಿರಲಿಲ್ಲ, ಬಂಗಾರಿಯನ್ನು ನನ್ನ ಎದುರು ಕಣಕ್ಕಿಳಿಸಿ ನಾನು ಸೋಲುವಂತೆ ಮಾಡಿರುವುದನ್ನು ನೆನಪಿಸಿಕೊಂಡರೆ ನಿದ್ರೆಯೂ ನನ್ನ ಬಳಿ ಸುಳಿಯುತ್ತಿಲ್ಲ, ಮಾಧ್ಯಮಗಳು ನೀಡುತ್ತಿರುವ ಸಮೀಕ್ಷೆ ವರದಿಗಳು ಸತ್ಯಕ್ಕೆ ಸಮೀಪವಾಗಿರುವುದು ಸೂರ್ಯ ಚಂದ್ರರಿರುವಷ್ಟೇ ಸತ್ಯ. ನಾವು ಅಧಿಕಾರದ ಸಮೀಪವೂ ಬರಲಾರೆವು ಎಂಬುದು ಅಷ್ಟೇ ಖಚಿತ. ವಿರೋಧ ಪಕ್ಷದ ನಾಯಕನಾಗಿ ಬರುವ ಸವಲತ್ತುಗಳನ್ನು ಅನುಭವಿಸುತ್ತಿರೋಣ ಎಂದರೆ ಗೆಲ್ಲುವ ಸೂಚನೆಗಳೂ ಇಲ್ಲ, ನಿಜಲಿಂಗಪ್ಪ-ಕಂಠಿ ಅವತಾರವನ್ನು ಮತ್ತೆ ಎತ್ತೋಣ ಎಂದರೆ ನಾನು ನಿಜಲಿಂಗಪ್ಪ ಅಲ್ಲ, ಕಂಠಿಯಂತಹ ಶಿಷ್ಯರೂ ನನಗಿಲ್ಲ, ಅಧಿಕಾರ ಇರುವುದಿಲ್ಲ ಅಂದ ತಕ್ಷಣ ದೂರ ಸರಿಯುವವರೇ ಎಲ್ಲ, ಬಾಗಲಕೋಟೆಯಂತಹ ಕ್ಷೇತ್ರವೂ ನನಗಿಲ್ಲ, ಆದರೂ ಸತ್ತ ಗಂಡ ಸ್ವಪ್ನಕ್ಕೆ ಬಂದಹಾಗೆ ಅಧಿಕಾರದ ಕನಸು ಬೀಳ್ತಾನೆ ಇರ್ತದೆ. ಒಂದು ವೇಳೆ ಅಧಿಕಾರಕ್ಕೆ ಬಂದೇಬಿಟ್ಟರೆ... ನಾನು ಏನು ಮಾಡ್ತೀನಿ ಎನ್ನುವುದನ್ನು ಇಲ್ಲಿ ತಿಳಿಸಬಯಸುತ್ತೇನೆ.

1. ಆದ್ಯತೆಯ ಮೇಲೆ ಕೆಲಸ ಕಾರ್ಯಗಳನ್ನು ಮಾಡಲು ಇಚ್ಛಿಸುತ್ತೇನೆ. ಮನೆಗೆದ್ದು ಮಾರುಗೆಲ್ಲು ಎಂಬ ಕನ್ನಡದ ಮಾತಿನಲ್ಲಿ ನನ್ನ ಅಚಲ ವಿಶ್ವಾಸ. ಈಗ ಮನೆಯನ್ನು ಗೆಲ್ಲಬೇಕಾಗಿದೆ. ಆ ಹಾಳಾದ ಕೆ.ಎಸ್. ಈಶ್ವರಪ್ಪ ಎಂಬ ಹೊಟ್ಟೆಬಾಕ ಶಿವಮೊಗ್ಗ ಅದರ ಸುತ್ತಮುತ್ತ ಇರುವ ಜಾಗಗಳನ್ನೆಲ್ಲ ತನ್ನ ವಶ ಮಾಡಿಕೊಂಡಿದ್ದಾನೆ. ಸಾಮಾನ್ಯ ಮಂತ್ರಿಯಾದ ಅವನೇ ಇಷ್ಟೊಂದು ಆಸ್ತಿಯನ್ನು ಕಬಳಿಸಬೇಕಾದರೆ ಉಪಮುಖ್ಯಮಂತ್ರಿಯಾದ ನೀನು ಮಾಡಿದ್ದೇನು ಎಂದು ಮನೆಮಂದಿಯೆಲ್ಲ ಪ್ರಶ್ನಿಸುತ್ತಿದ್ದಾರೆ. ಸಾಕಷ್ಟು ಆಸ್ತಿಪಾಸ್ತಿಯನ್ನು ಗಳಿಸಿದ್ದರೂ ಈಶ್ವರಪ್ಪನಷ್ಟು ಮಾಡಿಲ್ಲ ಎಂಬ ಕೊರಗು ನನಗೂ ಇದೆ. ಮುಖ್ಯಮಂತ್ರಿ ಅಂತ ಒಂ ಆದರೆ ಇಡೀ ಶಿವಮೊಗ್ಗ ಮಾತ್ರ ಅಲ್ಲ, ರಾಜ್ಯದ ಪ್ರಮು ನಗರಗಳನ್ನೆಲ್ಲ ನುಂಗಿ ಪುತ್ರ-ಪುತ್ರಿಯರ ತೀವ್ರ ನಿರಾಶೆಗೊಂ ಮನಸ್ಸನ್ನು ಹರ್ಷದಾಯಕವಾಗಿ ಮಾಡುವ ಜವಾಬ್ ನನ್ನ ಮೇಲಿದೆ. ಅದನ್ನು ದೇಶಭಕ್ತಿ, ರಾಷ್ಟ್ರ ಪ್ರೇಮ ಹೆಸರಿನಲ್ಲಿ ಮಾಡಿಯೇ ತೀರುತ್ತೇನೆ.

2. ನನ್ನನ್ನು ಮುಖ್ಯಮಂತ್ರಿ ಮಾಡಲು ಮಠಾಧೀಶ ದೇವರನ್ನು ಮರೆತು ನನ್ನ ಭಜನೆ ಮಾಡುತ್ತಿದ್ದುದ್ದು ಗಮ ಬಂದಿದೆ. ಅವರ ಭಜನಾಕೈಂಕರ್ಯಕ್ಕೆ ತಕ್ಕ ಪ್ರತಿಫ ನೀಡಲು ನಿರ್ಧರಿಸಿದ್ದೇನೆ. ಆಯವ್ಯಯದಲ್ಲಿಯೇ ಮಠಗ ಇಂತಿಷ್ಟು ಹಣ ನೀಡಬೇಕೆಂದು ಕಾನೂನು ತರುತ್ತೇ ಮಠಾಧೀಶರು ಮಾಡಬಹುದಾದ ಎಲ್ಲ ಕಾನೂನುಬಾಹಿ ಚಟುವಟಿಕೆಗಳಿಗೂ ಸರ್ಕಾರದ ಬೆಂಬಲ ನೀಡಲಾಗುತ್ತ ಈ ನಿಯಮ ಅಲ್ಪಸಂಖ್ಯಾತರಿಗೆ ಅನ್ವಯಿಸುವುದಿ ಕಾನೂನಿನ ರೀತಿಯೇ ಅವರು ತಮ್ಮ ಚಟುವಟಿಕೆಗಳ ನಿರತವಾಗಿದ್ದರೂ ಅವರನ್ನು ಶಿಕ್ಷೆಗೆ ಒಳಪಡಿಸಲಾಗುತ್ತ


ಅಣಕ

ಎಚ್.ಎಲ್. ಕೇಶವಮೂರ್ತಿ

3. ಗೋಮಾತೆಯ ಮಾಂಸ ತಿನ್ನುವುದು ಅಪರಾ ಇಂತಹ ಕೃತ್ಯಗಳಲ್ಲಿ ಭಾಗವಹಿಸುವವರು ದೈವದ್ರೋಹಿಗ ಇಂತಹವರನ್ನು ಕಠಿಣ ಶಿಕ್ಷೆಗೆ ಒಳಪಡಿಸಲಾಗುವುದು

4. ಭಯೋತ್ಪಾದಕರನ್ನು ಕಂಡಲ್ಲಿ ಗುಂಡಿ ಸಾಯಿಸಲಾಗುವುದು. ಅವರನ್ನು ಗುರುತು ಹಿಡಿಯುವು ಬಹಳ ಸುಲಭ. ಅಲ್ಪಸಂಖ್ಯಾತ ವರ್ಗದವನಾಗಿದ್ದು ದಿ ಐದು ಸಲ ನಮಾಜ್ ಮಾಡುವವನು; ಕುರಾನ್ ಅ ಅಭ್ಯಾಸ ಮಾಡುವವನು ಭಯೋತ್ಪಾದಕ ಎನ್ನುವು ನಿಶ್ಚಯ. ಇದನ್ನು ನನ್ನ ಸರ್ಕಾರ ಮಾಡಲು ಪಣ ತೊಟ್ಟ

5. ದೇಶದ ಸಂವಿಧಾನ ವೈದಿಕ ಪರಂಪರೆ ವಿರೋಧಿ. ಇದನ್ನು ಅನೇಕ ಬುದ್ಧಿಜೀವಿಗಳ ನ್ಯಾಯಾಧೀಶರು, ಮಠಾಧೀಶರು ಮನಗಂಡಿದ್ದಾ ಇವರೆಲ್ಲರ ಮನಸ್ಸಂತೋಷಕ್ಕಾಗಿ, ಜನತೆಯ ಉದ್ಧಾರಕ ಈಗ ಇರುವ ಸಂವಿಧಾನವನ್ನು ಕಿತ್ತೊಗೆಯಲಾಗುವು ಇದು ರಾಜ್ಯದ ಮುಖ್ಯಮಂತ್ರಿಯ ಕೈಲಿ ಅಸಾಧ್ಯ ಎ ಅರಿವು ನನಗಿದೆ. ಆದುದರಿಂದ 'ಭಾರತೀಯ ಸಂವಿಧ



ಯೋ ಜಾಗನಾದ್ರು ಸರಿಯಾಗಿ ಯೂಜ್ ಮಾಡಿಕಳದು
ವೇನೊ?" ಎಂದು ವಾಟಿಸ್ಗೆ ಬಂದ.

"ಅದೆಲ್ಲಿ ಉಗಿತಾಯಿದ್ವರ್ಲ?"

"ನೀನಿಲ್ಲೆ ಕುಂತಿದ್ರೆ ಯಂಗೊತ್ತಾಗಬೇಕಕ್ಕ? ಅಲ್ಲೊಂದೂರಿಗೆ ಓಟು
ಲ್ಲಾಗಿದ್ದು ನನ್ನ ಫ್ರೆಂಡ್ಸು, ಆ ಮನೆ ಹೆಂಗಸು, ದ್ಯಾವೇಗೌಡನ ಸುದ್ದಿ
ತ್ತಾವಿ. ಮದ್ಯಾಟಿಗೆ ನದಿರಿ ಅಂತಂತೆ. ಅದ್ರೆ ಕುಮಾರಸ್ವಾಮಿ ಕಂಡ್ರೆ
ಂಗೆ ಇಷ್ಟವಂತೆ. ಇದಕೇನೇಳ್ತೀ?"

"ಇಸಿಸಿ ದ್ಯಾವೇಗೌಡಿಲ್ದೆ ಕುಮಾರಸ್ವಾಮಿ ಬಂದಿದ್ದನೇನ್ಲ?" ಎಂದ
ಮಾವ.

"ಬಂದಿಲ್ಲ ಸರಿ ದ್ವಡಪ್ಪ, ದ್ಯಾವೇಗೌಡ ಮಾಡೋ ಕ್ಯಲ್ಸ ಅವುನಿಗೇ
ಲ್ಲಿ, ಅದನ್ನಲ್ಲ ಟಿ.ವಿ.ಲಿ ನೋಡಿರೊ ಜನ ಇದ್ಯಾಕಿಷ್ಟು ಮಟ್ಟಿಗೆ
ದೆ ಅಂತ ಲ್ಯಕ್ಕ ಹಾಕ್ತರೆ?"

"ಅಷ್ಟು ಕೆಟ್ಟಲ್ಲ ಬುಡ್ಡ."

"ಅಷ್ಟು ಕೆಟ್ಟಲ್ಲ ಅಂದ್ರೆ ಅಂತೂ ಕೆಟ್ಟವುನೆ ಅಂತ ಒಪ್ಪಿಗೊಂಡಂಗಾಯ್ತು.
ಪ್ಪಾ, ಇಂಡಿಯಾ ದೇಸದ ಹಿಸ್ಟ್ರಿಲಿ ಮಾಜಿ ಪ್ರಧಾನಿಯೊಬ್ಬ ಇಷ್ಟು
ಮಟ್ಟಿಕೆ ಇಳಿಬಾರದಿತ್ತು."

"ಎಲ್ಲಿಳದವ್ನೆ? ಸುಮ್ಮನೆ ಕರುಬತನದ ಮಾತಾಡಬ್ಯಾಡ."

"ನಾನ್ಯಾಕ್ಕರುಬ್ಲಿ? ನಾನೇನು ಅವುನ ದಾಯಾದಿನೆ? ನಾನು
ಕೊಂಟದ್ದೇನಪ್ಪಾ ಅಂದ್ರೇ, ಮಾಜಿ ಪ್ರಧಾನಿ ಈ ದೇಸದ ಚುನಾವಣೆ
ಸಮ್ಮಿತೆನ ಗೌರವುಸಬೇಕು. ನಿಮ್ಮ ಟೈಮಾಯ್ತು ಸಾರ್ ಅಂತ
ದ್ರೆ, ಹೇಳಿದೋನ್ನ ಬೋದು ಕಾನೂನು ಮಾಡಿದೋನ್ನು ಬೋದ್ರೆ
ಮರಿಯಾದಿ ಹೋಯ್ತದೆ?"

"ಯಾರ್ದ್ವಾರ ಹೋಗ್ಲಿ, ಕಾಂಗ್ರೆಸ್ ಕ್ಯಾಂಡೇಟ್ ಸುರೇಶ್‌ಗೌಡನಿಗೆ ವಡದು
ರುದವುರಂತಲ್ಲಾ, ಯಾರ್ಲ?"

"ಇನ್ಯಾರು? ಚೆಲುವರಾಯಸ್ವಾಮಿ ಅಣ್ಣತಮ್ಮದಿರಂತೆ."

"ಅಂಗರೆ ಶಿವರಾಮೇಗೌಡ ಹೋದ ಅಂದ್ರೆ ಇವುನೊಬ್ಬ ಹುಟಗಂಡನಲ್ಲ
."

"ಅಂತ ಶಿವರಾಮನ್ನೆ ವಿಭಾಯಿಸಿರೊ ಜನಕೆ ಇವುನ್ಯಾವು ಲ್ಯಕ್ಕ
ಪ್ಪ? ■

ಅದು ಅಭಾರತೀಯ ಆಗಿರುವುದರಿಂದ ಅದನ್ನು ನೆಪ ಮಾತ್ರ
ಕೊಂಡು 'ಮನುಧರ್ಮ ಶಾಸ್ತ್ರ' ನೀಡಿರುವ ಸೂಚನೆಗಳ ಪ್ರಕಾರ ಆಡಳಿತ
ಬಾಗುವುದು.

ಟ್ಟಾರೆ ಹಿಂದೂ ಸಂಸ್ಕೃತಿಯನ್ನು ರಾಜ್ಯದೆಲ್ಲೆಡೆ ತರುವ ಪ್ರಯತ್ನ ನಡೆಸುವುದು
ತ!

ವುಗಳು, ಇನ್ನೂ ಇಂತಹ ಹಲವು ಯೋಜನೆಗಳು ಜಾರಿಗೆ ಬರಲು-
ಪವೇ ಪರಿಹಾರ.' ಇದನ್ನು ಮನಗಂಡು ಭಾಜಪಕ್ಕೆ ಮತ ನೀಡಿ.

ಂತು ನಿಮ್ಮ ಆಡಳಿತಾಕಾಂಕ್ಷಿ,

.ಎಸ್. ಯಡಿಯೂರಪ್ಪ

* * * * * * *

ಮಠಾಧೀಶರು ಯಾರು?

ದೇವರ ಏಜೆಂಟರು!

ದೇವರು ಬಂದು ಮತ ಯಾಚಿಸಲಾರ. ಆದಕ್ಕೇ ತನ್ನ ಏಜೆಂಟರನ್ನ
ಸಿದ್ದಾನೆ!

ಏಜೆಂಟರುಗಳಿಂದ ಈಗ ಮತ ಯಾಚನೆ!

ರಡು ಕ್ಷೇತ್ರಗಳಲ್ಲಿ ಈ ಭೂ ಭಗವಂತರು ನೇರವಾಗಿ ಮತ
ಸುತ್ತಿರುವುದು ವರದಿಯಾಗಿದೆ.

ದರಲ್ಲಿ ಯಾವ ಅಪರಾಧವೂ ಇಲ್ಲ. ಎಲ್ಲ ಮಠಾಧೀಶರು, ಮುಲ್ಲಾಗಳು,
ಗಳು ಮಾಡುತ್ತಿರುವುದು ಇದನ್ನೇ. ಅವರು ಪರೋಕ್ಷವಾಗಿ
ತ್ತಿರುವುದನ್ನು ಇವರು ಪ್ರತ್ಯಕ್ಷ ಮಾಡುತ್ತಿದ್ದಾರೆ ಅಷ್ಟೆ! ಹೇಗಿದ್ದರೂ
ಾರಣಿ ಪ್ರತ್ಯಕ್ಷ ದೇವತಾ' ತಾನೆ!

* * * * * * *

ಬಾರಿಯ ನೀತಿಸಂಹಿತೆ ಕಟ್ಟುನಿಟ್ಟಾಗಿ ಜಾರಿಗೆ ಬಂದಿರುವಂತಿದೆ.
ರಾತ್ರಿ ಯವಾರ'ದವರಿಗೆ ಭಾರೀ ಕಷ್ಟ. ದುಡ್ಡು ಇದೆ, ಹಂಚುವಂತಿಲ್ಲ!
ಇದೆ, ಕುಡಿಸುವಂತಿಲ್ಲ! ಶಾನೆ ಕಷ್ಟ ಅಲ್ಲವಾ!

ದಕ್ಕೆ ಏನು ಪರಿಹಾರ ಕಂಡುಕೊಂಡಿದಾರೆ ಅನ್ನುವ ಕುತೂಹಲ ಕಾಡುತ್ತಿತ್ತು.
ನೆ ಮನೆಯಲ್ಲಿ 'ರಾತ್ರಿ ಯವಾರ' ಆಸಾಮಿ ಹಿಡಿದು ಕೇಳಿದೆ-

ಂಗದೊ ಚುನಾವಣೆ'

ದೀತಾ ಅದೆ' ಅಂದ

ಮಾರ್‍ದು ಜೋರು?'

ಬ್ಬರೂ ಸಮಸಮ ಅವ್ರೆ'

ತ್ರಿ ಯವಾರ'

ದೂ ನಡೀತ ಅದೆ'

ಯವಾರ ಕಷ್ಟ ಅಲ್ವೇನೋ?'


ಜೆಂಟರಿಲ್ಲ, ಎಲ್ಲಾ ನೋಡ್ತಾರೆ ಬುಡಣ್ಣ'

ದಿಸಿ ಕೇಳಿದೆ. ಏಜೆಂಟರು ಮೊದಲೇ ತಂದು ಸ್ಟಾಕ್ ಮಡಗಿದ್ದಾರಂತೆ.
ದರೆ ಅದನ್ನು ಹಂಚುತ್ತಾರಂತೆ. ಸಾಧ್ಯ ಇಲ್ಲವಾದರೆ? 'ಅದೇನ್
ಅದ ಕುಡ್ಕಳಿ' ಅಂತ ಹೇಳಿ ಹಣವನ್ನೇ ಕೊಡ್ತಾರಂತೆ!

ಂಡಾದವನು ಯಾರು?

ತದಾರ ಅಲ್ಲ, ಏಜೆಂಟರು! ■

ಶಿವಮೊಗ್ಗ: ಕಾಂಗ್ರೆಸ್‌ನ ತಲೆಹಿಡುಕತನ ಈಶ್ವರಪ್ಪನಿಗೆ ನೆರವು!



ಶಿವಮೊಗ್ಗದಲ್ಲಿ ಬಿಜೆಪಿಯ ಕೆ.ಎಸ್.ಈಶ್ವರಪ್ಪ ತನ್ನ ಗೆಲುವನ್ನು ಸುಗಮ ಮಾಡಿಕೊಂಡಿದ್ದಾರೆ. ಕಾಂಗ್ರೆಸ್‌ನಿಂದ ಪ್ರಬಲ ಅಭ್ಯರ್ಥಿಯೇನಾದರೂ ಸ್ಪರ್ಧಿಸಿದರೆ ತಾನೆಲ್ಲಿ ಮೂಲೆಗುಂಪಾಗುತ್ತೇನೋ ಎಂಬ ಭಯದಿಂದ ಕಾಂಗ್ರೆಸ್‌ನಲ್ಲಿರುವ ಕೆಲ ತಲೆಹಿಡುಕರನ್ನು ಬುಟ್ಟಿಗೆ ಹಾಕಿಕೊಂಡು ಕಾಂಗ್ರೆಸ್‌ನಿಂದ ಇಸ್ಮಾಯಿಲ್ ಖಾನ್ ಎಂಬ ದುರ್ಬಲ ಕ್ಯಾಂಡಿಡೇಟನ್ನು ಕಣಕ್ಕಿಳಿಸುವಂತೆ ಮಾಡಿಕೊಂಡಿದ್ದಾರೆ. ಇದರಿಂದ ಕಾಂಗ್ರೆಸ್‌ನಲ್ಲಿರುವ ಮೀರ್ ಅಜೀಜ್ ಅಹಮ್ಮದ್‌ನಂತಹ ರಣೋತ್ಸಾಹಿ ರಾಜಕಾರಣಿಗಳು ಅಸಮಾಧಾನದ ಹೊಗೆಯೆಬ್ಬಿಸಿದ್ದಾರೆ.

ಈಶ್ವರಪ್ಪನ ಹಾದಿ ಸುಗಮವಾಗುತ್ತಿದ್ದಂತೆ ಆತ ಕ್ಷೇತ್ರದ ಬ್ರಾಹ್ಮಣರಿಗೆ ಭೂರಿ ಭೋಜನ, ಸೂಕ್ತ ಕಾಣಿಕೆ ಕೊಟ್ಟು ವಿಜಯವನ್ನು ಎದುರು ನೋಡುತ್ತಿದ್ದಾರೆ. ಆದರೂ ಹಿಂದೆಂದೂ ಇಲ್ಲದಂತೆ ಈ ಬಾರಿ ಬ್ರಾಹ್ಮಣರಲ್ಲಿಯೂ ಒಂದು ರೀತಿಯ ಅಸಮಾಧಾನ ಹೊಗೆಯಾಡುತ್ತಿರುವುದಂತೂ ನಿಜ. ಏಕೆಂದರೆ, ಶಿವಮೊಗ್ಗ, ಸಾಗರ ಮುಂತಾದ ಕ್ಷೇತ್ರದಲ್ಲಿ ಬ್ರಾಹ್ಮಣರು ಗಣನೀಯ ಪ್ರಮಾಣದಲ್ಲಿದ್ದರೂ ಅವರನ್ನು ಪ್ರತಿನಿಧಿಸಲು ಒಬ್ಬನೂ ಬ್ರಾಹ್ಮಣ ಕಣದಲ್ಲಿರದಿರುವುದು ಅವರ ಅಸಮಾಧಾನಕ್ಕೆ ಕಾರಣವಾಗಿದೆ. ಈ ಹಿಂದೆ "ಈ ಬ್ರಾಹ್ಮಣರ ಕತೆ ಬಿಡ್ರಿ. ಊಟ ಹಾಕಿ ದಕ್ಷಿಣೆ ಕೊಟ್ರೆ ಓಟು ಹಾಕ್ತಾರೆ" ಎಂದು ಲೋಕಾಭಿರಾಮವಾಗಿ ಕೆ.ಎಚ್.ಶ್ರೀನಿವಾಸ್ ಹೇಳಿದ ಮಾತು ಬ್ರಾಹ್ಮಣರಿಗೆ ತಲುಪಿ ಅವರೆಲ್ಲ ಶ್ರೀನಿವಾಸ್ ಅವರನ್ನು ತಿರಸ್ಕರಿಸಿದ್ದರು. ಈಗ ಅವರೆಲ್ಲ ಮತ್ತೆ ಶ್ರೀನಿವಾಸ್ ಅವರನ್ನು ಸ್ವೀಕರಿಸುವ ಹಂತಕ್ಕೆ ಬಂದಾಗ ಶ್ರೀನಿವಾಸ್‌ಗೆ ಕಾಂಗ್ರೆಸ್ ಟಿಕೆಟ್ ಸಿಗಲಿಲ್ಲ. ಹಾಗಾಗಿ ಶಿವಮೊಗ್ಗದ ಜನತೆ ಜೆಡಿಎಸ್‌ನ ಶ್ರೀಕಾಂತ್ ಕಡೆ ನೋಡತೊಡಗಿದ್ದಾರೆ.

ಯಾವಾಗಲೂ ಶಿವಮೊಗ್ಗದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳು ಸೆಣಸುತ್ತಿದ್ದವು. ಆದರೆ, ಈ ಬಾರಿ ಬಿಜೆಪಿ ಮತ್ತು ಜೆಡಿಎಸ್‌ಗಳು ಕಾದಾಟಕ್ಕಿಳಿದಿದ್ದು ಕಾಂಗ್ರೆಸ್ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಿದೆ.

ಇನ್ನೂ ಒಂದು ವಿಚಾರ ಎಂದರೆ ಎಚ್.ಡಿ.ದೇವೇಗೌಡರು ಈಶ್ವರಪ್ಪನೊಂದಿಗೆ ಒಳ್ಳೆಯ ಸಂಬಂಧ ಉಳಿಸಿಕೊಂಡಿದ್ದಾರೆ. ಭವಿಷ್ಯದಲ್ಲಿ ಗೌಡರು ತಮ್ಮ ಮಕ್ಕಳ ಮೂಲಕ ಇನ್ನೊಂದು ಮಜಲಿನ ರಾಜಕೀಯಾಟವನ್ನು ಆಡಲು ಈಶ್ವರಪ್ಪ ನೆರವಿಗೆ ಬರಲಿದ್ದಾರೆಂಬುದು ಅವರ ಲೆಕ್ಕಾಚಾರ. ಹಾಗಾಗಿ ಯಡ್ಡಿ ಸೋಲಬೇಕು, ಈಶ್ವರಪ್ಪ ಗೆಲ್ಲಬೇಕು ಎಂಬುದು ಅವರ ಆಶಯ. ಇದನ್ನರಿತ ಶಿವಮೊಗ್ಗದ ಶರಣ ಸಮೂಹ ಈಶ್ವರಪ್ಪನನ್ನು ಬಲಿಕೊಡಲು ನಿರ್ಧರಿಸಿದ್ದಾರೆ.


ತೀರ್ಥಹಳ್ಳಿ: ಕಿಮ್ಮನೆಗೆ ಗೆಲುವಿನ ಮುನ್ಸೂಚನೆ



ಇಲ್ಲಿ ಬಿಜೆಪಿಯ ಆರಗ ಜ್ಞಾನೇಂದ್ರನ ವಿರುದ್ಧ ಸ್ಪರ್ಧಿಸಿರುವ ಕಿಮ್ಮನೆ ರತ್ನಾಕರ್‌ಗೆ ಈ ಚುನಾವಣೆ ಒಂದು ಅಗ್ನಿಪರೀಕ್ಷೆ. ಇಂದು ಅಪರೂಪವಾಗುತ್ತಿರುವ ಪ್ರಾಮಾಣಿಕತೆಯನ್ನು ಮೈಗೂಡಿಸಿಕೊಂಡಿರುವ ಕಿಮ್ಮನೆ ಸಾರ್ವಜನಿಕ ಬದುಕಿನಲ್ಲಿ ಒಂದಿಷ್ಟೂ ಕಳಂಕವನ್ನು ಅಂಟಿಸಿಕೊಂಡಿರದ ವ್ಯಕ್ತಿ. ವೃತ್ತಿಯಲ್ಲಿ ವಕೀಲರಾಗಿರುವ ಕಿಮ್ಮನೆ ಅದೆಷ್ಟೋ ಬಡವರ ಕೇಸುಗಳ ಪರವಾಗಿ 'ಯಾವ ಪ್ರತಿಫಲದ ನಿರೀಕ್ಷೆಯಿಲ್ಲದೇ ನ್ಯಾಯಾಲಯದಲ್ಲಿ ಹೋರಾಡಿದ ಬೇಕಾದಷ್ಟು ಉದಾಹರಣೆಗಳಿವೆ.

ರಾಜಕಾರಣವೆಂದರೆ ಸುಳ್ಳು, ಭ್ರಷ್ಟಾಚಾರ, ಸ್ವಜನಪಕ್ಷಪಾತ ಎಂದೇ ಪರಿಗಣಿತವಾಗಿರುವ ಇಂದಿನ ಕಾಲದಲ್ಲಿ ಅದಕ್ಕೆ ಅಪವಾದವಾಗಿ ನಿಂತವರು ಕಿಮ್ಮನೆ. ಈ ಹಿಂದಿನ ಎರಡೂ ಚುನಾವಣೆಯಲ್ಲಿ ಸೋತರೂ ನಿರಾಶೆ ಹೊಂದದೆ ಮತ್ತೊಮ್ಮೆ ಚಡ್ಡಿ ಜ್ಞಾನೇಂದ್ರನ ವಿರುದ್ಧ ಸೆಡ್ಡು ಹೊಡೆದಿದ್ದಾರೆ. ಈ ಬಾರಿ ಚುನಾವಣೆ ನೀತಿ ಸಂಹಿತೆ ಕಠಿಣವಾಗಿ ಜಾರಿಗೆ ಬಂದಿರುವುದು ಕಿಮ್ಮನೆಗೆ ನೆರವಾಗಿದೆ. ಕ್ಷೇತ್ರ ಪುನರ್ವಿಂಗಡಣೆಯ ಪರಿಣಾಮವಾಗಿ ಹೊಸನಗರ ಕ್ಷೇತ್ರದ ಕೆಲವು ಭಾಗಗಳೂ ತೀರ್ಥಹಳ್ಳಿಗೆ ಸೇರಿರುವುದರಿಂದ ಅದೂ ಕಿಮ್ಮನೆಯ ಪಾಲಿಗೆ ಪಾಸಿಟಿವ್ ಪಾಯಿಂಟ್ ಆಗಲಿದೆ. ಬಡಬಗ್ಗರ ಪರವಾಗಿ ಸದಾ ಹೋರಾಡುತ್ತಾ ಬಂದಿರುವ ಇವರನ್ನು ಕ್ಷೇತ್ರದ ಮತದಾರರು ಗೆಲ್ಲಿಸಿ ವಿಧಾನಸಭೆ ಪ್ರವೇಶಿಸುವ ಅವಕಾಶ ಕೊಡುವ ನಿರೀಕ್ಷೆ ಜಾಸ್ತಿಯಿದೆ.

ಸಾಗರ: ಕಾಗೋಡು ಗೆದ್ದಾಗಿದೆ!



ಕಾಂಗ್ರೆಸ್‌ನ ಹಳೆಯ ಹುಲಿ ಕಾಗೋಡು ತಿಮ್ಮಪ್ಪ ಇಲ್ಲಿ ಗೆಲುವಿನ ಕುದುರೆ. ಕ್ಷೇತ್ರದಲ್ಲಿ ಒಟ್ಟು **1,75,000** ಮತದಾರರಿದ್ದು ಅವರಲ್ಲಿ **44** ಸಾವಿರದಷ್ಟಿರುವ ಈಡಿಗರೇ ಇಲ್ಲಿ ನಿರ್ಣಾಯಕ. ಕಳೆದ ಬಾರಿ ಬಂಗಾರಪ್ಪ ಬಿಜೆಪಿಯಲ್ಲಿದ್ದುದರಿಂದ ಈ ಈಡಿಗ ಮತಗಳು ಇಬ್ಭಾಗವಾಗಿ ಬಿಜೆಪಿಯ ಬೇಳೂರು ಗೋಪಾಲಕೃಷ್ಣ ಗೆದ್ದಿದ್ದ. ಈ ಬಾರಿ ಬಿಜೆಪಿ ಎಲ್ಲಿ ಗೆದ್ದು ಬಿಡುತ್ತೋ ಎಂಬ ಆತಂಕದಿಂದ ಬಂಗಾರಪ್ಪ ಒಳಗಿನಿಂದಲೇ ಕಾಂಗ್ರೆಸ್‌ನ ಕಾಗೋಡ್‌ಗೆ ಬೆಂಬಲಿಸಿರುವುದು ದೀವರ (ಈಡಿಗರ) ಮತಗಳಲ್ಲಿ ಶೇ. **70**ರಷ್ಟು ಕಾಗೋಡು ಪಾಲಾಗಲಿವೆ.


ಇನ್ನು **25** ಸಾವಿರದಷ್ಟಿರುವ ಮುಸ್ಲಿಮ್ ಮತ್ತು ಕ್ರಿಶ್ಚಿಯನ್ನರ ಮತಗಳು ನೇರವಾಗಿ ಕಾಂಗ್ರೆಸ್ ಪಾಲಾಗಲಿವೆ. ಬೇಳೂರು ಗೋಪಾಲಕೃಷ್ಣ ಯಾವುದೇ ಪಕ್ಷಕ್ಕೂ ನಿಷ್ಠನಾಗಿರದೇ ಈಗಾಗಲೇ ಮೂರು ಪಕ್ಷಗಳನ್ನು ಬದಲಿಸಿರುವಾತ. ಬಿಜೆಪಿ ಪಾಳಯದಲ್ಲಿ ಯು.ಎಚ್.ರಾಮಣ್ಣನಂತಹ ಸಂಘಪರಿವಾರದ ಹಿರಿಯರಿದ್ದರೂ ಅವರಿಗೆ ಟಿಕೆಟ್ ನೀಡದೇ ಗೋಪಾಲಕೃಷ್ಣನಂತಹ ಅವಕಾಶವಾದಿಗೆ ಟಿಕೆಟ್ ಕೊಟ್ಟಿರುವುದು ಬಿಜೆಪಿ ಪಾಳಯದಲ್ಲಿ ಅಸಮಾಧಾನದ ಹೊಗೆ ಹೊತ್ತಿಸಿದೆ. ಬಿಜೆಪಿ ಟಿಕೆಟ್ ವಂಚಿತ ಯು.ಎಚ್.ರಾಮಣ್ಣ ಬಿಜೆಪಿಯ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಇವರು ಬಿಜೆಪಿಯ ಪಾರಂಪರಿಕ ಓಟುಗಳನ್ನು ಕೀಳುವುದರಿಂದ ಬೇಳೂರಿಗೆ ತುಂಬಾ ಹಾನಿಯಾಗಲಿದೆ. ಇದನ್ನೆಲ್ಲಾ ಇಟ್ಟುಕೊಂಡು ಹೇಳುವುದಾದರೆ, ಕಾಗೋಡು ತಿಮ್ಮಪ್ಪ ಕನಿಷ್ಠ ಹತ್ತುಸಾವಿರ ಮತಗಳ ಅಂತರದಿಂದ ಗೆದ್ದುಬರಲಿದ್ದಾರೆ. ಹಾಗೇನಾದರೂ ಆದರೆ ಬೇಳೂರು ಈ ಚುನಾವಣೆಗೆ ಮಾತ್ರವಲ್ಲ ತನ್ನ ರಾಜಕೀಯ ಜೀವನಕ್ಕೆ ನಿವೃತ್ತಿ ಪಡೆದಂತೆಯೇ.

ಸೊರಬ: ಕುಮಾರ್‌ಗೆ ಮಧು ಅಡ್ಡಗಾಲು!



ಮಾಜಿ ಮುಖ್ಯಮಂತ್ರಿ ಬಂಗಾರಪ್ಪನ ತವರು ಕ್ಷೇತ್ರವಿದು. ಅವರ ಮಕ್ಕಳಿಬ್ಬರೂ ಬೇರೆ ಬೇರೆ ಪಕ್ಷದಿಂದ ಸ್ಪರ್ಧಿಸುತ್ತಿದ್ದು ಇವರಿಬ್ಬರ ನಡುವೇ ಹಣಾಹಣಿಯಿದೆ. ಕುಮಾರ್ ಬಂಗಾರಪ್ಪ ಅಪ್ಪನ ಆಶಯಕ್ಕೆ ವಿರುದ್ಧವೇ ನಡೆದುಕೊಳ್ಳುತ್ತಾ ಸೊರಬ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಸೊರಬದ ಜನ ಕೂಡ ಕುಮಾರ್ ಮಾಡಿದ ಕೆಲಸ ಕಾರ್ಯಗಳನ್ನು ಮೆಚ್ಚಿಕೊಂಡಿದ್ದರು.


ಆದರೆ, ಕುಮಾರ್ ಈ ಬಾರಿ ತುಸು ಕಷ್ಟದಲ್ಲಿದ್ದಾರೆ. ಬಂಗಾರಪ್ಪನ ಇನ್ನೊಬ್ಬ ಮಗ ಮಧು ಬಂಗಾರಪ್ಪ ಸಮಾಜವಾದಿ ಪಕ್ಷದಿಂದ ಕಣಕ್ಕಿಳಿದಿದ್ದು



ಆತನಿಗೆ ಅಪ್ಪನ ಸಂಪೂರ್ಣ ಬೆಂಬಲವಿದೆ. ಅದೂ ಅಲ್ಲದೇ ಕಳೆದ ಚುನಾವಣೆಯಲ್ಲಿ ಕುಮಾರ್‌ನೊಂದಿಗಿದ್ದ ಕೆಲವು ಕಾರ್ಯಕರ್ತರನ್ನು ತನ್ನೆಡೆ ಸೆಳೆಯುವಲ್ಲಿ ಮಧು ಬಂಗಾರಪ್ಪ ಯಶಸ್ವಿಯಾಗಿದ್ದು ಕುಮಾರ್‌ಗೆ ಹಿನ್ನೆಡೆಯಾಗಿದೆ.

ಇನ್ನು ಬಿಜೆಪಿಯಿಂದ ಹರತಾಳು ಹಾಲಪ್ಪ ಸ್ಪರ್ಧಿಸಿದ್ದಾರೆ. ಈತ ಈ ಹಿಂದೆ ಬಂಗಾರಪ್ಪನ ಕಟ್ಟಾ ಬೆಂಬಲಿಗನಾಗಿದ್ದು ಈಗ ಅವರ ವಿರುದ್ಧವೇ ಸೊರಬದಲ್ಲಿ ಸೆಡ್ಡು ಹೊಡೆದಿದ್ದಾನೆ. ವಾಸ್ತವದಲ್ಲಿ ಬಂಗಾರಿ ವಿರುದ್ಧ ಹರತಾಳು ಹಾಲಪ್ಪನನ್ನು ಬಿಜೆಪಿ ಹರಕೆಯ ಕುರಿಯನ್ನಾಗಿ ಮಾಡಿದೆ ಎಂದರೇನೇ ಸರಿಹೋಗುತ್ತದೆ. ಆತ ಠೇವಣಿ ಉಳಿಸಿಕೊಂಡರೆ ಅದೇ ದೊಡ್ಡ ಸಾಧನೆಯಾಗಬಹುದು.

ಭದ್ರಾವತಿ: ಸಂಗಮೇಶ್ ತೆಕ್ಕೆಗೆ!



ಜೆಡಿಎಸ್‌ನಿಂದ ಅಪ್ಪಾಜಿಗೌಡ, ಕಾಂಗ್ರೆಸ್‌ನಿಂದ ಸಂಗಮೇಶ್ ಹಾಗೂ ಬಿಜೆಪಿಯಿಂದ ಆಯನೂರು ಮಂಜುನಾಥ್ ಸ್ಪರ್ಧೆಯಲ್ಲಿದ್ದಾರೆ. ಆದರೆ, ಹಣಾಹಣಿ ನಡೆಯುವುದು ಪಾರಂಪರಿಕ ಶತ್ರುಗಳಾದ ಸಂಗಮೇಶ್ ಮತ್ತು ಅಪ್ಪಾಜಿಯ ನಡುವೆಯೇ ಹೊರತು ಆಯನೂರ್ ಇಲ್ಲಿ ಲೆಕ್ಕಕ್ಕೇ ಇಲ್ಲ. ಅಪ್ಪಾಜಿ ಅಧಿಕಾರದಲ್ಲಿದ್ದಾಗ ನಡೆಸಿದ ರೌಡಿಸಂ ಕ್ಷೇತ್ರದ ಜನರನ್ನು ತಬ್ಬಿಬ್ಬಾಗಿಸಿದೆ. ಬದಲಾವಣೆ ಬಯಸುತ್ತಿರುವ ಕ್ಷೇತ್ರದ ಜನ ಈ ಬಾರಿ ಸಂಗಮೇಶ್ ಕಡೆ ವಾಲುವ ಲಕ್ಷಣಗಳೇ ಜಾಸ್ತಿಯಿವೆ. ಲಿಂಗಾಯತ ಸಮುದಾಯದ ಮುಖಂಡರು ಇತ್ತೀಚೆಗೆ ಸಭೆ ಸೇರಿ ಸಂಗಮೇಶ್‌ಗೆ ಬೆಂಬಲ ಸೂಚಿಸಿದ್ದಾರೆ. ಅಂತೆಯೇ ಒಕ್ಕಲಿಗ ಸಮುದಾಯದವರು ಅಪ್ಪಾಜಿಗೆ ಬೆಂಬಲಿಸಿದ್ದಾರೆ. ಹೀಗಾಗಿ ಇದು ಸಂಗಮೇಶ್ ಮತ್ತು ಅಪ್ಪಾಜಿ ನಡುವಿನ ಸ್ಪರ್ಧೆಯಾಗಿರದೇ ಲಿಂಗಾಯತ ಮತ್ತು ಒಕ್ಕಲಿಗರ ನಡುವಿನ ಸ್ಪರ್ಧೆಯಾಗಿ ಮಾರ್ಪಟ್ಟಿದೆ. ಸಂಗಮೇಶ್ ಒಕ್ಕಲಿಗ ಮತಗಳಲ್ಲಿಯೂ ಒಂದಿಷ್ಟನ್ನು ಪಡೆಯುವ ಸಾಧ್ಯತೆಯಿದೆ. ಆದರೆ, ಅಪ್ಪಾಜಿಗೆ ಲಿಂಗಾಯತ ಮತಗಳಲ್ಲಿ ಸ್ವಲ್ಪವೂ ದೊರೆಯುವ ಲಕ್ಷಣಗಳಿಲ್ಲ. ಇದರಿಂದ ಸಂಗಮೇಶ್ ಕೈ ಮೇಲಾಗುವ ಲಕ್ಷಣಗಳೇ ಜಾಸ್ತಿಯಿವೆ.

ಇದರ ಜೊತೆಗೆ ಸಂಗಮೇಶ್ ಸಾಕಷ್ಟು ಹಣವಿರುವ ವ್ಯಕ್ತಿ. ಒಳಗಿನಿಂದಲೇ ಹಳ್ಳಿ ಹಳ್ಳಿಗಳಿಗೆ ಹಣ ಸರಬರಾಜು ಮಾಡುತ್ತಿದ್ದು ಅದನ್ನೂ ಲೆಕ್ಕ ಹಾಕಿದರೆ ಆತ ಗೆಲ್ಲುವುದು ಹೆಚ್ಚೂ ಕಡಿಮೆ ಖಾತ್ರಿಯಾದಂತೆಯೆ. ಬಹಳ ಲೀಡ್‌ನಿಂದಲ್ಲದಿದ್ದರೂ ಸ್ವಲ್ಪ ಅಂತರದಲ್ಲಾದರೂ ಗೆಲ್ಲಬಹುದು.

ಬಿಎಸ್ಪಿಯ ಅಭ್ಯರ್ಥಿ ಮಹೇಶ್ ಕುಮಾರ್ ಕೂಡ ಸ್ಪರ್ಧೆಯಲ್ಲಿದ್ದಾರಾದರೂ ಗೆಲ್ಲುವ ಗಿರಾಕಿಯೇನಲ್ಲ. ಕಾಂಗ್ರೆಸ್‌ನ ಸಂಗಮೇಶ್ ಪಡೆಯುವ ಮತಗಳಲ್ಲಿ ಒಂದಿಷ್ಟನ್ನು ಕಿತ್ತುಕೊಂಡು ಹಾನಿ ಮಾಡಬಹುದಷ್ಟೆ.

■ ಕಡೇನಂದಿಹಳ್ಳಿ ಕುಮಾರ್

ದಕ್ಷಿಣ ಕನ್ನಡ: ಬಾಡಿದ ಕಮಲ ಅರಳಬಲ್ಲದೆ?

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಣಾಹಣಿ ಕಾಂಗ್ರೆಸ್ ಮತ್ತು ಬಿಜೆಪಿಗಳ ನಡುವೆ ಇದ್ದು ಜೆಡಿಎಸ್‌ಗೆ ಇಲ್ಲಿ ಹೇಳಿಕೊಳ್ಳುವಂತಹ ನೆಲೆಯೇನಿಲ್ಲ. ಬಿಜೆಪಿಯ ನೆಲೆ ಎಂದೇ ಪರಿಗಣಿತವಾಗುತ್ತಿರುವ ಕರಾವಳಿಯಲ್ಲಿ ಈ ಬಾರಿ ಕಾಂಗ್ರೆಸ್ ತೀವ್ರ ಸ್ಪರ್ಧೆಯೊಡ್ಡುತ್ತಿರುವುದು ಸ್ಪಷ್ಟವಾಗಿದೆ.

ಸುಳ್ಯ: ಗೆಲುವಿನತ್ತ ಡಾ. ರಘು!

ಮೀಸಲು ಕ್ಷೇತ್ರವಾದ ಸುಳ್ಯದಲ್ಲಿ ಕಳೆದ ಬಾರಿ ಬಿಜೆಪಿಯಿಂದ ಗೆದ್ದು ಬಂದಿದ್ದ ನಾಲಾಯಕ್ ಅಂಗಾರ್‌ಗೆ ಈ ಬಾರಿ ಸೋಲಿನ ಭೀತಿ ಆವರಿಸಿದೆ. ಈತನ ಮೂರು ಟರ್ಮಿನ ಪ್ರಮುಖ ಸಾಧನೆಯೆಂದರೆ ಒಟ್ಟು ಹದಿನೆಂಟು ಮುಕ್ಕಾಲು ಲಕ್ಷವನ್ನು ಸಾದಿಲ್ವಾರು ಭತ್ಯೆಯೆಂದು ಸ್ವೀಕರಿಸಿದ್ದು, ಹೆಂಡತಿ ಹೆಸರಲ್ಲಿ ಪೆಟ್ರೋಲ್ ಬಂಕ್ ಮಾಡಲು ಹೊರಟು ಸುಪ್ರೀಮ್ ಕೋರ್ಟಿನಿಂದ ಛೀಮಾರಿ ಹಾಕಿಸಿಕೊಂಡಿದ್ದು, ಶಾಸಕನಾಗಿದ್ದಷ್ಟು ಕಾಲ ಸುಳ್ಯದ ಚಿಡ್ಡಿ ದೊಣ್ಣೆ ನಾಯಕರುಗಳ ಸೇವೆ ಮಾಡಿದ್ದು ಇತ್ಯಾದಿ.... ಇತ್ಯಾದಿ.... ಈತನ ಈ ಮಹಾನ್ ಸಾಧನೆಗಳಿಂದ ಕ್ಷೇತ್ರದ ಜನ ಬೇಸತ್ತು ಹೋಗಿ ಬದಲಾವಣೆಯನ್ನು ಬಯಸುತ್ತಿದ್ದಾರೆ.

ಇತ್ತೀಚೆಗೆ ಅಂಗಾರ ಪ್ರಯಾಣಿಸುತ್ತಿದ್ದ ಜೀಪಿಗೆ ಇನ್ನೊಂದು ಜೀಪು ಬಡಿದು ಸಣ್ಣದೊಂದು ಅವಘಡ ಸಂಭವಿಸಿದೆ. ಈಗಾಗಲೇ ಸೋಲಿನ ಭೀತಿಯಲ್ಲಿರುವ ಅಂಗಾರ ಇದನ್ನೇ ನೆಪ ಮಾಡಿಕೊಂಡು "ನನ್ನನ್ನು ಕೊಲೆ ಮಾಡಲು ಯತ್ನಿಸಲಾಗುತ್ತಿದೆ" ಎಂಬ ಹೊಸ ವರಸೆಯೊಂದಿಗೆ ಅನುಕಂಪ ಗಿಟ್ಟಿಸಿಕೊಳ್ಳಲು ಪ್ರಯತ್ನಿಸುತ್ತಿರುವುದು ಕ್ಷೇತ್ರದಲ್ಲಿ ಹಾಸ್ಯಾಸ್ಪದವಾಗಿ ಕಾಣುತ್ತಿದೆ.

ಅಂಗಾರ್‌ನ ವಿರೋಧಿ ಅಲೆಯನ್ನು ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಜನಪ್ರಿಯ ವೈದ್ಯ ಡಾ. ರಘು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿರುವುದರಿಂದ ಈ ಬಾರಿ ಅವರು ಗೆಲ್ಲುವ ನಿರೀಕ್ಷೆಯಿದೆ. ಇನ್ನು ಜೆಡಿಎಸ್‌ನಿಂದ ಎಸ್.ಶರಚ್ಚಂದ್ರ ಕಣದಲ್ಲಿದ್ದಾರಾದರೂ ಗೆಲ್ಲುವ ಗಿರಾಕಿಯಲ್ಲ.

ಪುತ್ತೂರು: ಶಕು ಅಕ್ಕನ ಕೋಪ ಕಾಂಗ್ರೆಸ್‌ಗೆ ಲಾಭ!

ಎಣ್ಣೆ ಬರುವ ಹೊತ್ತಿಗೆ ಗಾಣ ಮುರಿಯಿತು ಎಂಬಂತಾಗಿದೆ ಪುತ್ತೂರಿನ ಸ್ಥಿತಿ. ಬಿಜೆಪಿ ರಾಜ್ಯಾಧ್ಯಕ್ಷ ಡಿ.ವಿ.ಸದಾನಂದಗೌಡರನ್ನು ಎತ್ತಿ ಆಡಿಸಿ ಮೇಲಕ್ಕೆತ್ತಿದ ಪುತ್ತೂರಿನಲ್ಲಿ ಈ ಬಾರಿ ಬಿಜೆಪಿಗೆ ಭಾರಿ ಗಂಡಾಂತರ ಕಾದಿದೆ. ಕಾರಣ, ಎಲ್ಲರಿಗೂ ಸಲ್ಲುವ ಶಾಸಕಿಯಾಗಿದ್ದ ಶಕುಂತಲಾ ಶೆಟ್ಟಿಗೆ ಟಿಕೆಟ್ ಗ್ಯಾರಂಟಿ ಎಂದುಕೊಳ್ಳಲಾಗಿತ್ತಾದರೂ ಕೊನೆಗಳಿಗೆಯಲ್ಲಿ ಅದು ಕೈತಪ್ಪಿ ಮಲ್ಲಿಕಾ ಪ್ರಸಾದ್ ಭಂಡಾರಿಯ ಪಾಲಾಗಿದೆ. ಈಗ ಆಕೆ ಪಕ್ಷೇತರವಾಗಿ ಕಣಕ್ಕಿಳಿದಿರುವುದು ಬಿಜೆಪಿಗೆ ಭಾರಿ ಹಾನಿಯನ್ನೂ, ಕಾಂಗ್ರೆಸ್‌ಗೆ ಭಾರಿ ಲಾಭವನ್ನೂ ತಂದುಕೊಡಲಿದೆ.

ಆದರೆ ಕಾಂಗ್ರೆಸ್‌ನ ಮೊಯಿಲಿ, ಪೂಜಾರಿಗಳೆಂಬ ಕರಟಕ-ದಮನಕರ ಚಿತಾವಣೆಯಿಂದಾಗಿ ಬಂಟ್ವಾಳ ಬೊಂಡಾಲ ಜಗನ್ನಾಥ ಶೆಟ್ಟಿಗೆ ಟಿಕೆಟ್ ಸಿಕ್ಕಿದ್ದು ಕಾಂಗ್ರೆಸ್‌ನಲ್ಲಿ ಅಸಮಾಧಾನದ ಹೊಗೆ ಹತ್ತಿಸಿದೆ. ಟಿಕೆಟ್ ಆಕಾಂಕ್ಷಿ ನಳಿನಿ ಲೋಕಪ್ಪಗೌಡ ಕಾಂಗ್ರೆಸ್‌ನ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವುದು ಪಕ್ಷಕ್ಕೆ ಹಾನಿ ಮಾಡಲಿದೆ.

ಸಾರಾಂಶದಲ್ಲಿ ಕಾಂಗ್ರೆಸ್‌ನ ಬೊಂಡಾಲ, ಬಿಜೆಪಿಯ ಮಲ್ಲಿಕಾ ಮತ್ತು ಬಿಜೆಪಿ ಬಂಡಾಯ ಅಭ್ಯರ್ಥಿ ಶಕುಂತಲಾ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದು ಕಾಂಗ್ರೆಸ್‌ಗೆ ಹೆಚ್ಚು ಲಾಭಗಳಾಗುವ ನಿರೀಕ್ಷೆಯಿದೆ.

ಬೆಳ್ತಂಗಡಿ: ಕಾಂಗ್ರೆಸ್ V/s ಜೆಡಿಎಸ್!

ಕಳೆದ ಮೂವತ್ತು ವರ್ಷಗಳಿಂದ ಪರಸ್ಪರ ಗುದ್ದಾಡುವುದನ್ನೇ ರಾಜಕೀಯ ಮಾಡಿಕೊಂಡು ಬಂದಿರುವ ವಸಂತ ಬಂಗೇರಾ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದೇ ತಡ, ಕೆ.ಗಂಗಾಧರ ಗೌಡ ಕಾಂಗ್ರೆಸ್‌ನಿಂದ ಚಂಗನೇ ಜಿಗಿದು ಜೆಡಿಎಸ್ ಕ್ಯಾಂಡಿಡೇಟ್ ಆಗಿದ್ದಾರೆ. ಬಂಗೇರಾನ ವಲಸೆಯಿಂದ ಸಂಪೂರ್ಣವಾಗಿ ನಿಸ್ತೇಜಗೊಂಡಿದ್ದ ಜೆಡಿಎಸ್ ಗೌಡನ ಗೌಜಿಯಿಂದ ಮತ್ತೆ ಚಿಗಿತುಕೊಂಡಿದೆ. ಇವರಿಬ್ಬರ ಕಾದಾಟದಲ್ಲಿ ಬಿಜೆಪಿ ಮೂರನೇ ಸ್ಥಾನಕ್ಕೆ ತಳ್ಳಲ್ಪಡುತ್ತಿದೆ.

'ಬೆಳ್ತಂಗಡಿಯಲ್ಲಿ ಕಾಂಗ್ರೆಸ್ ಕಟ್ಟಿಬೆಳೆಸಿದ ಗೌಡರನ್ನು ಹೊರಗಟ್ಟಿದರು, ಕಾಂಗ್ರೆಸ್ ಧ್ವಜ ಸುಟ್ಟು ಇಂದಿರಾ ಗಾಂಧಿಯವರ ಮೇಲೆ ಹಲ್ಲೆ ಮಾಡಲು ಯತ್ನಿಸಿದ್ದ ವಸಂತ ಬಂಗೇರಾನನ್ನು ಕರೆದು ಮಣೆ ಹಾಕಿದರು' ಎಂಬ ಅಸಮಾಧಾನದ ಭಾವನೆ ಕಾಂಗ್ರೆಸ್ ಪಾಳೆಯದಲ್ಲಿದೆ. ಇದರಿಂದ ಇಲ್ಲಿಯತನಕ ಗೆಲುವಿನ ಹಾದಿಯಲ್ಲಿದ್ದ ವಸಂತ ಬಂಗೇರಾಗೆ ಮುಳ್ಳು ಚುಚ್ಚಿದ ಅನುಭವವಾಗತೊಡಗಿದೆ.

ಸಧ್ಯಕ್ಕೆ ಹವಾ ಕಾಂಗ್ರೆಸ್ ಪರವಾಗಿಯೇ ಇದ್ದು ಗಂಗಾಧರ ಗೌಡನತ್ತ ಬೀಸುತ್ತಿರುವ ಅನುಕಂಪವೇನಾದರೂ ಓಟುಗಳಾಗಿ ಮಾರ್ಪಟ್ಟರೆ ಬಂಗೇರಾನ ಬೆವರಿಳಿಯುವುದು ಗ್ಯಾರಂಟಿ.

ಬಂಟ್ವಾಳ: ಮೋದಿ ಶಿಷ್ಯನಿಗೆ ಗೇಟ್‌ಪಾಸ್!

ಬೆಳ್ಳಿಪ್ಪಾಡಿ ರಮಾನಾಥ ರೈ ಮತ್ತು ಬೈಲು ಮೇಗಿನ ಮನೆ ನಾಗರಾಜ ಶೆಟ್ಟಿ ಎಂಬ ಗತ್ತಿನ ಬಂಟರ ನಡುವೆ ಕಾಳಗಕ್ಕೆ ಬಂಟ್ವಾಳ ಸಿದ್ಧವಾಗಿದೆ. ಉಸ್ತುವಾರಿ ಮಂತ್ರಿಯಾಗಿದ್ದ ನಾಗರಾಜ ಶೆಟ್ಟಿ ಕ್ಷೇತ್ರಕ್ಕೆ ಒಂದೇ ಒಂದು ಹೊಸ ಯೋಜನೆಯನ್ನು ತರಿಸಲಿಲ್ಲ ಎಂಬ ಸಿಟ್ಟು ಕ್ಷೇತ್ರದ ಜನರಲ್ಲಿ ಇದ್ದೇ ಇದೆ. ಅಭಿವೃದ್ಧಿಯ ದೃಷ್ಟಿಯಿಂದ ಬಂಟ್ವಾಳವನ್ನು ಮರೆತೇ ಬಿಟ್ಟ ಈ ಮೋದಿ ಶಿಷ್ಯ ಕ್ಷೇತ್ರವನ್ನು ಕೋಮುಗಲಭೆಗೆ ತುತ್ತಾಗಿಸಿದ್ದು ಕೂಡ ಜನರಲ್ಲಿ ಬೇಸರ ತರಿಸಿದೆ. ಈತನಿಗೆ ಈ ಬಾರಿಯ ಚುನಾವಣೆಯಲ್ಲಿ ಜನ ತಕ್ಕ ಪಾಠ ಕಲಿಸುವ ನಿರೀಕ್ಷೆಯಿದೆ.

ಇನ್ನೊಂದೆಡೆ ಕಾಂಗ್ರೆಸ್‌ನ ರಮಾನಾಥ ರೈ ಹಾಗೂ ಜೆಡಿಎಸ್‌ನ ಕೆ.ಎಂ. ಇಬ್ರಾಹಿಂ ಕಣದಲ್ಲಿದ್ದಾರೆ. ಶೆಟ್ಟಿ ವಿರೋಧಿ ಅ[ಲೆ] ಇವರಿಬ್ಬರಿಗೂ ಸಮಾನವಾಗಿ ಸಹಾಯ ಮಾಡಲಿದೆ. ಇಬ್ರಾಹಿಂ ಹಿಂದೆ ಕೆ.ಎಫ್.ಡಿ ಸಂಘಟನೆಯೂ ನಿಂತಿರುವುದರಿಂದ ಈ ಬಾರಿ ಅವರು ಗೆದ್ದರೂ ಆಶ್ಚರ್ಯವಿಲ್ಲ. ಹಾಗೇನಾದರೂ ಆದರೆ ಮುಸ್ಲಿಮರನ್ನು ಕಡೆಗಣಿಸುತ್ತಿರುವ ಕಾಂಗ್ರೆಸ್‌ಗೂ ಇದೊಂದು ಪಾಠವಾಗಲಿದೆ.

ಮಂಗಳೂರು: ಖಾದರ್ ಖಚಿತ

ಉಳ್ಳಾಲ ಉಪಚುನಾವಣೆಯಲ್ಲಿ ಜೆಡಿಎಸ್-ಬಿಜೆಪಿ ಬೆರಕೆಗಳ ಎಲ್ಲಾ ಚಿತಾವಣೆಯ ನಡುವೆಯೂ ಜಯಭೇರಿ ಬಾರಿಸಿದ ಯು.ಟಿ. ಖಾದರ್‌ಗೆ ವರ್ಷ ತುಂಬುವ ಮುನ್ನವೇ ಮತ್ತೆ ಮತಯಾಚಿಸುವ ಅನಿವಾರ್ಯತೆ ಬಂದೊದಗಿದೆ. ಕ್ಷೇತ್ರ ಪುನರ್ವಿಂಗಡಣೆಯಿಂದಾಗಿ ಉಳ್ಳಾಲ ಹೋಗಿ ಮಂಗಳೂರಾದ ಮೇಲೆ ಮಾಯವಾದ ವಿಟ್ಲಾ ಕ್ಷೇತ್ರದ ಮಾಜಿ ಶಾಸಕ ಪದ್ಮನಾಭ ಕೊಠಾರಿ ಬಿಜೆಪಿಯಿಂದ ಕಣಕ್ಕಿಳಿದಿದ್ದಾರೆ. ಕೊಠಾರಿ ಮತ್ತು ಖಾದರ್ ನಡುವೆಯೇ ಹಣಾಹಣಿಯಿದ್ದು ಖಾದರ್ ಗೆಲುವು ನಿಶ್ಚಿತವಾಗಿದೆ. ಜೆಡಿಎಸ್‌ನಿಂದ ನಜೀರ್ ಉಳ್ಳಾಲ ಕಣಕ್ಕಿಳಿದಿದ್ದಾರಾದರೂ ಅವರು ಆಟಕ್ಕುಂಟು ಲೆಕ್ಕಕ್ಕಿಲ್ಲ.

ಮಂಗಳೂರು ದಕ್ಷಿಣ: ಕಾಂಗ್ರೆಸ್‌ಗೆ ಸಿಪಿಐ (ಎಂ) ಮುಳ್ಳು

ಇಲ್ಲಿ ಕಾಂಗ್ರೆಸ್ ಕ್ರಿಶ್ಚಿಯನ್ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಅವಸರದಲ್ಲಿ ನಾಲಾಯಕ್‌ಗಳಿಗೆ ಸೀಟು ನೀಡುತ್ತಾ ಬಂದಿದ್ದರ ಪ್ರತಿಫಲವಾಗಿ ಬಿಜೆಪಿಯ ಯೋಗೀಶ್ ಭಟ್ ಹ್ಯಾಟ್ರಿಕ್ ಮಾಡಿದ್ದರು. ಈ ಬಾರಿ ಯೋಗೀಶ್ ಭಟ್ಟರಿಗೆ ಕಡಿವಾಣ ಹಾಕುವ ಸಲುವಾಗಿ ಕಾಂಗ್ರೆಸ್ ಉತ್ಸಾಹಿ ಯುವಕ ಹಾಗೂ ಹತ್ತು ಹಲವು ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುವ ಐವನ್ ಡಿಸೋಜ ಅವರನ್ನು ಕಣಕ್ಕಿಳಿಸಿರುವುದು ಸೂಕ್ತವಾಗಿದೆ.

ಡಿಸೋಜ ಈ ಬಾರಿ ಗೆಲ್ಲುವುದಕ್ಕೆ ಯಾವುದೇ ಅಡೆತಡೆಗಳಿರಲಿಲ್ಲ. ಆದರೆ, ಸಿಪಿಎಂನಿಂದ ಸ್ಪರ್ಧಿಸಿರುವ ಯಶವಂತ ಮರೋಳಿಗೆ ಜೆಡಿಎಸ್, ಎಸ್ಪಿ ಹಾಗೂ ಬಿಎಸ್ಪಿಗಳೂ ಬೆಂಬಲಿಸುತ್ತಿರುವುದರಿಂದ ಅದು ಡಿಸೋಜಗೆ ಮುಳುವಾಗಲಿದೆ. ಇಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಸಿಪಿಎಂಗಳ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟು ಬಿಜೆಪಿಯ ಯೋಗೀಶ್ ಭಟ್ ನಾಲ್ಕನೇ ಬಾರಿ ಗೆಲ್ಲುವ ನಿರೀಕ್ಷೆಗಳಿವೆ.

ಮಂಗಳೂರು ಉತ್ತರ: ದುಡ್ಡು V/s ದುಡ್ಡು

ಬಿಜೆಪಿಯ ಕೃಷ್ಣ ಜೆ ಪಾಲೇಮಾರ್ ಹರಿಸಿದ್ದ ಹಣದ ಹೊಳೆ ಹಾಗೂ ಕಾಂಗ್ರೆಸ್‌ನ ವಿಜಯಕುಮಾರ್‌ಗೆ ಸ್ವಪಕ್ಷೀಯರೇ ಬೆನ್ನಿಗೆ ಇರಿದದ್ದು ಸೇರಿಕೊಂಡು ಪಾಲೇಮಾರ್ ಕಳೆದ ಬಾರಿ ಗೆದ್ದಿದ್ದ. ಈ ಬಾರಿಯೂ ಪಾಲೇಮಾರ್‌ಗೆ ಪರಿಸ್ಥಿತಿ ಏನೂ ಕೆಟ್ಟಿಲ್ಲ, ಆದರೆ ಕ್ಷೇತ್ರ ಪುನರ್ವಿಂಗಡಣೆಯಿಂದ ಬಂಟ್ವಾಳದ ಗುರುಪುರ ಬ್ಲಾಕ್ ಮಂಗಳೂರು ಉತ್ತರಕ್ಕೆ ಸೇರಿದ್ದು ಕಾಂಗ್ರೆಸ್‌ಗೆ ವರದಾನವಾಗಲಿದೆ. ಕಾಂಗ್ರೆಸ್‌ನಿಂದ ಕಣಕ್ಕಿಳಿದಿರುವ ಮೈದೀನ್ ಬಾವಾ ಕೂಡ ಹಣದ ಮರವೇ ಆಗಿದ್ದು ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಕಡೆಯಿಂದ ಕುರುಡು ಕಾಂಚಾಣದ ಕುಣಿತ ಜೋರಾಗಿಯೇ ನಡೆದಿದೆ. ಸ್ಥಳೀಯ ಮುಸ್ಲಿಮ್ ಕ್ಯಾಂಡಿಡೇಟ್‌ಗೆ ಪ್ರಾತಿನಿಧ್ಯ ನೀಡಿರುವುದೂ ಕಾಂಗ್ರೆಸ್‌ಗೆ ಪ್ಲಸ್ ಪಾಯಿಂಟ್ ಆಗಿದೆ.

ಮೂಡುಬಿದಿರೆ: ಅಭಯನ ಕೋಪ ಅಮರಣ್ಣನ ಗೆಲುವಿಗೆ ಮೂಲ!

ಕಾಂಗ್ರೆಸ್‌ನಿಂದ ಅಭಯಚಂದ್ರ ಕಣದಲ್ಲಿದ್ದಾರೆ. ತನ್ನ ಉಡಾಫೆ ಮಾತುಗಳಿಂದ ಪತ್ರಿಕೆಯವರೊಂದಿಗೆ ನಿಷ್ಠುರ ಕಟ್ಟಿಕೊಂಡಿರುವುದು, ಸುಖಾನಂದ ಶೆಟ್ಟಿಯನ್ನು ಕೆಎಫ್‌ಡಿ ಕಾರ್ಯಕರ್ತರೇ ಕೊಂದಿದ್ದು ಎಂದು ಆರೋಪ ಮಾಡಿರುವುದು ಅಭಯಚಂದ್ರನ ಓಟ್ ಬ್ಯಾಂಕ್ ಮೇಲೆ ಕರಿನೆರಳು ಬಿದ್ದಿದೆ. ನಿನ್ನೆ ಮೊನ್ನೆ ಪಕ್ಷಕ್ಕೆ ಬಂದ ಕೆ.ಪಿ.ಜಗದೀಶ್ ಎಂಬ ಅಧಿಕಾರಿಗೆ ಬಿಜೆಪಿ ಟಿಕೆಟ್ ನೀಡಿದೆ. ಅಲ್ಲದೇ, ಸುಖಾನಂದ ಶೆಟ್ಟಿಯ ಸಹಚರ ಸತೀಶ್ ಭಟ್‌ನ ವಿರೋಧವನ್ನು ಬಿಜೆಪಿ ಹಾಕಿಕೊಂಡಿದೆ. ಇವರಿಬ್ಬರ ಜಗಳದ ನಡುವೆ ಜೆಡಿಎಸ್‌ನ ಅಮರಣ್ಣನೇ ಎದ್ದು ನಿಲ್ಲುವ ಸೂಚನೆಗಳಿವೆ. ಹಾಗೇನಾದರೂ ಆದರೆ ಅವಿಭಜಿತ ದ.ಕ.ಜಿಲ್ಲೆಯಲ್ಲಿ ಜೆಡಿಎಸ್ ಖಾತೆ ತೆರೆದಂತಾಗುತ್ತದೆ.

- ಪ್ರಕಾಶ್ ಪಿಂಟೋ

ಚುನಾವಣೆ 2008

ಬಿಜಾಪುರ: ಕಾಂಗ್ರೆಸ್–ಜೆಡಿಎಸ್ ಹಣಾಹಣಿ; ಮೂರನೇ ಸ್ಥಾನಕ್ಕೆ ಬಿಜೆಪಿ!

ಬಿರನಾಡಿನ ಬಿಜಾಪುರ ಜಿಲ್ಲೆಯಲ್ಲಿ ಒಟ್ಟು ಎಂಟು ವಿಧಾನಸಭಾ ಕ್ಷೇತ್ರಗಳಿದ್ದು ಎಂದೂ ಒಂದೇ ಪಕ್ಷಕ್ಕೆ ಅವು ಒಲಿದಿಲ್ಲ. ಹಿಂದಿನಂತೆಯೇ ಇಂದೂ ಕೂಡ ಜಾತಿ ರಾಜಕಾರಣವೇ ಜಿಲ್ಲೆಯ ಚುನಾವಣೆಯನ್ನು ನಿಯಂತ್ರಿಸುತ್ತದೆ. ಸಧ್ಯಕ್ಕಿರುವ ಪರಿಸ್ಥಿತಿಯಲ್ಲಿ ಜಿಲ್ಲೆಯಲ್ಲಿ ಒಟ್ಟಾರೆಯಾಗಿ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆಯೇ ಜಿದ್ದಾಜಿದ್ದಿ ಏರ್ಪಟ್ಟು ಬಿಜೆಪಿ ಮೂರನೇ ಸ್ಥಾನಕ್ಕೆ ದೂಡಲ್ಪಡುವ ಲಕ್ಷಣಗಳು ಕಾಣುತ್ತಿವೆ.

ಬಿಜಾಪುರ: ಇದು ಚಿಡ್ಡಿ ಚತುರ ಅಪ್ಪು ಪಟ್ಟಣಶೆಟ್ಟಿ ಪ್ರತಿನಿಧಿಸಿದ್ದ ಕ್ಷೇತ್ರ. ಅಧಿಕಾರಕ್ಕೇರಲು ಬಿಜಾಪುರವನ್ನು ಹೊತ್ತಿ ಉರಿಯುವಂತೆ ಮಾಡಿದ ಮಹಾಶಯನಿವನು. ಅಧಿಕಾರವಿದ್ದಾಗಲೂ ಹಿಂದೂ ಜಾಗರಣಾ ವೇದಿಕೆಯ ಸಭೆ ಮಾಡಿ ಹಿಂದೂ ಮತೋನ್ಮಾದವನ್ನು ಜನರಲ್ಲಿ ತುಂಬುವುದು, ಮುಸ್ಲಿಮ್ ವಿರೋಧಿ ಭಾವನೆಗಳನ್ನು ಕೆರಳಿಸಿರುವುದು – ಇವೇ ಇವನ ಮಹಾತ್ಸಾಧನೆಗಳು. ಶಾಸಕನಾಗಿ 'ಕೋಜಾ' ಸರ್ಕಾರದಲ್ಲಿ ಜವಳಿ ಖಾತೆಯ ಮಂತ್ರಿಯಾಗಿದ್ದ ಈತ ಬಣಜಿಗರನ್ನು ಆಯಾಕಟ್ಟಿನ ಸ್ಥಳದಲ್ಲಿ ತುರುಕಿದ್ದ.

ಬಿಜಾಪುರದಲ್ಲಿ ಕನಿಷ್ಠ ಮೂರು ದಿನಗಳಿಗೊಮ್ಮೆಯಾದರೂ ಕುಡಿಯುವ ನೀರನ್ನು ಸರಬರಾಜು ಮಾಡುವುದಾಗಿ ವಾಗ್ದಾನ ಮಾಡಿದ್ದ ಈತ ಅದನ್ನೂ ಈಡೇರಿಸಲಿಲ್ಲ. ಇದರಿಂದ ಸಧ್ಯ ಪಟ್ಟಣ್ಣಶೆಟ್ಟಿ ವಿರೋಧಿ ಅಲೆ ಕ್ಷೇತ್ರದಾದ್ಯಂತ ಇದೆ.

ಸಂಸದ ಬಸವನಗೌಡ ಪಾಟೀಲ್ ಯತ್ನಾಳ್ ತನ್ನ ಸಹೋದರ ಸಂಬಂಧಿ ಈಶ್ವರಪ್ಪಗೌಡನನ್ನು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದಾನೆ. ಇನ್ನು ಬಿಜೆಪಿಯ ಕಾರ್ಯದರ್ಶಿ ರಮೇಶ್ ಬದನೂರ್ ಕೂಡ ಅಪ್ಪು ವಿರುದ್ಧ ಸೆಡ್ಡು ಹೊಡೆದಿದ್ದಾನೆ. ಒಟ್ಟಿನಲ್ಲಿ ಅಪ್ಪು ಪಟ್ಟಣಶೆಟ್ಟಿಯ ಪರಿಸ್ಥಿತಿ ಚಿಂತಾಜನಕವಾಗಿರುವುದಂತೂ ಸತ್ಯ.

ಮುದ್ದೇಬಿಹಾಳ: ಎರಡು ಬಾರಿ ಕ್ಷೇತ್ರವನ್ನು ಪ್ರತಿನಿಧಿಸಿದ ಕಾಂಗ್ರೆಸ್‌ನ ಸಿ.ಎಸ್. ನಾಡಗೌಡ ಅಲಿಯಾಸ್ ಅಪ್ಪು ಸಾಹೇಬ್ ನಾಡಗೌಡ ಕಣದಲ್ಲಿದ್ದಾರೆ. ಈತ ತನ್ನ ವಿರೋಧಿ ವಿಮಲಾಭಾಯಿ ದೇಶ್‌ಮುಖ್‌ರನ್ನು ರಾಜಕೀಯವಾಗಿ ನಿರ್ನಾಮ ಮಾಡುವುದಕ್ಕಾಗಿಯೇ ಅಧಿಕಾರದ ಅರ್ಧ ದಿನಗಳನ್ನು ಕಳೆದವನು.

ಜೆಡಿಎಸ್‌ನಿಂದ ಸ್ಪರ್ಧಿಸಿರುವ ವಿಮಲಾಭಾಯಿ ದೇಶ್‌ಮುಖ್ ನಾಡಗೌಡನಿಗೆ ಪ್ರಬಲ ಪೈಪೋಟಿ ನೀಡುವ ಲಕ್ಷಣಗಳಿವೆ. ಜೊತೆಗೆ ಕಳೆದ ಚುನಾವಣೆಯಲ್ಲಿ ಅಲ್ಪ ಅಂತರದಿಂದ ಸೋತಿದ್ದ ಮಂಗಳಾದೇವಿ ಬಿರಾದರ್ ಕೂಡ ವಿಮಲಾರೊಂದಿಗೆ ಕೈಜೋಡಿಸಿರುವುದು ನಾಡಗೌಡನ ನಿದ್ದೆಗೆಡಿಸಿದೆ.

ಕುರುಬರ ಬೆಂಬಲ ಗಳಿಸಿರುವ ಬಿಎಸ್ಪಿಯ ನಿಂಗಪ್ಪ ಒಪ್ಪರಗಿ ಕೂಡ ಪೈಪೋಟಿಯಲ್ಲಿದ್ದಾರೆ.

ದೇವರ ಹಿಪ್ಪರಗಿ: ಇದು ಶಿವಪುತ್ರಪ್ಪ ದೇಸಾಯಿ ಎಂಬ ಮುದಿ ಶಾಸಕನ ಭದ್ರಕೋಟೆ. ಈತ ಈ ಬಾರಿ ವಿಧಾನಸೌಧದ ಮೆಟ್ಟಿಲೇರುವುದು ತುಸು ಕಷ್ಟ. ಏಕೆಂದರೆ, ಈತನಿಗೆ ಕಾಂಗ್ರೆಸ್‌ನ ಗಣಿ ಲೂಟಿಕೋರ ಎ.ಎಸ್.ನಡಹಳ್ಳಿ ಪಾಟೀಲ್ ಪ್ರಬಲ ಸ್ಪರ್ಧೆಯೊಡ್ಡಲಿದ್ದಾನೆ. ತಾನು ಮತ್ತೆ ಸಂಸದನಾಗುವುದು ಕಷ್ಟ ಎಂದು ಬಸವನಗೌಡ ಪಾಟೀಲ್ ಯತ್ನಾಳ್ ಇಲ್ಲಿ ತಲೆಯೆತ್ತುತ್ತಿದ್ದಾನೆ. ಅಪ್ಪು ಪಟ್ಟಣಶೆಟ್ಟಿಯ ಪರಮಾಪ್ತ ಶಿಷ್ಯ ಕಾಶಿನಾಥ್ ಮಸಬಿನಾಳ ಯತ್ನಾಳ್‌ನ ಕಮಲವನ್ನು ಕಸಿದುಕೊಳ್ಳುವ ಪ್ರಯತ್ನದಲ್ಲಿದ್ದಾನೆ.

ನಡಹಳ್ಳಿ ಮೈನ್ಸ್‌ನಿಂದ ಮಾಡಿದ ದುಡ್ಡು ಅದೆಷ್ಟು ಕೆಲಸ ಮಾಡುತ್ತೋ ನೋಡಬೇಕು.

ಬಬಲೇಶ್ವರ: ಇಲ್ಲಿ ಕಾಂಗ್ರೆಸ್‌ನ ಎಂ.ಬಿ.ಪಾಟೀಲ್ ಕಣದಲ್ಲಿದ್ದಾರೆ. ಈತ ತಂದೆಯ ಹೆಸರಿನಲ್ಲೇ ಬೆಳೆದವನಾದರೂ ತಂದೆಗೆ ತಕ್ಕ ಮಗನಲ್ಲ, ಕೆಲಸಕ್ಕಿಂತ ಶೋಕಿಯಾಗಿ ತಿರುಗಾಡೋದೆ ಇವನಿಗಂಟಿದ ರೋಗ. ಲಂಬಾಣಿ ತಾಂಡಾಗಳಲ್ಲಿ ಕಣ್ಣೀರು ಹರಿಸಿ ಮೋಡಿ ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾನೆ. ಇವನಿಗೆ ರಾಜಕೀಯ ವೈರಿ ಶಿವಾನಂದ ಪಾಟೀಲ್‌ನ ತಮ್ಮ ವಿಜುಗೌಡ ಪಾಟೀಲ್ ಜೆಡಿಎಸ್‌ನಿಂದ ನಿಂತು ಸೆಡ್ಡು ಹೊಡೆದಿದ್ದಾನೆ. ಮಚ್ಚು ಝುಳಪಿಸುವುದರಲ್ಲಿ, ಕಾಂಟ್ರಾಕ್ಟರ್‌ಗಳಿಂದ ವಸೂಲಿ ಮಾಡುವುದರಲ್ಲಿ ನಿಸ್ಸೀಮನಾದ ವಿಜುಗೌಡ ಎಂ.ಬಿ.ಪಾಟೀಲ್ ವಿರುದ್ಧ ಅದೇನು ಕರಾಮತ್ತು ಮಾಡುತ್ತಾರೋ ನೋಡಬೇಕು.

ಇನ್ನು ಬಿಜೆಪಿಯಿಂದ ನಿಂತಿರುವ ವೀರನಗೌಡ ಬಿರಾದಾರ್ ಇಲ್ಲಿ ಲೆಕ್ಕಕ್ಕೆ ಇಲ್ಲ.

ಬಸವನ ಬಾಗೇವಾಡಿ: ಪ್ರತೀ ಬಾರಿ ಪಕ್ಷ ಮತ್ತು ಕ್ಷೇತ್ರ ಎರಡನ್ನು ಬದಲಾಯಿಸುತ್ತಿದ್ದ ಶಿವಾನಂದ ಪಾಟೀಲ್ ಈ ಬಾರಿ ಎರಡನ್ನೂ ಬದಲಾಯಿಸದೇ ಸೆಟೆದು ನಿಂತಿದ್ದಾನೆ. ಸಾರಾಯಿ ದುಡ್ಡಿನಿಂದಲೇ ಆಯ್ಕೆಯಾಗುತ್ತಿದ್ದ ಈತ ಈ ಬಾರಿ ಚಿಡ್ಡಿ ಗಾಣಿಗ ಬೆಳ್ಳುಬ್ಬಿಯ ವಿರುದ್ಧ ಸೆಣಸಲಿದ್ದಾನೆ. ಜೆಡಿಎಸ್‌ನ ಸೋಮನಗೌಡ ಪಾಟೀಲ್ ಕೂಡ ಪಂಚಮಸಾಲಿಯಾಗಿದ್ದು ಶಿವಾನಂದನಿಗೆ ತೊಡರಾಗಬಹುದು.

ನಾಗಠಾಣ: ಕ್ಷೇತ್ರ ಪುನರ್ವಿಂಗಡಣೆಯಿಂದಾಗಿ ಉಗಮವಾದ ಮೀಸಲು ಕ್ಷೇತ್ರವಿದು. ಬಿಜೆಪಿಯ ಜಿಲ್ಲಾಧ್ಯಕ್ಷ ದಲಿತ ಬಲಗೈ ಗುಂಪಿನ ವಿಠ್ಠಲ ಕಟಕದೊಂಡ ಬಿಜೆಪಿಯಿಂದ ನಿಂತಿದ್ದರೆ ಜೆಡಿಎಸ್‌ನಿಂದ ಆರ್.ಕೆ.ರಾಥೋಡ್ ಇದ್ದಾನೆ. ರಾಥೋಡ್ ಮಲ್ಲಿಕಾರ್ಜುನ ಶಿಕ್ಷಣ ಸಂಸ್ಥೆಗಳನ್ನು ಕೇವಲ ಕಾಗದದಲ್ಲಿ ತೆರೆದು ಕೋಟಿ ಕೋಟಿ ಹಣ ನುಂಗಿ ಹಾಕಿದ ಕೀರ್ತಿ ಪಡೆದುಕೊಂಡಿದ್ದಾನೆ. ಇವರಿಬ್ಬರ ಜಗಳದಲ್ಲಿ ಕಾಂಗ್ರೆಸ್‌ನ ರಾಜು ಆಲಗುರ್ ಎದ್ದು ಬಂದರೆ ಆಶ್ಚರ್ಯವಿಲ್ಲ.

ಇಂಡಿ: ಮಹಾರಾಷ್ಟ್ರದ ಸೊಲ್ಲಾಪುರಕ್ಕೆ ಅಂಟಿಕೊಂಡ ಕ್ಷೇತ್ರವಿದು. ಸೊಲ್ಲಾಪುರದ ಡಾನ್ ರವಿಕಾಂತ್ ಇಲ್ಲಿ ಪಂಚಮಸಾಲಿಗರ ಬೆಂಬಲದಿಂದಲೇ ಪಕ್ಷೇತರನಾಗಿ ಸತತ ಮೂರು ಬಾರಿ ಆಯ್ಕೆಯಾಗಿದ್ದ. ತನ್ನ ತೋಳ್ಬಲ ಮತ್ತು ಹಣಬಲದ ಮೂಲಕ ಕ್ಷೇತ್ರವನ್ನು ಪ್ರತಿನಿಧಿಸಿದ ಈತ ಈ ಬಾರಿ ಕಾಂಗ್ರೆಸ್‌ನ ಯಶವಂತಗೌಡ ಪಾಟೀಲ್ ಎಂಬ ಸಮಬಲದ ಪಂಚಮಸಾಲಿ ಲಿಂಗಾಯತನನ್ನು ಎದುರಿಸುವುದು ತುಸು ಕಷ್ಟವಾಗಿದೆ. ಯಶವಂತ ಪಾಟೀಲ್ ಕೂಡ ಎರಡು ಬಾರಿ ಬಿಜಾಪುರ ಜಿ.ಪಂ.ಗೆ ಅಧ್ಯಕ್ಷನಾಗಿದ್ದವನು. ಹಾಗಾಗಿ ಜಿದ್ದಾಜಿದ್ದಿಯೇನಿದ್ದರೂ ಇವರಿಬ್ಬರ ನಡುವೆಯೇ ಇರುವುದಂತೂ ಸತ್ಯ. ಬಿಜೆಪಿ ಇಲ್ಲಿ ಲೆಕ್ಕಕ್ಕಿಲ್ಲ.


ಸಿಂದಗಿ: ಜೆಡಿಎಸ್‌ನಿಂದ ಎಂ.ಸಿ.ಮನಗುಳಿ ನಿಂತಿದ್ದಾನೆ. 'ಅತ್ತ ಕಾಡು ಬಾ ಅನ್ನುತ್ತೆ, ಇತ್ತ ಮತದಾರ ತೊಲಗು ಎನ್ನುತ್ತಿದ್ದಾನೆ' ಎಂಬ ಪರಿಸ್ಥಿತಿ ಈತನದು. ಕಾಂಗ್ರೆಸ್‌ನಿಂದ ಜಿಲ್ಲಾಧ್ಯಕ್ಷ ಶರಣಪ್ಪ ಸುಣಗಾರ್ ನಿಂತಿದ್ದಾರೆ. ಆದರೆ ಖುದ್ದು ಕಾಂಗ್ರೆಸ್ಸಿಗರೇ ಈತನ ಜೊತೆಗಿಲ್ಲದಿದ್ದುದರಿಂದ ಅವನ ಭವಿಷ್ಯ ಡೋಲಾಯಮಾನವಾಗಿದೆ. ಆದರೂ ಕುರುಡರಲ್ಲಿ ಮೆಳ್ಳಗಣ್ಣೇ ವಾಸಿ ಎಂದು ಜನ ಇವನ ಹಿಂದಿದ್ದಾರೆ. ಅದೂ ಅಲ್ಲದೆ, ಈ ಹಿಂದಿನ ಚುನಾವಣೆಯಲ್ಲಿ ಸೋತಿರುವ ಸುಣಗಾರ್ ಒಂದಿಷ್ಟು ಬುದ್ಧಿ ಕಲಿತಂತೆ ಕಾಣುತ್ತಿದೆ.


ಇನ್ನು ರಮೇಶ್ ಭುಸನೂರ್ ಎಂಬುವವನು ಯಡ್ಡಿಗೆ ಅಲ್ಪ ಸ್ವಲ್ಪ ಕಪ್ಪ ಕಾಣಿಕೆ ಅರ್ಪಿಸಿ ಟಿಕೆಟ್ ಗಿಟ್ಟಿಸಿಕೊಂಡಿದ್ದಾನೆ. ಬಿಎಸ್‌ಪಿಯಿಂದ ಸ್ಪರ್ಧಿಸಿರುವ ಎಸ್.ಎಮ್.ಪಾಟೀಲ್ ಹೆಚ್ಚು ಮತ ಕಿತ್ತಷ್ಟೂ ಕಾಂಗ್ರೆಸ್ ಮತ್ತು ಜೆಡಿಎಸ್‌ಗೆ ಹಾನಿಯಾಗಿ ತನಗೆ ಲಾಭವಾಗುತ್ತದೆ ಎಂಬ ಲೆಕ್ಕಾಚಾರದಲ್ಲಿ ಕುಳಿತಿದ್ದಾನೆ. ಅದು ಹಾಗಾಗೋ ಲಕ್ಷಣಗಳು ಕಾಣುತ್ತಿವೆ.


ಬೆಳಗಾವಿ: ಬಿಜೆಪಿಯ ಕಿತ್ತಾಟ ಕಾಂಗ್ರೆಸ್‌ಗೆ ವರದಾನ!

ಮಹಾನ್ ಘಟಾನುಘಟಿ ನಾಯಕರುಗಳು ತಮ್ಮ ಮೀಸೆ ಹುರಿ ಮಾಡಿಕೊಂಡು ಕಣಕ್ಕಿಳಿದಿರುವ ಬೆಳಗಾವಿ ಚುನಾವಣಾ ಅಖಾಡವೀಗ ಕುರುಕ್ಷೇತ್ರವಾಗಿ ಮಾರ್ಪಟ್ಟಿದೆ. ಇಲ್ಲಿ ಯಾರು ಗೆಲ್ಲುತ್ತಾರೆ, ಯಾರು ಸೋಲುತ್ತಾರೆ ಎಂಬುದು ನಿಗೂಢ. ಎ.ಬಿ.ಪಾಟೀಲ, ಶಶಿಕಾಂತ ನಾಯಕ, ಪ್ರಕಾಶ ಹುಕ್ಕೇರಿ, ಜಾರಕಿಹೊಳಿ ಕುಟುಂಬ, ಡಿ.ಬಿ.ಇನಾಮದಾರ ತರಹದ ಅತಿರಥ ಮಹಾರಥರುಗಳೆ ಸ್ಪರ್ಧೆಯಲ್ಲಿದ್ದಾರೆ. ಹಣ, ಹೆಂಡ ಹಂಚಿ ಆರಿಸಿ ಬಂದು ವಿಧಾನಸೌಧದ ಗದ್ದುಗೆ ಏರಿ ಮಾಡಬಾರದ್ದನ್ನು ಮಾಡಿ ಇಲ್ಲಸಲ್ಲದ ಭರವಸೆಯ ಮಹಾಪೂರವನ್ನೇ ಹರಿಸುತ್ತಿದ್ದ ಇವರು ಈ ಸಲ ಕ್ಷೇತ್ರವಿಂಗಡಣೆಯಿಂದ ಮತ್ತು ಚುನಾವಣೆ ನೀತಿಸಂಹಿತೆಯಿಂದ ಅಡಕತ್ತರಿಯಲ್ಲಿ ಸಿಲುಕಿದ ಅಡಿಕೆಯಂತಾಗಿದ್ದಾರೆ.

■ ಮಧುಬಾಲಾ


ಅಂಗಡಿ


ಸಂಭಾಜಿ ಪಾಟೀಲ್


ಶಂಕರಗೌಡ

ಬೆಳಗಾವಿ ದಕ್ಷಿಣ:

ಇಲ್ಲಿ ಬಿಜೆಪಿಯಿಂದ ಅಭಯ ಪಾಟೀಲ್, ಕಾಂಗ್ರೆಸ್‌ನಿಂದ ಸಂಭಾಜಿ ಪಾಟೀಲ್, ಜೆಡಿಎಸ್‌ನಿಂದ ಪ್ರಮೋದ ಪಾಟೀಲ, ಎಂಇಎಸ್‌ನ ಒಂದು ಬಣದಿಂದ ನಗರಸೇವಕ ಕಿರಣ ಸಾಯಿನಾಯಕ, ಇನ್ನೊಂದು ಬಣದಿಂದ ದೀಪಕ ದಳವಿ ಕಣದಲ್ಲಿದ್ದಾರೆ.

ಬಿಜೆಪಿಯ ಅಭಯ ಪಾಟೀಲನನ್ನು ಸೋಲಿಸಿಯೇ ತೀರಬೇಕೆಂಬ ಹಠಕ್ಕೆ ಬಿದ್ದಿರುವ ಅದೇ ಪಕ್ಷದ ಸಂಸದ ಸುರೇಶ್ ಅಂಗಡಿ ಅದನ್ನು ಸಾಧ್ಯವಾಗಿಸುವುದಕ್ಕೆ ಕೆಲ ಕಾರ್ಯಕರ್ತರ ಕೈಗೆ ಸುಪಾರಿ ಕೊಟ್ಟಿದ್ದಾನೆ. ಅದೂಅಲ್ಲದೆ, ತನ್ನದೇ ಪಾಳೆಯದ ಕೆಲ ಕಾರ್ಯಕರ್ತರನ್ನು ಅಭಯ ಪಾಟೀಲ ಹಿಂದೆ ಕಳುಹಿಸಿ ಆತನ ಜೊತೆಗಿದ್ದುಕೊಂಡೇ ಆತನ ಸೋಲಿಗೆ ವ್ಯವಸ್ಥಿತ ಸಂಚು ಹೂಡುತ್ತಿದ್ದಾರೆ.


ಅಭಯ ಪಾಟೀಲ ಈ ಹಿಂದೆ ಬಾಗೇವಾಡಿ ವಿಧಾನಸಭಾ ಕ್ಷೇತ್ರದ ಶಾಸಕನಾಗಿದ್ದ. ಆಗ ಸಂಸದ ಸುರೇಶ ಅಂಗಡಿ ಬಳ್ಳಾರಿ ನಾಲಾ ಹೂಳೆತ್ತುವ ಕಾಮಗಾರಿಗೆ ಸರ್ಕಾರದಿಂದ ಬಿಡುಗಡೆಯಾದ ಕೋಟ್ಯಂತರ ರೂಪಾಯಿ ಹಣದಲ್ಲಿ ಅರ್ಧದಷ್ಟನ್ನು ತನ್ನ ಜೇಬಿಗಿಳಿಸಿಕೊಂಡಿದ್ದು, ಈ ನಾಲಾದ ಬಹುತೇಕ ಭಾಗ ಅಭಯ ಪಾಟೀಲನ ಬಾಗೇವಾಡಿ ಕ್ಷೇತ್ರಕ್ಕೂ ಬರುತ್ತಿತ್ತಾದ್ದರಿಂದ ಕಮೀಷನ್ ತಿನ್ನುವಲ್ಲಿ ಜಗಳವೇರ್ಪಟ್ಟು ಈ ಹಂತಕ್ಕೆ ಬಂದು ನಿಂತಿದೆ.

ಇನ್ನೊಂದೆಡೆ, ಅಭಯ ಪಾಟೀಲಗೆ ನೇರ ಪ್ರತಿಸ್ಪರ್ಧಿಯಾಗಿ ಮಾಜಿ ಮೇಯರ್ ಕಾಂಗ್ರೆಸ್‌ನ ಸಂಭಾಜಿ ಪಾಟೀಲಗೆ ಬಿಜೆಪಿಯವರೇ ಆದ ಮೇಯರ್ ಪ್ರಶಾಂತಾ ಬುಡವಿ ಕೂಡ ಬೆಂಬಲಿಸುತ್ತಿದ್ದಾರೆ. ಅಭಯ ಪಾಟೀಲನನ್ನು ರಾಜಕೀಯವಾಗಿ ಮುಗಿಸಲು ಒಂದೆಡೆ ಅಂಗಡಿ ಇನ್ನೊಂದೆಡೆ ಪ್ರಶಾಂತಾ ಬುಡವಿ ನಡೆಸುತ್ತಿರುವ ಪ್ರಯತ್ನಗಳು ಈ ಬಾರಿ ಬಿಜೆಪಿಯನ್ನು ಹೈರಾಣ ಮಾಡಲಿವೆ. ಇದರಿಂದ ಲಾಭವಾಗುವುದು ಕಾಂಗ್ರೆಸ್‌ನ ಸಂಭಾಜಿ ಪಾಟೀಲ್‌ಗೆ. ಸಂಭಾಜಿ ಪಾಟೀಲರ ಪ್ರಭಾವವು ಈ ಭಾಗದಲ್ಲಿ ಹೆಚ್ಚಿದ್ದು ಜನರ ಒಲವು ಇವರ ಕಡೆಗೆ ಇದ್ದಂತಿದೆ. ಇಲ್ಲಿ ಜೆಡಿಎಸ್‌ನ ಪ್ರಮೋದ ಪಾಟೀಲಂತೂ ಲೆಕ್ಕಕ್ಕೇ ಇಲ್ಲ, ಇನ್ನು ಎಂಇಎಸ್‌ನಲ್ಲಂತೂ ಭಿನ್ನಮತ ಭುಗಿಲೆದ್ದಿದ್ದು ತಾನು ತೋಡಿದ ಬಾವಿಯಲ್ಲಿ ತಾನೇ ಬೀಳುತ್ತಿದೆ.

ಬೆಳಗಾವಿ ಉತ್ತರ




ಕುಡಚಿ


ಸಂಜಯ್ ಪಾಟೀಲ್

ಎಂಇಎಸ್‌ನಿಂದ ಮಾಜಿ ಮಹಾಪೌರ ವಿಜಯ ಮೋರೆ, ಎಂಇಎಸ್‌ನ ಇನ್ನೊಂದು ಬಣದಿಂದ ರಮೇಶ ಪಾವಲೆ, ರಾಷ್ಟ್ರೀಯ ಹಿಂದೂ ಸೇನಾ ವತಿಯಿಂದ ಮತ್ತೋರ್ವ ಮರಾಠಿಗ ವಿಲಾಸ ಪವಾರ ಕಣದಲ್ಲಿರುವುದರಿಂದ, ಈ ಮೂವರು ಮರಾಠಿ ಅಭ್ಯರ್ಥಿಗಳ ಮಧ್ಯೆ ಮರಾಠಿ ಮತಗಳು ಹಂಚಿಹೋಗಲಿದ್ದು ಮುಸ್ಲಿಂ ಹಾಗೂ ಲಿಂಗಾಯತ ಮತಗಳು ಇಲ್ಲಿ ನಿರ್ಣಾಯಕವಾಗಲಿದೆ.

ಆ ಮತಗಳಿಗಾಗಿ ಕಾಂಗ್ರೆಸ್‌ನ ಟಿಕೆಟ್ ವಂಚಿತ ಮಾಜಿ ಶಾಸಕ ರಮೇಶ ಕುಡಚಿ ಜೆಡಿಎಸ್‌ನಿಂದಲೂ, ರಸ್ತೆ ಮೇಲೆ ಕಾಲಿಟ್ಟಿದ್ದೆ ಗೊತ್ತಿಲ್ಲದ ಹಾಗೂ ಸದಾ ಎಸಿ ಕಾರಲ್ಲಿ ಸುತ್ತಾಡುವ ಫಿರೋಜ್ ಶೇಠ್ ಕಾಂಗ್ರೆಸ್‌ನಿಂದಲೂ ಸ್ಪರ್ಧಿಸುತ್ತಿದ್ದಾರೆ. ಇನ್ನು ಬಿಜೆಪಿಯಿಂದ ಶಂಕರಗೌಡ ಪಾಟೀಲ ಈ ಕ್ಷೇತ್ರದ ಕಣದಲ್ಲಿದ್ದು ಪ್ರಚಾರ ಕಾರ್ಯ ಬಿರುಸಿನಿಂದ ನಡೆಸಿದ್ದಾರೆ. ಮನೆ-ಮನೆಗೆ ತೆರಳುತ್ತಿರುವ ಈತ ಲಿಂಗಾಯತ ಸೇರಿದಂತೆ ಮರಾಠಿ ಮತ್ತು ಮುಸ್ಲಿಂ ಮತಗಳನ್ನು ಸೆಳೆಯುವಲ್ಲಿ ಮುಂದಿದ್ದಾರೆ.

ಬೆಳಗಾವಿ ಗ್ರಾಮೀಣ

ಈ ಕ್ಷೇತ್ರದಲ್ಲಿ ಬಿಜೆಪಿಯಿಂದ ಸಂಜಯ ಪಾಟೀಲ, ಜೆಡಿಎಸ್‌ನಿಂದ ರುಕ್ಮಿಣಿ ಗಂಗನಗೌಡ ಹಾಗೂ ಕಾಂಗ್ರೆಸ್‌ನಿಂದ ಮಾಜಿ ಶಾಸಕ ಎಸ್.ಸಿ.ಮಾಳಗಿ, ಎಂಇಎಸ್‌ನಿಂದ ಮಾಜಿ ಶಾಸಕ ಮನೋಹರ ಕಿಣೇಕರ ಸ್ಪರ್ಧೆಯಲ್ಲಿದ್ದಾರೆ. ಕಿಣೇಕರ ವಿರುದ್ಧ ಎಂಇಎಸ್‌ನ ಹಿರಿಯ ಕುಳ ಮಾಜಿ ಮೇಯರ್ ಶಿವಾಜಿ ಸುಂಠಕರ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವುದರಿಂದ ಇಲ್ಲಿ ಎಂಇಎಸ್ ಮತಗಳು ಹಂಚಿಹೋಗಲಿವೆ. ಕ್ಷೇತ್ರಕ್ಕೆ ಹೊಸಬನಾದ ಸಂಜಯ ಪಾಟೀಲ ತನ್ನನ್ನು ಜನರಿಗೆ ಪರಿಚಯ ಮಾಡಿಕೊಳ್ಳುವುದರಲ್ಲಿಯೇ ತೋಪಾಗುತ್ತಿದ್ದಾನೆ. ಹಾಗೆಯೇ ಜೆಡಿಎಸ್‌ನ ರುಕ್ಮಿಣಿಗೌಡ ತಮ್ಮ ಸ್ವಗ್ರಾಮದ ಜನತೆಗೆ ಪರಿಚಯವಿಲ್ಲ, ಪ್ರಬಲ ಸ್ಪರ್ಧಿಗಳಿಲ್ಲದ ಕಾರಣ ಎರಡು ಬಾರಿ ಶಾಸಕನಾಗಿರುವ ಎಸ್.ಸಿ. ಮಾಳಗಿ ಇಲ್ಲಿ ಗೆಲುವಿನ ನಗೆ ಬೀರುವುದು ಸಹಜವಾಗಿದೆ.

...ಮಕನಮರಡಿ


ಸತೀಶ್ ಜಾರಕಿಹೊಳಿ

... ಗೋಕಾಕದ ಜಾರಕಿಹೊಳಿ ಕುಟುಂಬದ ...ಚಪಾಂಡವರೀಗ ಕವಲುದಾರಿಯಲ್ಲಿ ನಡೆದಿದ್ದಾರೆ. ...ಜಿ ಉಪಮುಖ್ಯಮಂತ್ರಿ ಸಿದ್ದರಾಮಯ್ಯನವರ ... ಎಂಎಲ್‌ಸಿ ಸತೀಶ ಜಾರಕಿಹೊಳಿ ಕಾಂಗ್ರೆಸ್‌ನಲ್ಲಿ ...ುತಿಸಿಕೊಂಡು ಯಮಕನಮರಡಿ ಕ್ಷೇತ್ರದಿಂದ ...ಟ್ ಪಡೆದಿದ್ದಾರೆ. ಈ ಕ್ಷೇತ್ರದಲ್ಲಿ ಬಿಜೆಪಿಯಿಂದ ...ಜಿ ಶಾಸಕ ಎಂ.ಎಲ್.ಮುತ್ತೆಣ್ಣವರ, ಜೆಡಿಎಸ್‌ನಿಂದ ಬಾಳಗೌಡ ಪಾಟೀಲ ...ಾಳುಗಳು. ಯಮಕನಮರಡಿ ಕ್ಷೇತ್ರ ರಚನೆಯಾದಾಗಿನಿಂದಲೇ ಈ ಕ್ಷೇತ್ರದ ...ತದಾರರ ಓಲೈಕೆಯಲ್ಲಿ ಸತೀಶ ತೊಡಗಿಕೊಂಡಿದ್ದರು. ಹಾಗಾಗಿ ಇಲ್ಲಿ ...ರ ಗೆಲುವು ಖಚಿತವೆಂದು ಹೇಳಬಹುದು.


...ೋಕಾಕ

... ಈ ಕ್ಷೇತ್ರವಂತೂ ಸಹೋದರರ ಸಮರದ ಅಖಾಡವಾಗಿದೆ. ಕಾಂಗ್ರೆಸ್‌ನಿಂದ ...ಜಿ ಶಾಸಕ ರಮೇಶ ಜಾರಕಿಹೊಳಿ ಕಣದಲ್ಲಿದ್ದರೆ ಇವರ ವಿರುದ್ಧ ಬಿಜೆಪಿಯಿಂದ ... ಭೀಮಶಿ ಜಾರಕಿಹೊಳಿ ಸ್ಪರ್ಧೆಯಲ್ಲಿದ್ದಾರೆ. ಈ ಸಹೋದರರ ಸ್ಪರ್ಧೆಯ ...ನ್ಯೆ ಜೆಡಿಎಸ್‌ನ ಅಶೋಕ ಪೂಜಾರಿ ಠೇವಣಿ ಕಳೆದುಕೊಳ್ಳುವುದಂತೂ ...ಚಿತ.

...ರಭಾವಿ


ಬಾಲಚಂದ್ರ ಜಾರಕಿಹೊಳಿ

... ಇಲ್ಲಿ ಬಿಜೆಪಿಯಿಂದ ವಿವೇಕರಾವ ಪಾಟೀಲ, ...ಗ್ರೆಸ್‌ನಿಂದ ಮಾಜಿ ಮಂತ್ರಿ ವಿ.ಎಸ್.ಕೌಜಲಗಿ, ...ಎಸ್‌ನಿಂದ ಬಾಲಚಂದ್ರ ಜಾರಕಿಹೊಳಿ ...ಸಿದ್ದಾರೆ. ಕ್ಷೇತ್ರದಲ್ಲಿ ಬಾಲಚಂದ್ರ ಜನಪರ ಕಾರ್ಯಗಳನ್ನು ಮಾಡಿದ್ದಾರೆ. ಇದು ಈ ಭಾಗದ ಜನರ ಮೇಲೆ ಆಚ್ಚೊತ್ತಿದೆ.


ಕೌಜಲಗಿ


ಕಾಂಗ್ರೆಸ್‌ನಿಂದ ಸ್ಪರ್ಧಿಸಿದ ವಿ.ಎಸ್.ಕೌಜಲಗಿ ಸೋಲು ಖಚಿತವಿದ್ದರೂ ಸಹ ಮೀಸೆ ಮಣ್ಣಾಗಿಲ್ಲ ಎನ್ನುವಂತೆ ಬಾಲಚಂದ್ರ ವಿರುದ್ಧ ಸೆಣಸಾಟಕ್ಕಿಳಿದಿದ್ದಾರೆ. ಇಲ್ಲಿಯೂ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಹಣಾಹಣಿಯಿದ್ದು ಬಿಜೆಪಿ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಷ್ಟೆ.

ರಾಮದುರ್ಗ

... ಈ ಕ್ಷೇತ್ರದಲ್ಲಿ ದೊಡ್ಡ ಸ್ಪರ್ಧೆ ಇಲ್ಲದಿರುವುದರಿಂದ ಕಳೆದ ಬಾರಿ ಗೆದ್ದಿದ್ದ ...ಜೆಪಿ ಮಹಾದೇವಪ್ಪ ಯಾದವಾಡ ಮತ್ತೆ ಗೆದ್ದು ಬಂದರೆ ಆಶ್ಚರ್ಯ ...ಬೇಕಿಲ್ಲ.


ಜಿಗಜಿಣಗಿ


ಹುಕ್ಕೇರಿ


ಕೋರೆ

ಚಿಕ್ಕೋಡಿ

ಕಾಂಗ್ರೆಸ್‌ನಿಂದ ಮಾಜಿ ಸಚಿವ ಪ್ರಕಾಶ ಹುಕ್ಕೇರಿ ಸ್ಪರ್ಧಿಸಿದ್ದರೂ ಸಹ ಆರಿಸಿ ಬರಲು ತೀವ್ರ ಹೆಣಗಾಡಬೇಕಿದೆ. ಕಾರಣ ಇಲ್ಲಿ ಇವರದೇ ಪಕ್ಷದ ಪ್ರಭಾಕರ ಕೋರೆ ಇವರ ಪಾಲಿಗೆ ಬಿಸಿತುಪ್ಪವಾಗಿರುವುದು. ಜೆಡಿಎಸ್‌ನಿಂದ ಕಿರಣ ಕೋರೆ ಇದ್ದಾರೆ. ಹುಕ್ಕೇರಿ ಮತ್ತು ಕೋರೆ ಮಧ್ಯದ ತಿಕ್ಕಾಟದ ಲಾಭ ಪಡೆದುಕೊಂಡು ಬಿಜೆಪಿಯ ಹಾಲಿ ಸಂಸದ ರಮೇಶ ಜಿಗಜಿಣಗಿ ಇಲ್ಲಿ ಬಹುಮತ ಪಡೆದರೂ ಅಚ್ಚರಿ ಪಡಬೇಕಿಲ್ಲ.

ಖಾನಾಪುರ

ಇಲ್ಲಂತೂ ಸರಾಸರಿ 23 ಜನ ಅಭ್ಯರ್ಥಿಗಳಿದ್ದಾರೆ. ಆದರೆ ಅವರುಗಳಲ್ಲಿ ಪ್ರಮುಖ ಸ್ಪರ್ಧಿ ಕಾಂಗ್ರೆಸ್‌ನ ಅಭ್ಯರ್ಥಿ ರಫಿಕ ಖಾನಾಪುರ್. ಆದರೆ ಜೆಡಿಎಸ್‌ನ ನಾಸೀರ ಬಾಗವಾನ ಮುಸ್ಲಿಂ ಮತಗಳನ್ನು ಒಡೆದರೆ, ಕಾಂಗ್ರೆಸ್ ಟಿಕೆಟ್ ವಂಚಿತವಾಗಿ ಪಕ್ಷೇತರವಾಗಿ ಸ್ಪರ್ಧಿಸಿರುವ ಕೋಮಲಣ್ಣಾ ಜಿನಗೊಂಡ ಪೂರ್ವ ಭಾಗದ ಮತಗಳನ್ನು ಸೆಳೆಯುವುದರಿಂದ ರಫಿಕ ಸ್ವಲ್ಪ ಹೆಣಗಾಡಬೇಕಿದೆ. ಬಿಜೆಪಿಯಿಂದ ಪ್ರಹ್ಲಾದ ರೇಮಾಣಗಂತೂ ಬಿಜೆಪಿ ವಲಯದಲ್ಲಿಯೇ ವಿರೋಧ ವ್ಯಕ್ತವಾಗಿದೆ. ಎಂಇಎಸ್‌ನಿಂದ ಮಾಜಿ ಶಾಸಕ ದಿಗಂಬರ ಪಾಟೀಲ ಇದ್ದರೂ ಇಲ್ಲೂ ಎಂಇಎಸ್‌ಗೆ ಬಂಡಾಯ ಅಭ್ಯರ್ಥಿಗಳ ಬಿಸಿ ತಟ್ಟಿದೆ.


ಕಿತ್ತೂರ

ಈಗಾಗಲೇ ಒಂದು ಬಾರಿ ಶಾಸಕರಾಗಿರುವ ಬಿಜೆಪಿ ಅಭ್ಯರ್ಥಿ ಸುರೇಶ ಮಾರಿಹಾಳ ಮತ್ತೆ ಆರಿಸಿ ಬರುವುದು ಕಠಿಣ. ಇನ್ನು ಕಾಂಗ್ರೆಸ್‌ನ ಭೂಧನಿ ಇನಾಮದಾರ ಈ ಕ್ಷೇತ್ರದ ಜನತೆಗೆ ಎಂದೋ ಬೇಡವಾಗಿದ್ದಾರೆ. ಜೆಡಿಎಸ್‌ನ ವೀರನಗೌಡ ಪಾಟೀಲ ಪ್ರಬಲ ಸ್ಪರ್ಧಿಯೇನಲ್ಲ. ಈ ಎಲ್ಲ ಕಾರಣಗಳಿಂದ ಕಾಂಗ್ರೆಸ್‌ನ ಬಂಡಾಯ ಅಭ್ಯರ್ಥಿ ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಎಸ್.ಎಫ್. ದೊಡ್ಡಗೌಡರ ಆರಿಸಿ ಬರಬಹುದು.

ಅಥಣಿ

ಇಲ್ಲಿ ಬಿಜೆಪಿಯಿಂದ ಲಕ್ಷ್ಮಣ ಸವದಿ, ಕಾಂಗ್ರೆಸ್‌ನಿಂದ ಕಿರಣಕುಮಾರ ಪಾಟೀಲ, ಜೆಡಿಎಸ್‌ನಿಂದ ಸದಾಶಿವ ಬುಟಾಳಿ ಸ್ಪರ್ಧೆಯಲ್ಲಿದ್ದಾರೆ. ಕಿರಣಕುಮಾರ್‌ಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿದ್ದರಿಂದ ಕಾಂಗ್ರೆಸ್‌ನಲ್ಲಿ ಒಂದು ಗುಂಪು ಬಂಡಾಯವೆದ್ದಿದೆ. ಜೈನ ಸಮುದಾಯದ ಕಿರಣಗೆ ಕೊಡುವುದಕ್ಕಿಂತ ಲಿಂಗಾಯತ ಅಥವಾ ಮುಸ್ಲಿಂರಿಗೆ ಟಿಕೆಟ್ ನೀಡಬೇಕಾಗಿತ್ತು ಎನ್ನುವುದು ಅವರ ವಾದ. ಕೊನೆಗೆ ಲಕ್ಷ್ಮಣ ಸವದಿಗೆ ಮತದಾರ ಈ ಸಲ ಮಣೆ ಹಾಕಲೂಬಹುದು.

ಹುಕ್ಕೇರಿ


ಎ.ಬಿ.ಪಾಟೀಲ್

ಇಲ್ಲಿ ಸಚಿವತ್ರಯರ ಕಾಳಗ ನಡೆದಿದೆ. ಇಲ್ಲಿ ಇವರೇ ಆರಿಸಿ ಬರುತ್ತಾರೆ ಎಂದು ಹೇಳಿಬರುವುದು ಕಠಿಣ. ಕಾಂಗ್ರೆಸ್‌ನಿಂದ ಎ.ಬಿ.ಪಾಟೀಲ, ಬಿಜೆಪಿಯಿಂದ ಶಶಿಕಾಂತ ನಾಯಿಕ, ಜೆಡಿಎಸ್‌ನಿಂದ ಉಮೇಶ ಕತ್ತಿ ಸ್ಪರ್ಧೆಯಲ್ಲಿದ್ದಾರೆ. ಎಲ್ಲರೂ ಅಧಿಕಾರವಿದ್ದಾಗ ಮತದಾರರನ್ನು ನಿರ್ಲಕ್ಷಿಸಿರುವವರೇ ಆಗಿರುವುದರಿಂದ ಮತದಾರ ಯಾರಿಗೆ ಒಲಿಯಲಿದ್ದಾನೆ ಎನ್ನುವುದು ಕಷ್ಟ.

ನಿಪ್ಪಾಣಿ

ಇಲ್ಲಿ ಕಾಂಗ್ರೆಸ್‌ನ ಮಾಜಿ ಶಾಸಕ ಕಾಕಾಸಾಹೇಬ ಪಾಟೀಲ, ಜೆಡಿಎಸ್‌ನ ಸುಭಾಷ ಜೋಶಿ ಮಧ್ಯೆ ನೇರ ಸ್ಪರ್ಧೆ ಏರ್ಪಡಲಿದೆ. ಇವರಿಬ್ಬರ ಹಣಾಹಣಿ ಮಧ್ಯೆ ಬಿಜೆಪಿಯ ಶಶಿಕಲಾ ಜೊಲ್ಲೆಗೆ ಅದೃಷ್ಟ ಖುಲಾಯಿಸಿದರೂ ಅಚ್ಚರಿ ಪಡಬೇಕಿಲ್ಲ.

ಸವದತ್ತಿ

ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಸುಭಾಷ ಕೌಜಲಗಿ ಮತ್ತು ಬಿಜೆಪಿಯ ವಿಶ್ವನಾಥ ಮಾಮನಿ ನಡುವೆ ನೇರ ಸ್ಪರ್ಧೆ ಇದ್ದು ಯಾರು ಗೆಲ್ಲುತ್ತಾರೆಂಬುದು ಅಸ್ಪಷ್ಟವಾಗಿದೆ.

ಕುಡಚಿ

ಕುಡಚಿ ಕ್ಷೇತ್ರ ಕಾಂಗ್ರೆಸ್‌ನ ಮಾಜಿ ಶಾಸಕ ಶ್ಯಾಮ ಘಾಟಗೆಯ ಸ್ವಕ್ಷೇತ್ರವಾದರೂ ಇವರಿಗೆ ಪ್ರಬಲ ಸ್ಪರ್ಧೆ ನೀಡಲಿರುವ ಜೆಡಿಎಸ್‌ನ ಹಾಲಿ ಶಾಸಕ ಬಿ.ಸಿ. ಸರೀಕರ ಇಲ್ಲಿ ಬಹುಮತ ಪಡೆಯುವ ಸಾಧ್ಯತೆಯಿದೆ.

ಬೈಲಹೊಂಗಲ

ಇಲ್ಲಿ ಕಾಂಗ್ರೆಸ್‌ನ ಮಾಜಿ ಶಾಸಕ ಮಹಾಂತೇಶ ಕೌಜಲಗಿ ಮತ್ತು "ನಾನು ಯಡಿಯೂರಪ್ಪನ ಆಪ್ತ" ಎಂದೇ ಬಿಂಬಿಸಿಕೊಳ್ಳುವ ಬಿಜೆಪಿಯ ಹಾಲಿ ಶಾಸಕ ಜಗದೀಶ ಮೆಟಗುಡ್ ನಡುವೆ ನೇರ ಸ್ಪರ್ಧೆ ನಡೆಯಲಿದ್ದು ಯಾರು ಗೆದ್ದರೂ ಹಲವೇ ಮತಗಳಲ್ಲಿ ಗೆಲ್ಲುತ್ತಾರೆ ಎನ್ನಬಹುದು.

ಕಾಗವಾಡ

ಈ ಕ್ಷೇತ್ರದಲ್ಲಿ ಎದುರಾಳಿಗಳು ಪ್ರಬಲರಲ್ಲದ ಕಾರಣ ಬಿಜೆಪಿಯ ಹಾಲಿ ಶಾಸಕ ರಾಜು ಕಾಗೆ ಮತ್ತೆ ಗೆಲ್ಲಬಹುದು.

R B P LANKESH, Kannada Weekly Price Rs. 12/- 21-5-2008 RNI No. KARKAN2005/14648 Regd.No.KA/RNP/BGS/2030/2008-10

ಚುನಾವಣೆಯಲ್ಲಿ ಸಿನಿಮಾದವರ ಲಕ್ಕು, ಗಿಮಿಕ್ಕು

ಚುನಾವಣೆ 2008

ಕಳೆದ ಬಾರಿಯಂತೆ ಈ ಬಾರಿಯೂ ಸಿನಿಮಾರಂಗದ ಹಲವರು ಚುನಾವಣಾ ಕಣದಲ್ಲಿದ್ದಾರೆ. ಅವರೆಲ್ಲರಿಗೆ ಏನಾಗಬಹುದೆಂಬ ವಿಶ್ಲೇಷಣೆಯನ್ನು ಇಲ್ಲಿ ನೀಡುತ್ತಿದ್ದೇವೆ.

ಯೋಗವಿಲ್ಲದ ಯೋಗಿ

ಎರಡು ಬಾರಿ ಶಾಸಕನಾಗಿದ್ದ ಸಿ.ಪಿ. ಯೋಗೀಶ್ವರ್ ಈ ಬಾರಿಯೂ ಚನ್ನಪಟ್ಟಣದಿಂದ ಗೆದ್ದು ಹ್ಯಾಟ್ರಿಕ್ ಬಾರಿಸಲು ಪ್ರಯತ್ನಿಸುತ್ತಿದ್ದಾನೆ. ಆದರೆ ಆತ ಮತ್ತೆ ವಿಧಾನಸೌಧದ ಮೆಟ್ಟಲೇರುವ ಸಾಧ್ಯತೆ ಕಡಿಮೆ. ಆದ್ದರಿಂದ ಆತ ಮುಂದಿನ ಬಾರಿಯಾದರೂ ಗೆದ್ದೇ ಗೆಲ್ಲಬೇಕೆಂದು ಸದ್ಯದಲ್ಲೇ ಒಂದೆರಡು ಚಿತ್ರಗಳನ್ನು ನಿರ್ಮಿಸಿ ಅವುಗಳಲ್ಲಿ ತಾನೇ ಹೀರೋ ಆಗಿ ನಟಿಸುವ ಅಪಾಯ ಇದೆ. ರಾಜಕೀಯಕ್ಕೆ ಬೇಡವಾದ ವ್ಯಕ್ತಿ ಬಣ್ಣದ ಲೋಕಕ್ಕೆ ಮರಳುವುದು ಒಂದು ರೀತಿಯಲ್ಲಿ ಕನ್ನಡಿಗರ ಅದೃಷ್ಟವೂ ಹೌದು, ಕರ್ಮವೂ ಹೌದು.



ರೆಬೆಲ್‌ಗೆ ಟ್ರಬಲ್?



ಮೂರು ಬಾರಿ ಎಂಪಿಯಾದರೂ, ಪಾರ್ಲಿಮೆಂಟ್‌ನಲ್ಲಿ ಒಂದೇ ಒಂದು ಪ್ರಶ್ನೆ ಕೇಳದಿದ್ದರೂ, ಕೇಂದ್ರ ಮಂತ್ರಿಯಾದ ಅಂಬಿಯ ಕಣ್ಣು ಈಗ ವಿಧಾನಸೌಧದ ಮೇಲೆ ಬಿದ್ದಿದೆ. ಹಾಗೆ ನೋಡಿದರೆ ಅಂಬಿ ಮೊದಲ ಬಾರಿಗೆ ರಾಮನಗರ ಅಸೆಂಬ್ಲಿ ಕ್ಷೇತ್ರದಿಂದ ನಿಂತು ಸೋತ ನಂತರವೇ ಅವರು ದೆಹಲಿ ಕಡೆಗೆ ಮುಖ ಮಾಡಿದ್ದು. ಆದರೆ ಈಗ ತನಗೆ ದೆಹಲಿ ಬೇಡ, ಬೆಂಗಳೂರೇ ವಾಸಿ ಎಂಬ ತೀರ್ಮಾನಕ್ಕೆ ಬಂದಿರುವ ಅಂಬಿ ಶ್ರೀರಂಗಪಟ್ಟಣದಿಂದ ತಮ್ಮ ಅದೃಷ್ಟವನ್ನು ಪರೀಕ್ಷಿಸುತ್ತಿದ್ದಾರೆ. ಆದರೆ ಮತದಾರರೂ ಅಂಬಿ ರಾಜ್ಯ ರಾಜಕಾರಣದಲ್ಲೇ ಇರಲಿ ಎಂಬ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೋ ಇಲ್ಲವೋ ಎಂಬುದೇ ಡೌಟ್!

ಯಾಕೆಂದರೆ ಪ್ರತಿ ಬಾರಿ ಹೆಚ್ಚು ಶ್ರಮವಿಲ್ಲದೆ ಗೆದ್ದು ಬರುತ್ತಿದ್ದ ಅಂಬಿ ಈ ಬಾರಿ ಬೆವರಿಳಿಸಿ ಓಡಾಡುತ್ತಿದ್ದಾರೆ. ಅಷ್ಟೇ ಅಲ್ಲದೆ, ರಾತ್ರಿಯ ನಿದ್ದೆಯೂ ಇಲ್ಲದೆ ಪ್ರಚಾರದ ಕಾರ್ಯದಲ್ಲಿ ತೊಡಗಿದ್ದಾರೆ. ಇದಕ್ಕೆ ಕಾರಣ ಅವರು ಪ್ರಥಮ ಬಾರಿಗೆ ಪ್ರಬಲ ಪೈಪೋಟಿಯನ್ನು ಎದುರಿಸುತ್ತಿರುವುದು. ಮಂಡ್ಯದ ಗಂಡು ಅಂಬಿಯನ್ನು ಹೀಗೆ ಹೈರಾಣಾಗಿಸುತ್ತಿರುವವರು ರೈತ ಸಂಘದ ಮುಂದಾಳು ನಂಜುಂಡೇಗೌಡ.

ರೆಬೆಲ್ ಸ್ಟಾರ್ ಅಂಬಿಯ ಚಾರಿಷ್ಮ ಗೆಲ್ಲುತ್ತೋ ಅಥವಾ ರೈತರ ಪ್ರತಿನಿಧಿ ಗೆಲ್ಲುತ್ತಾರೋ ಎಂದು ಅರಿಯಲು ಇನ್ನೂ ಎರಡು ವಾರ ಕಾಯಬೇಕು.


ಕಿಲಕಿಲ ಉಮಾಶ್ರೀಗೆ ಕಿರಿಕಿರಿ



ಸಿನಿಮಾಗಳಲ್ಲಿ ತನ್ನ ವಿಚಿತ್ರವಾದ ಹಾವಭಾವ ಮತ್ತು ಡೈಲಾಗ್‌ಗಳಿಂದ ಎಲ್ಲರನ್ನು ರಂಜಿಸುವ ಕಲಾವಿದೆ ಉಮಾಶ್ರೀ ಈಗಾಗಲೇ ಎಂಎಲ್‌ಸಿಯಾಗಿ ಆರು ವರ್ಷ ವಿಧಾನಸೌಧದ ಮೊಗಸಾಲೆಯಲ್ಲಿ ಅಡ್ಡಾಡಿ ಅಧಿಕಾರದ ರುಚಿಯನ್ನು ಕಂಡಿದ್ದಾರೆ. ಆದರೆ ತಾನು ಮತ್ತೆ ಎಂಎಲ್‌ಸಿ ಆಗುವ ಸಾಧ್ಯತೆ ಇಲ್ಲ ಎಂದು ಗೊತ್ತಾದ ತಕ್ಷಣ ಆಕೆ ಎಂಎಲ್‌ಎ ಆಗಲು ಕಾಂಗ್ರೆಸ್ ಅಭ್ಯರ್ಥಿಯಾಗಿ ಚುನಾವಣೆಗೆ ನಿಂತಿದ್ದಾರೆ.

ಆದರೆ ಉಮಾಶ್ರೀಯವರ ದುರಾದೃಷ್ಟಕ್ಕೆ ಅವರು ಸ್ಪರ್ಧಿಸುತ್ತಿರುವ ತೇರದಾಳ್ ಕ್ಷೇತ್ರದ ಕಾಂಗ್ರೆ ಕಾರ್ಯಕರ್ತರೇ ಆಕೆಯ ವಿರುದ್ಧ ಪ್ರತಿಭಟಿಸುತ್ತಿದ್ದಾರೆ. ಆ ಕಾರಣದಿಂದ ಆಕೆಯ ಪಾಲಿಗೆ ವಿಜಯಲಕ್ಷ್ಮಿ ಒಲಿಯುವ ಸಾಧ್ಯತೆ ಕಡಿಮೆ. ಸದ್ಯಕ್ಕೆ ಉಮಾಶ್ರೀಯ ರಾಜಕೀಯ ಜೀವನ ಕವಲುದಾರಿಯಲ್ಲಿದೆ ಎಂಬುದು ಸತ್ಯ.

ಮಹೇಂದ್ರನ ಮರ್ಮ?



ಚಿತ್ರರಂಗದಲ್ಲಿ ಆರಕ್ಕೇರದ, ಮೂರಕ್ಕಿಳಿಯದ ಗುಂಪಿನಲ್ಲಿದ್ದ ಮಹೇಂದರ್ ಈಗ ರಾಜಕೀಯ ರಂಗದಲ್ಲಿ ನಾಲ್ಕು ಅಥವಾ ಐದಕ್ಕಾದರೂ ಏರಬಹುದಾ ಎಂದು ನೋಡಲು ಮೀಸಲು ಕ್ಷೇತ್ರವಾದ ಕೊಳ್ಳೇಗಾಲಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ಹೋಗಿದ್ದಾರೆ.

ಇವರಿಗಿರುವ ಪ್ಲಸ್ ಪಾಯಿಂಟ್ ಎಂದರೆ ಸಿನಿಮಾಗಳಲ್ಲಿ ಕಣ್ಣೀರ ಕೋಡಿ ಹರಿಸಿದ ಅವರ ತಾರಾ ಪತ್ನಿ ಶೃತಿ. ತನ್ನ ಪತಿಯನ್ನು ಗೆಲ್ಲಿಸಲು ಈಗ ಶೃತಿ ರಾತ್ರಿ ಹಗಲು ಪ್ರಚಾರ ಮಾಡಿ ಕೊಳ್ಳೇಗಾಲದ ಮತದಾರರನ್ನು ತಮ್ಮ ಮಾತು ಮತ್ತು ಸುಂದರವಾದ ನಗುವಿನಿಂದ ಮೋಡಿಮಾಡಲು ಯತ್ನಿಸುತ್ತಿದ್ದಾರೆ. ಅದೇನು ಅಚ್ಚರಿಯ ವಿಷಯವಲ್ಲ ಬಿಡಿ. ಯಾಕೆಂದರೆ ಸ್ವತಃ ಚಾರಿಷ್ಮಾ ಅಥವಾ ಜಾತಿ ಬೆಂಬಲ ಹೊಂದಿರದ ಮಹೇಂದರ್ ಮೊದಲಿನಿಂದಲೂ ತನ್ನ ಬಹುತೇಕ ಸಭೆ-ಸಮಾರಂಭಗಳಿಗೆ ಜನರನ್ನು ಸೇರಿಸಲು ಅವಲಂಬಿಸುತ್ತಿದ್ದದ್ದೇ ತನ್ನ ಪತ್ನಿ ಶೃತಿಯನ್ನು.

ಮಹೇಂದರ್‌ರವರ ಪ್ರಯತ್ನ ಕೊಳ್ಳೇಗಾಲದಲ್ಲಿ ಬ್ಯಾಲಟ್ ಬಾಕ್ಸ್ ಫುಲ್ ಆಗುತ್ತೋ ಅಥವಾ ಫ್ಲಾಪ್ ಶೋ ಆಗುತ್ತೋ ಕಾದುನೋಡಬೇಕಿದೆ.

ಸಹೋದರರ ಸವಾಲ್ ಎಂಬ ಫ್ಯಾಮಿಲಿ ಡ್ರಾಮಾ

ಸೊರಬದಲ್ಲಿ ಸಹೋದರರ ಸವಾಲ್ ಸಿನಿಮಾದ ಕತೆಯಂತೆ ಕುಮಾರ್ ಬಂಗಾರಪ್ಪ ಮತ್ತು ಮಧು ಬಂಗಾರಪ್ಪ ಪರಸ್ಪರ ಎದುರಾಳಿಗಳಾಗಿದ್ದಾರೆ. ಇಲ್ಲಿ ಯಾರು ಸೋತರೂ, ಯಾರು ಗೆದ್ದರೂ ಸಿನಿಮಾ ಉದ್ಯಮಕ್ಕೆ ಮಾತ್ರ ಯಾವುದೇ ನಷ್ಟವಿಲ್ಲ. ಒಂದು ವೇಳೆ ಮಾಜಿ ನಟ ಕುಮಾರ್ ಬಂಗಾರಪ್ಪ ಗೆದ್ದು ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಅವರು ಮತ್ತೊಮ್ಮೆ ಮಂತ್ರಿಯಾಗಬಹುದು. ಅಕಸ್ಮಾತ್ ಸಿನಿಮಾ ಸಂಗೀತ ಕ್ಯಾಸೆಟ್‌ಗಳ ವಿತರಕ ಮಧು ಗೆದ್ದರೆ ಆತ ಬರೀ ಶಾಸಕರಾಗಿ ಮೆರೆಯಬಹುದು.

ತೆಲುಗುಬಿಡ್ಡನ ದೊಂಬರಾಟ

ಡೈಲಾಗ್ ಕಿಂಗ್ ಸಾಯಿಕುಮಾರ್ ಬಾಗೇಪಲ್ಲಿಯಲ್ಲಿ ಬಿಜೆಪಿಯ ಅಭ್ಯರ್ಥಿಯಾಗಿ ಅಬ್ಬರದ ಪ್ರಚಾರದಲ್ಲಿ ತೊಡಗಿದ್ದಾರೆ. ಎರಡು ವರ್ಷದ ಹಿಂದೆ ಅಂದರೆ, ಚುನಾವಣಾ ನೀತಿ ಸಂಹಿತೆ ಜಾರಿ ಬರುವ ಮೊದಲೇ ಈ ಮನುಷ್ಯ ಆ ಕ್ಷೇತ್ರದಲ್ಲಿ ಸೀರೆ ಹಂಚಲು ಆರಂಭಿಸಿದ್ದ. ಅಂದರೆ ತಾನು ಮುಂದಿನ ಬಾರಿ ಶಾಸಕನಾಗಲೇಬೇಕು ಎಂಬ ಮಾಸ್ಟರ್ ಪ್ಲಾನ್ ಹಾಕಿಕೊಂಡೇ ತನ್ನ ದೊಂಬರಾಟವನ್ನು ಈ ತೆಲುಗು ಬಿಡ್ಡ ಶುರುಮಾಡಿದ್ದ.

ಕನ್ನಡ ಚಿತ್ರರಂಗದಲ್ಲಿ ನಾಯಕನಾಗಿ ಮಿಂಚಿದ ಮೊದಲ ಪರಭಾಷೆಯ ಈ ನಾಯಕನಟ ಬಾಗೇಪಲ್ಲಿಯಲ್ಲಿ ಕಾಂಗ್ರೆಸ್‌ನ ಸಂಪಂಗಿಗೆ ಬಿರುಸಿನ ಪೈಪೋಟಿ ನೀಡುತ್ತಿದ್ದಾರೆ. ಹೊಡಿ, ಬಡಿ, ಕಡಿ ಸೂತ್ರದ ಚಿತ್ರಗಳಿಗೆ ಮುನ್ನುಡಿ ಬರೆದ ಈ ಬೊಬ್ಬಿಲಿಪುಲಿ ಶಾಸಕನಾಗಿ ಆಯ್ಕೆಯಾದರೆ ಆತನ ಅಂತಹ ಡೈಲಾಗ್‌ಗಳೂ ವಿಧಾನಸೌಧದ ಪಡಸಾಲೆಯಲ್ಲಿ ಕೇಳಿಬರುವ ದುರಂತವಂತೂ ಕನ್ನಡಿಗರ ಮುಂದಿದೆ.

ನವರಸನ ಹತ್ತನೇ ವರಸೆ



ಅತ್ತೂ, ಕರೆದೂ, ಗೋಳಾಡಿ, ಚೀರಾಡಿ ಕೊನೆಗೂ ಕಾಂಗ್ರೆ ಟಿಕೆಟ್ ಗಿಟ್ಟಿಸಿದ ನವರಸನಾಯಕ ಜಗ್ಗೇಶ್ ತನ್ನ ಹತ್ತನೇ ಅವತಾರದಲ್ಲಿ ತುರುವೇಕೆರೆ ಮತದಾರರ ಮುಂದೆ ಮತ್ತೆ ಹಾಜರಾಗಿದ್ದಾರೆ. ಕಳೆದ ಬಾರಿ ಜಗ್ಗೇಶ್ ಅಲ್ಲಿ ಇಡುಗಂಟು ಕಳೆದುಕೊಂಡಿದ್ದರು. ಆದರೆ ಅದರಿಂದ ಧೃತಿಗೆಡದ ಜಗ್ಗೇಶ್ ಕಳೆದ ಎರಡು ವರ್ಷಗಳಿಂದ ಸ್ಥಳೀಯ ಜನರೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಂಡು ಬಂದಿದ್ದಾರೆ. ಹೀಗಾಗಿ ಕಳೆದ ಬಾರಿಗಿಂತ ಈ ಬಾರಿ ಹೆಚ್ಚು ಮತ ಪಡೆಯುವುದರ ಬಗ್ಗೆ ಸಂಶಯವಿಲ್ಲ, ಆದರೂ ಜಗ್ಗೇಶ್ ಗೆಲ್ಲುವುದು ಕಷ್ಟ.

ಯಡ್ಡಿಯ ಎಡಗೈ ಮತ್ತು ಬಲಗೈ

ಮುಖ್ಯಮಂತ್ರಿ ಚಂದ್ರು ಮತ್ತು ಶ್ರೀನಾಥ್ ಎಂಬ ನಟಭಯಂಕರರು ಚುನಾವಣಾ ರಂಗದಲ್ಲಿ ಸ್ಪರ್ಧಿಸದಿದ್ದರೂ ಬಿಜೆಪಿ ಪರ ಪ್ರಚಾರದಲ್ಲಿ ತೊಡಗಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬಂದರೆ ತಮಗೆ ಮಂತ್ರಿ ಸ್ಥಾನ ಸಿಗುತ್ತದೆ ಎಂಬ ಭ್ರಮೆ ಇವರಿಗಿರುವಂತಿದೆ. ಅಷ್ಟೇ ಅಲ್ಲ, ಹಾಗಂತ ತಮ್ಮ ಆಪ್ತೇಷ್ಟರಲ್ಲಿ ಹೇಳಿಕೊಂಡು ತಿರುಗಾಡುತ್ತಿದ್ದರಂತೆ. ಶ್ರೀನಾಥ್ ಯಡ್ಡಿಯ ಬಲಗೈ ಥರ ಓಡಾಡುತ್ತಿದ್ದರೆ, ಸದ್ಯಕ್ಕೆ ಯಡ್ಡಿಯ ಅವಕೃಪೆಗೆ ಚಂದ್ರು ಒಳಗಾಗಿದ್ದರೂ ಅಲ್ಲಲ್ಲಿ ಓಡಾಡುತ್ತಾ ಯಡ್ಡಿಯನ್ನು ಒಲಿಸಿಕೊಳ್ಳುವ ಯತ್ನದಲ್ಲಿದ್ದಾರೆ. ಇವರ ಜೊತೆಗೆ ಮೊನ್ನೆ ಮೊನ್ನೆ ಬಿಜೆಪಿಗೆ ಸೇರಿದ ಮದನ್ ಪಟೇಲ್ ಕೂಡಾ ತಾನೇನು ಕಡಿಮೆ ಎಂಬಂತೆ ಯಡ್ಯೂರಪ್ಪನ ಹಿಂದೆ ಮುಂದೆ ಅಡ್ಡಾಡುತ್ತಿದ್ದಾನೆ. ಯಡ್ಡಿಗಾಗಲೀ, ಬಿಜೆಪಿ ಪಕ್ಷಕ್ಕಾಗಲೀ ಗೆಲುವು ಮರೀಚಿಕೆಯ ಎಂಬಂತಹ ಪರಿಸ್ಥಿತಿ ಇರುವಾಗ ಇವರದ್ದು ನಿಜವಾಗಲೂ ಹಗಲುಗನಸ್ಸಲ್ಲದೆ ಮತ್ತೇನು.

ಗೆಲುವಿನ ಮಳೆ?



'ಮುಂಗಾರು ಮಳೆ'ಯ ಯಶಸ್ಸನ್ನೇ ಬಂಡವಾಳ ಮಾಡಿಕೊಂಡಿರುವ ಆ ಚಿತ್ರದ ನಿರ್ಮಾಪಕ ಈ. ಕೃಷ್ಣಪ್ಪ ಕೂಡಾ ಯಲಹಂಕದಲ್ಲಿ ಚುನಾವಣೆಗೆ ನಿಂತು ತಮ್ಮ ಅದೃಷ್ಟವನ್ನು ಪರೀಕ್ಷಿಸುತ್ತಿದ್ದಾರೆ. ಹಾಗೆ ನೋಡಿದರೆ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಸಿನಿಮಾದ ಬಹಳಷ್ಟು ಮಂದಿ "ಕುಮಾರಣ್ಣ, ಕುಮಾರಣ್ಣ" ಎಂದು ಅವರ ಬೆನ್ನ ಹಿಂದೆ ಓಡಾಡಿದ್ದರು. ಆದರೆ ಚುನಾವಣೆ ಘೋಷಣೆಯಾದಾಗ ಟಿಕೆಟ್‌ಗಾಗಿ ಕೃಷ್ಣಪ್ಪರವರನ್ನು ಹೊರತುಪಡಿಸಿದರೆ ಬೇರೆ ಯಾರೂ ಕುಮಾರಣ್ಣನ ಬಳಿ ಸುಳಿಯಲಿಲ್ಲ. ಹೀಗಾಗಿ ಜೆಡಿಎಸ್‌ನಿಂದ ಚುನಾವಣೆಗೆ ನಿಂತ ಏಕೈಕ ಸಿನಿಮಾ ವ್ಯಕ್ತಿಯೆಂದರೆ ಈ. ಕೃಷ್ಣಪ್ಪ. ಅವರು ಸ್ಪರ್ಧಿಸುತ್ತಿರುವ ಯಲಹಂಕ ಕ್ಷೇತ್ರದಲ್ಲಿರುವ ಮೂವರು ಅಭ್ಯರ್ಥಿಗಳೂ ಮೊದಲ ಬಾರಿ ಸ್ಪರ್ಧಿಸುತ್ತಿರುವುದರಿಂದ ಸ್ಟಾರ್ ವ್ಯಾಲ್ಯೂ ಹೊಂದಿರುವ ಕೃಷ್ಣಪ್ಪ ಗೆಲ್ಲುವ ಸಾಧ್ಯತೆ ಇದೆ.

■ ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44